ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್ ಪದವಿಯ ನಿಬಂಧ

"ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು"

(ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ)

ಸಂಶೋಧನ ವಿದ್ಯಾರ್ಥಿ

ಸುರೇಶ. ಆರ್

ನೋಂದಣಿ ಸಂಖ್ಯೆ: KVMBKS-00429

ಮಾರ್ಗದರ್ಶಕರು

ಡಾ|| ಸಿ.ಬಿ. ಅನ್ನಪೂರ್ಣಮ್ಮ

ಣೆ ಉಪನ್ಯಾಸಕರು, ಕನ್ನಡ ವಿಭಾಗ,

ಪದವಿ ಕಾಲೇಜು, ಬಸವನಗುಡಿ

ಬೆಂಗಳೂರು.

ಕಾವ್ಯಮಂಡಲ

ನಂ. ೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ,

ಬಸವನಗುಡಿ, ಬೆಂಗಳೂರು – ೫೬೦೦೦೪

೨೦೦೯-೨೦೧೦

8101

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್ ಪದವಿಯ ನಿಬಂಧ

"ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು"
(ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ)

ಸಂಶೋಧನ ವಿದ್ಯಾರ್ಥಿ
ಸುರೇಶ. ಆರ್

ಮಾರ್ಗದರ್ಶಕರು
ಡಾ॥ ಸಿ.ಬಿ. ಅನ್ನಪೂರ್ಣಮ್ಮ
ಆಯ್ಕೆ ಶ್ರೇಣಿ ಉಪನ್ಯಾಸಕರು, ಕನ್ನಡ ವಿಭಾಗ,
ನ್ಯಾಷನಲ್ ಪದವಿ ಕಾಲೇಜು, ಬಸವನಗುಡಿ
ಬೆಂಗಳೂರು.

ಕಾವ್ಯಮಂಡಲ
ನಂ. ೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦೦೦೪

೨೦೦೯–೨೦೧೦

ಪ್ರಮಾಣ ಪತ್ರ

'ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು' (ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ) ಎಂಬ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಡಾ॥ ಸಿ.ಬಿ.ಅನ್ನಪೂರ್ಣಮ್ಮರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧ ವಿಷಯ ಇದುವರೆಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Suresha R

ದಿನಾಂಕ : 9.9.2010
ಸ್ಥಳ : ಬೆಂಗಳೂರು

(ಸುರೇಶ.ಆರ್)
ಸಂಶೋಧನಾ ವಿದ್ಯಾರ್ಥಿ
ಕಾವ್ಯಮಂಡಲ
ನಂ. ೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦೦೦೦೪

810A

ದೃಢೀಕರಣ ಪತ್ರ

ಸುರೇಶ.ಆರ್ ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **'ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು'** (ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ) ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯ ಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೯-೯-೨೦೧೦
ಸ್ಥಳ : ಬೆಂಗಳೂರು

ಮಾರ್ಗದರ್ಶಕರು

ಅನ್ನಪೂರ್ಣಮ್ಮ

(ಡಾ|| ಸಿ.ಬಿ. ಅನ್ನಪೂರ್ಣಮ್ಮ)
ಆಯ್ಕೆಶ್ರೇಣಿ ಉಪನ್ಯಾಸಕರು, ಕನ್ನಡ ವಿಭಾಗ
ನ್ಯಾಷನಲ್ ಪದವಿ ಕಾಲೇಜು, ಬಸವನಗುಡಿ
ಬೆಂಗಳೂರು.

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ವೈವಿಧ್ಯತೆಯಲ್ಲಿ ಏಕಸೂತ್ರತೆಯೇ ಭಾರತದ ಪ್ರಧಾನ ಲಕ್ಷಣ ಎಂಬ ಮಾತು ನಮ್ಮ ದೇಶದ ಹಿರಿಮೆಗೆ ಒಂದು ಕಾರಣವಾಗಿದೆ. ಈ ವಿವಿಧತೆಯೇ ಬಹುಸಂಸ್ಕೃತಿ. ಈ ಬಹುಸಂಸ್ಕೃತಿಯ ಅನೇಕ ಸಮುದಾಯಗಳು ಒಂದು ಕಾಲದಲ್ಲಿ ಭಾರತದ ಮೂಲ ಸಂಸ್ಕೃತಿಗಳಾಗಿದ್ದು ಇಂದು ಪ್ರಧಾನ ನೆಲೆಗೆ ಬರಲು ಸಾಧ್ಯವಾಗದೇ ಅಲಕ್ಷಿತ ಸಮುದಾಯಗಳಾಗಿರುವುದು ವಿಪರ್ಯಾಸ ಸಂಗತಿಯಾಗಿದೆ. ಭಾರತದ ಪುರಾತನ ಇತಿಹಾಸವನ್ನು ಪರಿಶೀಲಿಸಿದರೆ ಕ್ರಿ.ಪೂ. ೨೫೦೦ ವರ್ಷಗಳ ಹಿಂದೆ ಭಾರತದ ಮೂಲ ನಿವಾಸಿಗಳಾದ ದ್ರಾವಿಡರು ಜಗತ್ತಿನ ಮಾತೃ ಪ್ರಧಾನ ಸಂಸ್ಕೃತಿಯನ್ನು, ಮಾನವೀಯ ಮೌಲ್ಯಗಳ ನಿಯಮಗಳನ್ನು ಒಳಗೊಂಡ ನಾಗರೀಕತೆಯೊಂದನ್ನು ಸ್ಥಾಪಿಸಿದ್ದರು. ಅದುವೇ 'ಸಿಂಧೂ ನದಿ' ನಾಗರೀಕತೆ. ಈ ನಾಗರೀಕತೆಯ ಸಂಸ್ಥಾಪಕರಾದ ಮೂಲ ನಿವಾಸಿ ಜನಾಂಗವೇ ದ್ರಾವಿಡರು. ಈ ಮೂಲ ನಿವಾಸಿ ಜನಾಂಗಕ್ಕೆ ಸೇರಿದ ರಾಜರುಗಳು ಜಗತ್ತಿಗೆ ಮಾದರಿಯಾದ ಪ್ರಜಾಸತ್ತಾತ್ಮಕ ಸಮಾಜವನ್ನು ನಿರ್ಮಾಣ ಮಾಡಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ತತ್ವಗಳಿಗೆ ಈ ನಾಗರೀಕತೆ ಮಾದರಿಯಾಗಿತ್ತು.

ಕ್ರಿ.ಪೂ ೧೮೦೦ ರಲ್ಲಿ ಮಧ್ಯ ಏಶಿಯಾದಿಂದ ಅಲೆಮಾರಿಗಳಾಗಿ ಬಿಳಿ ಬಣ್ಣದ ಆರ್ಯರು ಬಂದರು. ಸಂಪದ್ಭರಿತ ಮತ್ತು ವ್ಯವಸ್ಥಿತ ನಾಗರೀಕತೆಯನ್ನು ಕಂಡು ಇಲ್ಲೇ ನೆಲೆನಿಲ್ಲಬೇಕೆಂದು ತೀರ್ಮಾನಿಸಿದರು. ಸಮಾನತೆಯಿಂದ ಬದುಕುತ್ತಿದ್ದ ಮೂಲನಿವಾಸಿಗಳ ನಡುವೆ ಭಿನ್ನಾಭಿಪ್ರಾಯಗಳನ್ನು, ವೈರುಧ್ಯಗಳನ್ನು, ಸೃಷ್ಟಿಮಾಡಿ ಮೂಲನಿವಾಸಿಗಳ ಮೇಲೆ ಅಧಿಕಾರ ಚಲಾಯಿಸಲು ಮತ್ತು ಅವರನ್ನು ಶತಮಾನಗಳ ಕಾಲ ಗುಲಾಮಗಿರಿಗೆ ತಳ್ಳಲು ಅನೇಕ ಕಪಟ ಧಾರ್ಮಿಕ ಕಥೆಗಳನ್ನು ಹೆಣೆದು ಅವು ತಮಗೆ ನೇರವಾಗಿ ಬಂದಿರುವ ದೈವವಾಣಿ ಎಂದು ನಂಬಿಸಿದರು.

ಆ ಕಾಲಘಟ್ಟದಿಂದ ಇಂದಿನವರೆಗೆ ಜಗತ್ತು ಅನೇಕ ಬದಲಾವಣೆಗಳನ್ನು ಕಂಡಿದೆ. ಸಮಾಜ ಸಾಕಷ್ಟು ಸ್ಥಿತ್ಯಂತರಗಳನ್ನು ಕಂಡಿದೆ. ಆದರೆ ಆರ್ಯರ ಆಕ್ರಮಣಕಾರೀ ನೀತಿಯಿಂದುಂಟಾದ ವೈರುಧ್ಯ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಇನ್ನು ಒಂದೆರಡು

ದಶಕಗಳಲ್ಲಿ ಜಗತ್ತಿನ ಅತ್ಯಂತ ಮುಂದುವರಿದ ರಾಷ್ಟ್ರಗಳಲ್ಲಿ ಭಾರತವೂ ಒಂದೆನಿಸುತ್ತದೆ ಎಂಬ ಸಂಭ್ರಮ ಇಂದಿನ ಪ್ರಮುಖ ಸುದ್ದಿಗಳಲ್ಲೊಂದಾಗಿದೆ. ಸಮಕಾಲೀನ ಸಂದರ್ಭದಲ್ಲಿ ಅವಲೋಕನ ಮಾಡಿದರೆ ಇಲ್ಲಿನ ವೈರುಧ್ಯಗಳು ಕಣ್ಣು ಮುಂದೆ ನಿಲ್ಲುತ್ತವೆ. ಕಂಪ್ಯೂಟರ್ ಯುಗ, ಆಧುನಿಕ ಯುಗ, ಪ್ರಕಾಶಿಸುತ್ತಿರುವ ಯುಗ ಎಂದು ಒಂದು ಕಡೆ ಕರೆಯುತ್ತ ಮತ್ತೊಂದು ಕಡೆ ಪಟ್ಟಭದ್ರರು ಕಂದಾಚಾರ, ಜಾತಿವಾದ, ಕೋಮುವಾದ, ಭಯೋತ್ಪಾದನೆ ಮತ್ತು ಮತಾಂಧತೆ ಮೂಲಕ ಸಮಾಜವನ್ನು ವಂಚಿಸುವ, ಅದರಲ್ಲೂ ಕೆಲವು ನಿರ್ದಿಷ್ಟ ಸಮುದಾಯಗಳನ್ನು ಶೋಷಿಸುತ್ತಾ ಬರುತ್ತಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಈ ದೇಶದ ಮೂಲ ನಿವಾಸಿಗಳಾದ ಬಹುಪಾಲು ಜನ ಶತಶತಮಾನಗಳಿಂದ ಮನುವಾದಿಗಳ ಆಕ್ರಮಣಕ್ಕೆ ಸಿಲುಕಿ ವಿದ್ಯೆ, ಆಸ್ತಿ, ಅಧಿಕಾರವನ್ನು ಪಡೆಯಲು ಸಾಧ್ಯವಾಗದೆ ತಾವು ಹುಟ್ಟಿಬೆಳೆದ ನೆಲೆಯಲ್ಲಿಯೇ ಗುಲಾಮರಾಗಿ ಜೀವನ ಸಾಗಿಸುತ್ತಿದ್ದಾರೆ. ಮನುವಾದಿಗಳು ಮನುಷ್ಯ-ಮನುಷ್ಯರ ನಡುವೆ ಭೇದವನ್ನು ಸೃಷ್ಟಿಮಾಡಿ; ಅನೀತಿ, ಅಧರ್ಮ, ಮೂಢನಂಬಿಕೆ ಯಜ್ಞ – ಯಾಗಾದಿಗಳನ್ನೊಳಗೊಂಡ ಭಾರತವನ್ನು ರೂಪಿಸಿ ತಮ್ಮ ನಿಲುವುಗಳನ್ನು ಭದ್ರಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ದೇಶದ ಅಭಿವೃದ್ಧಿ ಎಂದರೆ ಕೇವಲ ಕೆಲವೇ ಮಂದಿಯ ಅಭಿವೃದ್ಧಿಯೇ? ಸಮಸ್ತ ಜನತೆಯ ಸರ್ವಾಂಗೀಣ ಅಭಿವೃದ್ಧಿಯೇ ದೇಶದ ಒಟ್ಟಾರೆ ಅಭಿವೃದ್ಧಿ. ಆದರೆ ಈ ಪರಿಧಿಯೊಳಗೆ ಪ್ರವೇಶಪಡೆಯದ ಎಷ್ಟೋ ಸಮುದಾಯಗಳು ಭಾರತದಲ್ಲಿ ಇರುವುದೇ ವೈರುಧ್ಯ ಸಂಗತಿಯಾಗಿದೆ. ಹಾಗಾದರೆ ವೈದಿಕ ಸಂಪ್ರದಾಯದ ಈ ಜೀವ ವಿರೋಧಿ ನಿಲುವುಗಳನ್ನು ಯಾರು ಪ್ರಶ್ನಿಸಲಿಲ್ಲವೇ? ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಾಲ ಕಾಲಕ್ಕೆ ಅಲ್ಲಲ್ಲಿ ಪ್ರತಿಭಟನೆಗಳು ನಡೆದಿರುವುದು ಕಂಡು ಬರುತ್ತದೆ. ಈ ವೈದಿಕ ಸಂಪ್ರದಾಯವು ಪ್ರತಿಭಟನೆಯನ್ನು ಮೆಟ್ಟಿನಿಲ್ಲುವಲ್ಲಿ ಯಶಸ್ವಿಯಾಗಿದೆ. ಡಾ॥ದೇವಿಪ್ರಸಾದ್‌ರವರು ಹೇಳುವಂತೆ 'ಪೂರ್ಣಕಶ್ಯಪನೆಂಬ ವ್ಯಕ್ತಿ ತಪಸ್ಸು ಮತ್ತು ಯಜ್ಞಯಾಗಾದಿಗಳು ಅಸಂಬದ್ಧವಾದವು ಎಂದು ಹೇಳಿ ಅಂದಿನ ಕಾಲದ ಘೋರವ್ಯವಸ್ಥೆಯಾದ ಜೀತಪದ್ಧತಿಯ ವಿರುದ್ಧ ಹೋರಾಡಿದನು. ಆತನ ಪ್ರಗತಿಪರತೆಯನ್ನು ಸಹಿಸದ ವೈದಿಕ ಮನಸ್ಸುಗಳು ಅವನನ್ನು ಕೊಲೆಮಾಡಿ, ಆತ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಎಂದು ಬಿಂಬಿಸುವ ಮೂಲಕ ಅಪಪ್ರಚಾರ ಮಾಡಿದವು'.[೧]

---

[೧] ಬಿ.ವಿ. ವೀರಭದ್ರಪ್ಪ, : ಧರ್ಮ ಮತ್ತು ವೈಚಾರಿಕತೆ, ನವಕರ್ನಾಟಕ ಪ್ರಕಾಶನ, ಪುಟ-೯.

ಈ ಅನೀತಿಯ ವಿರುದ್ಧ ಬುದ್ಧರು ಬಂಡಾಯ ಹೂಡಿದರು. ತಮ್ಮ ನಿರ್ಮಲ ಪ್ರಜ್ಞೆ, ಕರುಣೆ, ಶೀಲದಿಂದ ಇಡೀ ಸಮಾಜದ ಆಲೋಚನಾ ದಿಕ್ಕನ್ನೇ ಬದಲಾಯಿಸಿದರು. 'ಕಾರಣ ಮತ್ತು ಪರಿಣಾಮ' ಎಂಬ ಸಹಜ ಸಿದ್ಧಾಂತದ ಮೇಲೆ ಧರ್ಮ ಸ್ಥಾಪನೆ ಮಾಡಿದರು. ಧರ್ಮ ಇರುವುದು ಮನುಷ್ಯನಿಗಾಗಿ, ಮನುಷ್ಯ ಇರುವುದು ಧರ್ಮಕ್ಕಾಗಿ ಅಲ್ಲ ಎಂದು ಹೇಳಿದರು. ವೈದಿಕ ವ್ಯವಸ್ಥೆಯ ಶೋಷಣೆಯ ಮಾರ್ಗವಾದ ದೇವರು, ಆತ್ಮ, ಪುರೋಹಿತರನ್ನು ಧಿಕ್ಕರಿಸಿ ಎಂದು ಜನರಲ್ಲಿ ಜಾಗೃತಿ ಮೂಡಿಸಿದರು. ೧೦ನೇ ಶತಮಾನದಲ್ಲಿ ಪಂಪ ತನ್ನ ಸಾಹಿತ್ಯದ ಮೂಲಕ ಸಮಾಜವನ್ನು ಜಾಗೃತಗೊಳಿಸಿದನು 'ಮನುಜಕುಲಂ ತಾನೊಂದೇ ವಲಂ' ಎಂದು ಹೇಳಿ ಸಂಪ್ರದಾಯಸ್ಥ ಮನಸ್ಸುಗಳಿಗೆ ಚುರುಕು ಮುಟ್ಟಿಸಿದನು.

ವೈದಿಕ ಸಂಪ್ರದಾಯದಿಂದ ಸೃಷ್ಟಿಯಾದ ಜಾತಿ ಪದ್ಧತಿ, ಧಾರ್ಮಿಕ ಕಂದಾಚಾರದ ವಿರುದ್ಧ ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಮಾದಾರಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಹೊಲೇರ ಹೊನ್ನಯ್ಯ ಮುಂತಾದ ಕೆಳವರ್ಗದ ಶರಣರಿಂದ ವಚನ ಚಳುವಳಿ ಪ್ರತಿಭಟನೆ ನಡೆಸಿತು. ಬಸವಣ್ಣನವರು ಈ ವಚನ ಚಳುವಳಿಯ ನೇತೃತ್ವ ವಹಿಸಿದರು. ಎಲ್ಲಾ ಜಾತಿ ವರ್ಗಗಳನ್ನು ಸೇರಿಸಿಕೊಂಡು ಸಮಾಜ ಪರಿವರ್ತನೆಯ ಚಳುವಳಿಯನ್ನು ಪ್ರಾರಂಭಿಸಿದರು. ಮನುವಾದಿ ಸಾಮಾಜಿಕ ಅಸಮಾನ ವ್ಯವಸ್ಥೆಯ ಮೌಢ್ಯ ಮತ್ತು ವಿಕೃತ ಸಂಪ್ರದಾಯಗಳ ವಿರುದ್ಧ ಸಾವಿರಾರು ವಚನಗಳನ್ನು ರಚಿಸಿ ಜನರಲ್ಲಿ ಜಾಗೃತಿ ಮೂಡಿಸಿದರು. ನಂತರ ಕೀರ್ತನಕಾರರು ವೈದಿಕರ ಅನೀತಿಗಳನ್ನು, ಡಾಂಭಿಕತೆಯನ್ನು ಪದಕಟ್ಟಿಹಾಡಿ ಮಾನವೀಯ ಮೌಲ್ಯಗಳನ್ನು ಸಾರಿದರು. ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯ ಏನಾದರೂ ಬಲ್ಲಿರಾ? ಎಂಬ ಕನಕದಾಸರ ಕೀರ್ತನೆ ಇದಕ್ಕೆ ಸಾಕ್ಷಿಯಾಗುತ್ತದೆ.

೧೮ನೇ ಶತಮಾನದಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ರವರು ತಮ್ಮ ಚಿಕ್ಕವಯಸ್ಸಿನಲ್ಲೇ ಈ ಬ್ರಾಹ್ಮಣಶಾಹಿ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಿಡಿದೆದ್ದರು. ಮಹಾತ್ಮ ಪುಲೆರವರು ಶೂದ್ರ ಅತಿಶೂದ್ರರು ಮಾನಸಿಕ ಗುಲಾಮಗಿರಿಯಿಂದ ಹೊರಬರಬೇಕಾದರೆ ಅವರಿಗೆ ಅಕ್ಷರದ ಅರಿವಿನ ಅಗತ್ಯವಿದೆ ಎಂಬುದನ್ನು ಮನಗಂಡು ಅಸ್ಪೃಶ್ಯ ಹೆಣ್ಣು ಮಕ್ಕಳಿಗೆ ಶಾಲೆಗಳನ್ನು ತೆರೆದರು. 'ಸತ್ಯಶೋಧಕ ಸಮಾಜ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಆ ಸಂಘಟನೆಯ ಮೂಲಕ ವೇದಗಳನ್ನು, ಚಾತುರ್‌ವರ್ಣ ವ್ಯವಸ್ಥೆಯನ್ನು ಮತ್ತು ಅಸ್ಪೃಶ್ಯತೆಯನ್ನು ದಿಕ್ಕರಿಸುವ ಕಾರ್ಯಕ್ರಮವನ್ನು ಹಾಕಿದರು. ಮತ್ತು ವಿದವಾ ವಿವಾಹವನ್ನು ಪ್ರೋತ್ಸಾಹಿಸಿದರು. ಈ ರೀತಿ ಬ್ರಾಹ್ಮಣ–ಬನಿಯಾಗಳ

ವಿರುದ್ಧ ಹೋರಾಟ ನಡೆಸಿದ ಮಹಾತ್ಮ ಜ್ಯೋತಿಬಾ ಫುಲೆಯವರು ಬ್ರಾಹ್ಮಣೇತರ ಸಾಮಾಜಿಕ ಕ್ರಾಂತಿಯನ್ನು ಹುಟ್ಟು ಹಾಕಿದ ಮೊದಲಿಗರಾದರು.

ತಮಿಳು ನಾಡಿನಲ್ಲಿ ಪೆರಿಯಾರ್ ರಾಮಸ್ವಾಮಿ ನಾಯಕರ್ ಅವರು ಸ್ವಾಭಿಮಾನ ಚಳುವಳಿಯನ್ನು ಪ್ರಾರಂಭಿಸಿದರು. ಆರ್ಯ ಪ್ರಣೀತವಾದ ವೈದಿಕಶಾಹಿ ಸಂಪ್ರದಾಯದ ವಿರುದ್ಧ 'ದ್ರಾವಿಡ ಕಳಗಂ' ಎಂಬ ಸಂಘಟನೆಯನ್ನು ಪ್ರಾರಂಭಿಸಿ ದೇವರು, ಹಿಂದೂ ಧರ್ಮ, ಬ್ರಾಹ್ಮಣರುಗಳ ಢೋಂಗಿತನದ ವಿರುದ್ಧ ಜನತೆಯನ್ನು ಸಂಘಟಿಸಿದರು. ದಕ್ಷಿಣ ಭಾರತದಾದ್ಯಂತ ಬ್ರಾಹ್ಮಣೇತರ ಚಳುವಳಿಯನ್ನು ಪ್ರಾರಂಭಿಸಿ ದ್ರಾವಿಡ ಜನಾಂಗದಲ್ಲಿ ಸ್ವಾಭಿಮಾನದ ಅಲೆ ಎಬ್ಬಿಸಿದರು. ಭಾಷೆ, ಬಣ್ಣ ಮತ್ತು ಆಹಾರದಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸಿದರು. ಮೂಲ ನಿವಾಸಿಗಳ ಮೂಲ ಸಂಸ್ಕೃತಿಗೆ ಚೈತನ್ಯ ತುಂಬಿದರು.

ಡಾ. ಅಂಬೇಡ್ಕರ್‌ರವರು ಶೋಷಿತ ಸಮುದಾಯದಿಂದ ಬಂದವರು. ಮಧ್ಯಪ್ರದೇಶದ ಮೌಹ್ವ ಎಂಬಲ್ಲಿ ರಾಂಜೀ ಸಕ್ಪಾಲ್ ಮತ್ತು ಭೀಮಬಾಯಿಯವರ ಮಗನಾಗಿ ಜನಿಸಿ ಸಕಲ ವಿದ್ಯೆ ಕಲಿತು ಮನುವಾದಿಗಳು ಸೃಷ್ಟಿಸಿದ ಅಸಮಾನತೆಯ ವಿರುದ್ಧ ಹೋರಾಡಿದರು. ಸರ್ವಜನಾಂಗದ ಸಮಾನತೆಗಾಗಿ ಸಂವಿಧಾನವನ್ನು ರಚಿಸಿದರು. ದೇವರು, ಧರ್ಮ, ಜಾತಿ ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಕಾನೂನಿನ ಮೂಲಕ ತೊಡೆದು ಹಾಕಲು ಪ್ರಯತ್ನಿಸಿದರು. ಸರ್ವ ಸಮಾನತೆಯ ಸಮಾಜವನ್ನು, ಶೋಷಣೆ ಮುಕ್ತ ಸಂಸ್ಕೃತಿಯನ್ನು ನಿರ್ಮಿಸುವ ಚಿಂತನ ಕ್ರಮವನ್ನು ರೂಪಿಸಿದರು. ಧ್ವನಿ ಕಳೆದುಕೊಂಡು ಬದುಕುತ್ತಿರುವ ಮೂಲ ನಿವಾಸಿ ಬಹುಸಂಖ್ಯಾತರಿಗೆ ಜೀವ ನೀಡುವ ಪ್ರಯತ್ನಮಾಡಿದರು.

ಈ ಎಲ್ಲ ಸಮಾಜ ಪರಿವರ್ತಕರ ನಿಲುವುಗಳು ಕಂಡುಕೊಂಡ ಮಾರ್ಗಗಳು, ಕಟ್ಟಿಕೊಟ್ಟ ಸಿದ್ಧಾಂತಗಳು ಹೊಸ ತಲೆ ಮಾರಿನ ಶೋಷಿತ ನೆಲೆಯಿಂದ ಬಂದ ವಿದ್ಯಾವಂತ ಸಮುದಾಯಕ್ಕೆ ಹೊಸ ಚಿಂತನ ಕ್ರಮವನ್ನು, ಸಮಾಜವನ್ನು ಬೇರೆಯದೆ ರೀತಿಯಲ್ಲಿ ನೋಡುವ ಪರಿಕಲ್ಪನೆಯನ್ನು ಮೂಡಿಸಿದವು. ಆಧುನಿಕ ಭಾರತದ ಇತಿಹಾಸವು ಜಗತ್ತಿನ ಇತಿಹಾಸದಂತೆ ತೀವ್ರ ಬದಲಾವಣೆಯನ್ನು ಕಂಡ ಕಾಲ. ಬ್ರಿಟೀಷರ ಆಡಳಿತದ ಕಾರಣದಿಂದಾಗಿ ಅವರು ರೂಪಿಸಿದ ಕಾನೂನು, ಹಾಗೂ ಶಿಕ್ಷಣದ ವಿಸ್ತಾರ, ಮುದ್ರಣದ ವ್ಯಾಪಕತೆ, ಪತ್ರಿಕೆಗಳ ಪ್ರಾರಂಭ, ರೈಲು ಸಾರಿಗೆ, ರಸ್ತೆ ಸಾರಿಗೆ, ವಿಮಾನ ಸಾರಿಗೆ, ಅಂಚೆತಂತಿ, ದೂರವಾಣಿ ಸಂಪರ್ಕ, ಸಿನಿಮಾ ಮಾಧ್ಯಮ,

ದೂರದರ್ಶನ, ಆಕಾಶವಾಣಿ ಇತ್ಯಾದಿಗಳ ವೈಜ್ಞಾನಿಕ ಬೆಳವಣಿಗೆಯಿಂದಾಗಿ ತಳಸಮುದಾಯದ ಜನ ಜಾಗೃತವಾಗ ತೊಡಗಿದರು. ಇದರಿಂದಾಗಿ ಅಕ್ಷರ ಸಂಸ್ಕೃತಿಯಿಂದ ಶತಶತಮಾನಗಳಿಂದಲೂ ವಂಚಿತರಾಗಿದ್ದ ಶೋಷಿತ ಸಮುದಾಯ ಹೊಸ ಚಿಂತನ ಕ್ರಮವನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು.

ಈ ಸಂದರ್ಭದಲ್ಲಿ ತಳಸಮುದಾಯದ ಜನ ಅಕ್ಷರದ ಅರಿವನ್ನು ಪಡೆದದ್ದು ಪ್ರಗತಿಪರ ಆಲೋಚನೆಗೆ ಅವಕಾಶ ದೊರೆತಂತಾಯಿತು. ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಅವಲೋಕಿಸುವ ಮತ್ತು ತಮ್ಮ ಈ ಅತಂತ್ರ ಸ್ಥಿತಿಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಹೋರಾಡುವ ಮನಸ್ಥಿತಿ ಇವರಲ್ಲಿ ಬೆಳೆಯಿತು. ಹೊಸ ತಲೆ ಮಾರಿನ ಶೋಷಿತ ವಿದ್ಯಾವಂತರು ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ತುಳಿತಕ್ಕೆ ಒಳಗಾದ ತಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸಿದರು. ತಮ್ಮ ಸಾಹಿತ್ಯದಲ್ಲಿ ಮತ್ತು ಹೋರಾಟದಲ್ಲಿ ಬುದ್ಧ, ಬಸವ, ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳನ್ನು ಬಳಸಿಕೊಂಡು ವೈಚಾರಿಕ ನೆಲೆಗಟ್ಟನ್ನು ರೂಪಿಸಲು ಪ್ರಯತ್ನಿಸಿದರು. ಇತರೆ ಮೇಲ್ವರ್ಗದ ಸಮುದಾಯದ ಪ್ರಜ್ಞಾವಂತ ಮಾನವೀಯ ಕಳಕಳಿ ಹೊಂದಿದ್ದ ಜನತೆಯೂ ಈ ಸಾಹಿತ್ಯದಿಂದ ಪ್ರಭಾವಿತರಾಗುವಂತೆ, ದಲಿತ ಸಮಾಜದ ನೆಲೆಗಳನ್ನು ಅರಿಯುವಂತೆ ಮಾಡಿದರು.

ಡಾ. ಸಿದ್ಧಲಿಂಗಯ್ಯನವರು ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ದಲಿತ ಸಾಹಿತ್ಯ, ಚಳುವಳಿಯ ಆಧಾರ ಸ್ತಂಭಗಳಲೊಬ್ಬರು. ಹೊಸ ಕಾವ್ಯ ಭಾಷಾ ಪ್ರಕಾರವನ್ನು ನೀಡಿ ಧ್ವನಿ ಇಲ್ಲದ ಸಮುದಾಯಕ್ಕೆ ಮಾತನಾಡುವ ಶಕ್ತಿ ಬೆಳೆಸಿದರು. ಸಮಾನತೆಯನ್ನು ಬಯಸಿ ಕನ್ನಡದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರು ಸಾಹಿತ್ಯದ ಮೂಲಕ ಹಿಡಿದ ರೀತಿಯು ಅನನ್ಯವಾದದ್ದು. ಶೋಷಿತ ಬಹುಜನ ಸಮುದಾಯದ ನೋವಿನ ಸೆಲೆಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಸೃಜನಶೀಲಶಕ್ತಿ ಸಿದ್ಧಲಿಂಗಯ್ಯನವರ ಸಾಹಿತ್ಯಕ್ಕಿದೆ. ಅವರ ಪ್ರಥಮ ಕೃತಿಯಾದ 'ಹೊಲೆಮಾದಿಗರ ಹಾಡು' ಕವನ ಸಂಕಲನವು ಶೋಷಿತರು ಜಾತಿಯ ಹೆಸರನ್ನು ಹೇಳಿಕೊಳ್ಳಲು ಅವಮಾನಿತವಾಗಿ ಸಾಧ್ಯವಾಗದಿದ್ದ ಸಂದರ್ಭದಲ್ಲಿ 'ಹೊಲೆಮಾದಿಗರ ಹಾಡು' ಎಂಬ ಹೆಸರೇ ಅವರಲ್ಲಿ ಸ್ವಾಭಿಮಾನ ಮತ್ತು ಆತ್ಮಗೌರವವನ್ನು ಮೂಡಿಸುವ ಹೊಸ ಚಿಂತನಾ ಕ್ರಮವನ್ನು ಬೆಳೆಸಿತು.

ಸಿದ್ಧಲಿಂಗಯ್ಯನವರು ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿ ಶೋಷಿತರನ್ನು ಹೋರಾಟಕ್ಕೆ ಅಣಿಗೊಳಿಸಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವ ಮತ್ತು ಆಳುವ ಸರ್ಕಾರದ

ಅನೀತಿಗಳನ್ನು ಬಯಲು ಮಾಡುವ ಕಾರ್ಯಕ್ಕೆ ಸಿದ್ಧಗೊಳಿಸಿದರು. ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ಹಾಡು,(ಕವನ ಸಂಕಲನಗಳು) ಗ್ರಾಮದೇವತೆಗಳು (ಸಂಶೋಧನ ಪ್ರಬಂಧ) ಊರುಕೇರಿ (ಆತ್ಮಕಥನ) ಪಂಚಮ, ಏಕಲವ್ಯ, ನೆಲಸಮ (ನಾಟಕಗಳು) ಅವತಾರಗಳು (ಪ್ರಬಂಧ ಸಂಗ್ರಹ) ಎಡ-ಬಲ (ಸಾಹಿತ್ಯ ವಿಮರ್ಶೆ) ಉರಿಖಂಡಾಯ (ಸಾಹಿತ್ಯ ವಿಮರ್ಶೆ) ಮುಂತಾದ ಪ್ರಕಾರಗಳಲ್ಲಿ ಶೋಷಿತರ ಪರ ಚಿಂತನೆಗಳನ್ನು ನೀಡಿದ್ದಾರೆ.

ಈ ವರ್ತಮಾನದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಚಿಂತನೆಗಳು ಅನಂತ ಸಾಧ್ಯತೆಗಳನ್ನು ಕಟ್ಟಿಕೊಡುತ್ತವೆ. ಖಾಸಗೀಕರಣದ ಕರ್ಮಕಾಂಡವು, ಉದಾರೀಕರಣದ ವಿಕೃತ ರೀತಿಯೂ, ಜಾಗತೀಕರಣದ ಮಾಯಜಾಲವೂ ಮಾನವ ವಿರೋಧಿ ನೀತಿಯನ್ನು ರೂಪಿಸುತ್ತಿರುವ ಈ ಕಾಲದಲ್ಲಿ ಅದರಲ್ಲೂ ಈ ಎಲ್ಲಾ ಜಾಗತಿಕ ಬದಲಾವಣೆಗಳಿಂದ ತೀವ್ರವಾಗಿ ಶೋಷಣೆಗೆ ಒಳಗಾಗುತ್ತಿರುವವರು ಇದೀಗ ಪ್ರಪಂಚವನ್ನು ನೋಡಲು ಪ್ರಯತ್ನಿಸುತ್ತಿರುವ, ಅಂಬೆಗಾಲಿಡುವ, ತೆವಳುವ, ಎದ್ದು ನಿಲ್ಲುವ, ಪ್ರಯಾಸದಿಂದ ಪ್ರಯತ್ನಿಸುತ್ತಿರುವ ತಳಸಮುದಾಯದವರು ಎಂಬುದು ಕಟು ಸತ್ಯ. ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳು ಮಾನವೀಯತೆಯನ್ನು ಕುರಿತು ಮಾತನಾಡುತ್ತವೆ. ವೈದಿಕ ಸಂಪ್ರದಾಯ ಹರಡಿದ್ದ ಕರಿ ನೆರಳ ಹೊರಗೆ ನೂಕಿ ಹೊಸಬೆಳಕು ಚೆಲ್ಲುತ್ತವೆ.

ನಮ್ಮನ್ನಾಳುವ ಸರ್ಕಾರಗಳು ಹೇಗೆ ಮೂಲಭೂತವಾದೀ ಸಿದ್ಧಾಂತವನ್ನು ರೂಪಿಸುತ್ತಾ ಬಹುಸಂಸ್ಕತಿಯನ್ನು ನಾಶಪಡಿಸಿ ತನಗೆ ಅನುಕೂಲಕರವಾದ ಏಕಸಂಸ್ಕೃತಿಯನ್ನು ಬೆಳೆಸಲು ಪ್ರಯತ್ನಿಸುತ್ತಿವೆ ಎಂಬುದನ್ನು ಸಿದ್ಧಲಿಂಗಯ್ಯ ನವರ ಕಾವ್ಯ ಮತ್ತು ನಾಟಕ ತಿಳಿಸಿಕೊಡುತ್ತವೆ.ಸಿದ್ಧಲಿಂಗಯ್ಯನವರ ಸಾಹಿತ್ಯದ ಓದು ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಸಮಕಾಲೀನ ಸಮಸ್ಯೆಗಳಿಗೆ ಚಿಕಿತ್ಸೆ ಕಂಡುಕೊಳ್ಳಲು ದಾರಿಯಾಗುತ್ತದೆ. 'ಪಂಚಮ' ಮತ್ತು 'ನೆಲಸಮ' ನಾಟಕಗಳು ಪೆರಿಯಾರ್ ಚಿಂತನೆಯ ಕ್ರಮಗಳನ್ನು ತಿಳಿಸುತ್ತವೆ. ಈ ಕಾಲದಲ್ಲಿಯೂ ಶೋಷಿತರು ತಮ್ಮ ಬಣ್ಣ, ಆಹಾರ, ಭಾಷೆಯಿಂದ ಹೇಗೆ ನಿರ್‌ಭಿಮಾನಿಗಳಾಗಿ ಬದುಕುತ್ತಿದ್ದಾರೆ; ಪುರೋಹಿತ ಶಾಹಿಗಳು ಇವರ ಬಣ್ಣ, ಭಾಷೆ, ಆಹಾರವನ್ನು ಅಸ್ತ್ರವನ್ನಾಗಿ ಮಾಡಿಕೊಂಡು ಇವರನ್ನು ಸಾಂಸ್ಕೃತಿಕವಾಗಿ ಕೊಲ್ಲುವ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸುತ್ತಾ ಪೆರಿಯಾರ್ ಮಾದರಿಯ ಸಾಂಸ್ಕೃತಿಕ ಸ್ವಾಭಿಮಾನವನ್ನು ತಂದುಕೊಡುವ ನಿಲುವುಗಳು ಸಿದ್ಧಲಿಂಗಯ್ಯನವರ ನಾಟಕಗಳಲ್ಲಿ ಕಂಡು ಬರುತ್ತವೆ.

'ಏಕಲವ್ಯ' ನಾಟಕವು ವಿದ್ಯೆಯ ಪರಿಕಲ್ಪನೆಗೆ ಸಂಬಂಧಿಸಿದ ಒಂದು ರೂಪಕ. ಶತಶತಮಾನಗಳ ಹಿಂದೆ ಮನುವಾದಿಗಳ ಕುತಂತ್ರದಿಂದ ಕಳೆದುಕೊಂಡ ವಿದ್ಯೆಯನ್ನು ಇಪ್ಪತ್ತೊಂದನೆ ಶತಮಾನದಲ್ಲೂ ಕೂಡ ಹೇಗೆ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲವಾಗಿರುವುದನ್ನು ತಿಳಿಸುತ್ತದೆ. ಏಕಲವ್ಯ ನಾಟಕದಲ್ಲಿ ಏಕಲವ್ಯ ಸಮಕಾಲೀನ ವ್ಯವಸ್ಥೆಯನ್ನು ಕುರಿತು ಮಾತನಾಡುತ್ತಾನೆ. "ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ, ಜ್ಞಾನದ ಗುತ್ತಿಗೆಯನ್ನು ಎತ್ತಿ ಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ, ಮೇಲು ಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ. ಉಳ್ಳವರ ನಡುವಿನ ಕಚ್ಚಾಟವಾಗಿರುವ ಕುರುಕ್ಷೇತ್ರದಲ್ಲಿ ನನ್ನದು ಇಲ್ಲದವರ ಪರವಾದ ಹೋರಾಟ" ಎಂಬ ಏಕಲವ್ಯನ ಮಾತುಗಳಲ್ಲಿ ಹೊಸ ಚಿಂತನೆಯ ದೃಷ್ಟಿ-ಧೋರಣೆಗಳು ಹರಳುಗಟ್ಟಿವೆ.

ಈ ಸಮಕಾಲೀನ ಸಂದರ್ಭದಲ್ಲಿ ವಿದ್ಯೆ ಉಳ್ಳವರ ಮೇಲ್ವರ್ಗದವರ ಅಧಿಕಾರಶಾಹಿಗಳ ಪರವಾಗಿರುವ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ 'ಏಕಲವ್ಯ'ದ ಮರು ಓದು ಈ ಕಾಲಕ್ಕೆ ಅಗತ್ಯವಾಗಿ ಬೇಕಾಗಿದೆ. ಜ್ಯೋತಿಬಾ ಫುಲೆಯವರು ಶೂದ್ರಾತಿಶೂದ್ರರ ಮಾನಸಿಕ ಗುಲಾಮಗಿರಿಯನ್ನು ಹೋಗಲಾಡಿಸಲು ವಿದ್ಯೆ ಪ್ರಮುಖ ಆಯುಧ ಎಂದು ಹೇಳುವುದು ಸಿದ್ಧಲಿಂಗಯ್ಯನವರ ಏಕಲವ್ಯ ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ತೆಗೆದುಕೊಂಡ ನಿಲುವು, ನೀಡುವ ಬೆಂಬಲ, ಸಮತಾವಾದದ ಕಡೆಗೆ ಎಂಬ ಮಾತು ಈ ಕಾಲದಲ್ಲಿ ಸಂಘಪರಿವಾರದ ಬಲಿಷ್ಠ ಅಧಿಕಾರದ ಸುಳಿಗೆ ಸಿಕ್ಕಿ ತತ್ತರಿಸುತ್ತಿರುವ ದಲಿತ ಯುವ ಸಮುದಾಯಕ್ಕೆ ಜಾಗೃತಿ ಮೂಡಿಸುವ ಮಾರ್ಗದಂತಿದೆ.

ಸಿದ್ಧಲಿಂಗಯ್ಯನವರ ಕಾವ್ಯವು ಸಮಕಾಲೀನ ಅಗತ್ಯತೆಯ ಬಗ್ಗೆ ಮಾತನಾಡುತ್ತದೆ. ಸಮಾನತೆ, ಸಹೋದರತೆ, ಸ್ವಾತಂತ್ರ್ಯ ಮತ್ತು ಪ್ರಬುದ್ಧ ಸಮಾಜದ ನಿರ್ಮಾಣದ ಆಶಯವನ್ನು ಹೇಳುತ್ತದೆ. ಅಂಬೇಡ್ಕರ್‌ರವರ ಶೋಷಿತರಿಗೆ ಅಧಿಕಾರ ಕೊಡಿಸುವ ಚಿಂತನೆಗಳು ಇವರ ಕಾವ್ಯದಲ್ಲಿ ಮೂಡಿ ಬಂದಿವೆ.

ದಲಿತರು ಬರುವರು ದಾರಿ ಬಿಡಿ
ದಲಿತರ ಕೈಗೆ ರಾಜ್ಯ ಕೊಡಿ (ದಲಿತರು ಬರುವರು)

ಶೋಷಿತರು ಈ ದೇಶದ ಆಳುವ ದೊರೆಗಳಾಗಬೇಕು. ಸಕಲ ಸಂಪತ್ತಿನಲ್ಲೂ ಕೂಡ ಶೋಷಿತರು ಪಾಲುದಾರರಾಗಬೇಕು. ಸಾವಿರಾರು ನದಿಗಳು ಮತ್ತು ಕಪ್ಪುಕಾಡಿನ ಹಾಡು ಕವನಸಂಕಲನಗಳಲ್ಲಿನ ಕವಿತೆಗಳು ಕೇವಲ ಸಾಹಿತ್ಯವಾಗದೆ ಶೋಷಿತ ಸಮುದಾಯದ ದಿವ್ಯ

ಸೂತ್ರಗಳಾಗಿವೆ. ಹೋರಾಟದ ಮೂಲಕ ಮಾತ್ರ ತಮ್ಮ ಪಾಲನ್ನು ಪಡೆಯಲು ಸಾಧ್ಯ ಎಂದು ಎಚ್ಚರಗೊಳಿಸುತ್ತವೆ.

ಡಾ. ಸಿದ್ಧಲಿಂಗಯ್ಯನವರ ಚಿಂತನೆಗಳು ಈ ಕಾಲದ ಜನರು ಅಜ್ಞಾನ, ಅನಕ್ಷರತೆ, ಬಡತನ, ಅಸಹಾಯಕತೆ ಮತ್ತು ಶೋಷಣೆಯಿಂದ ಮುಕ್ತರಾಗಬೇಕು ಎಂದು ಹೇಳುತ್ತವೆ. ಇವರ ಚಿಂತನೆ ಈ ದೇಶದ ಈ ಕಾಲದ ಬಹು ಸಂಖ್ಯಾತ ಜನರಿಗೆ ಅನ್ವಯಿಸುತ್ತದೆ. ಅಂದು ಪಡೆಯಲು ಸಾಧ್ಯವಾಗದೇ ಇದ್ದ ವಿದ್ಯೆ, ಅಧಿಕಾರ ಮತ್ತು ಆಸ್ತಿಯನ್ನು ಈ ಆಧುನಿಕಯುಗದಲ್ಲೂ ಕೂಡ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲವಲ್ಲ ಎನ್ನುವ ನೋವನ್ನು ಮೂಡಿಸುತ್ತದೆ. ಹುಸಿ ಚರಿತ್ರೆಯೊಳಗಿನ ವೈಭವೀಕರಣದ ತಿರಸ್ಕಾರವನ್ನು ಚರಿತ್ರೆಯ ಬೆಳಕು ಬೀಳದ ಮಗ್ಗುಲಿನ ಸತ್ಯಗಳನ್ನು, ತುಳಿಯಲ್ಪಟ್ಟ ಜನರ ಭಾವನೆ ಕನಸುಗಳನ್ನು ಅನಾವರಣ ಮಾಡಲು ಸಿದ್ಧಲಿಂಗಯ್ಯನವರ ಕವಿತೆ ಮತ್ತೆ ಮತ್ತೆ ಕರೆಕೊಡುತ್ತದೆ.

ಈ ವರ್ತಮಾನದ ಸಂದರ್ಭದಲ್ಲಿ ಸಂವಿಧಾನದಲ್ಲಿ ಪ್ರಜಾಪ್ರಭುತ್ವವಿದೆ. ಆದರೆ ನಾವು ಕಾಣುತ್ತಿರುವುದು ಮಾತ್ರ ಬಂಡವಾಳಶಾಹಿ ಪ್ರಜಾಪ್ರಭುತ್ವ, ವಂಶಪಾರಂಪರ್ಯದ ಪ್ರಜಾಪ್ರಭುತ್ವ, ಅನುಕೂಲಸಿಂಧು ಪ್ರಜಾಪ್ರಭುತ್ವ ಮತ್ತು ಮೂಲ ಭೂತವಾದಿ ಪ್ರಜಾಪ್ರಭುತ್ವಗಳೆಂದು ನಿರ್ಭಿಡೆಯಿಂದ ಸಾರಿ ಹೇಳಬಹುದು. ವಾಸ್ತವ ಪರಿಸ್ಥಿತಿ ಈ ರೀತಿ ಇರುವ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳು ಸಂವಿಧಾನದಲ್ಲಿ ಅಡಕಗೊಂಡಿರುವ ಪ್ರಜಾಪ್ರಭುತ್ವ ಅದರ ಸೌಲಭ್ಯಗಳನ್ನು ನಿಜ ಅರ್ಥದಲ್ಲಿ ಇದುವರೆಗೂ ಕೇವಲ ಕರ್ತವ್ಯಗಳನ್ನು ಮಾತ್ರ ನಿರ್ವಹಿಸುತ್ತಾ ಬಂದಿರುವ ದಲಿತ ಜನತೆ ಪಡೆಯುವ ದಿಕ್ಕಿನ ಕಡೆ ಆಲೋಚಿಸುವ ಹೋರಾಟ ಮಾಡುವ ಮೂಲಕವಾದರೂ ಮುಖ್ಯವಾಹಿನಿಗೆ ಬರುವಂತೆ ಪ್ರೇರೇಪಿಸಿಸುತ್ತವೆ.

ಸಿದ್ಧಲಿಂಗಯ್ಯನವರ ಕವಿತೆಗಳು ಹೊಸನಾಡಕಟ್ಟಲು ತವಕಿಸುತ್ತವೆ. ಆಧುನಿಕಯುಗದ ಒಂದು ಬಹಳ ಮುಖ್ಯವಾದ ತತ್ವ ಬಡವರ ಪರವಾದ ವಾದ, ಸಮ ತಾವಾದ ಇವುಗಳನ್ನು ಮೊದಲ ಬಾರಿಗೆ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಸಿದ್ಧಲಿಂಗಯ್ಯನವರು ತಮ್ಮ ಕವಿತೆಗಳಲ್ಲಿ ಹಿಡಿದಿಟ್ಟಿದ್ದಾರೆ.

ಸಿದ್ಧಲಿಂಗಯ್ಯನವರ ಸಾಹಿತ್ಯದ ವ್ಯಾಪ್ತಿ ಸಮಸ್ತ ಶೋಷಿತರನ್ನು ಒಳಗೊಂಡಿದ್ದು ಅವರ ಜೀವನ ವಿಧಾನ, ಬದುಕು, ಸಂಸ್ಕೃತಿ ಮತ್ತು ಸಮಾಜದ ಚಿಂತನ ಕ್ರಮಗಳನ್ನು ಕುರಿತು ಮಾತನಾಡುತ್ತದೆ. ಸಂವಿಧಾನದ ಆಶಯಗಳನ್ನು ಮತ್ತೆ ಮತ್ತೆ ನೆನಪುಮಾಡುತ್ತದೆ. ಸಮಕಾಲೀನ ಸಮಸ್ಯೆಗಳಿಗೆ ಪರಿಹಾರದ ದೀವಿಗೆಯಾಗಿದೆ. ಸಿದ್ಧಲಿಂಗಯ್ಯನವರ ಸಾಹಿತ್ಯದ ಮೂಲಕ ಬುದ್ಧ,

ಬಸವ, ಜ್ಯೋತಿಬಾ ಫುಲೆ, ಪೆರಿಯಾರ್ ಮತ್ತು ಅಂಬೇಡ್ಕರ್ ಮತ್ತೆ ಮತ್ತೆ ಈ ಕೊಳಕು ತುಂಬಿದ ಸಮಾಜವನ್ನು ನೋಡಿ ಮರುಗುತ್ತಾರೆ. ಶೋಷಕರಲ್ಲಿ ಪಾಪಪ್ರಜ್ಞೆ, ಶೋಷಿತರಲ್ಲಿ ಜಾಗೃತಿ ಪ್ರಜ್ಞೆಯನ್ನು ಮೂಡಿಸುತ್ತಾರೆ. ಸಿದ್ಧಲಿಂಗಯ್ಯನವರು ಶೋಷಣೆಯ ಬೇರಿನಿಂದ ಕುಡಿಯೊಡೆದು, ಸಮಸ್ತ ಶೋಷಣೆಯನ್ನು ಜೀರ್ಣಿಸಿಕೊಂಡು ಬೆಳೆದು ಬಂದ ಭರವಸೆಯ ಕಿರಣವೆಂದರೆ ತಪ್ಪಾಗಲಾರದು. ಸರ್ವ ಸಮಾನತೆಯ ಸಮಾಜವನ್ನು, ಶೋಷಣೆ ಮುಕ್ತ ಸಂಸ್ಕೃತಿಯನ್ನು ನಿರ್ಮಿಸುವ ದಿವ್ಯ ಶಕ್ತಿ ಅವರ ಸಾಹಿತ್ಯಕ್ಕಿದೆ. ಆದುದರಿಂದ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಸಂದರ್ಭದಲ್ಲಿ ಅನಂತ ಸಾಧ್ಯತೆಗಳನ್ನು ಕಂಡುಕೊಂಡು, ಮುಂದಿನ ಪೀಳಿಗೆಗೆ ಹೊಸ ಚಿಂತನ ಕ್ರಮವನ್ನು ನೀಡಬಹುದು ಮತ್ತು ಜೀವಪರ ಸಂಸ್ಕೃತಿಯನ್ನು ನಿರ್ಮಿಸಬಹುದಾಗಿದೆ.

ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣವಾಗುವುದರ ಹಿಂದೆ ಆತನಲ್ಲಿ ಆಲೋಚನೆಗಳನ್ನು ಮೂಡಿಸುವ ಹಿಂದೆ ಒಂದು ನಿರ್ದಿಷ್ಟ ಪರಿಸರ ಕಾರಣವಾಗಿರುತ್ತದೆ.

ಆ ವ್ಯಕ್ತಿಗೆ ತಾನು ಹುಟ್ಟಿ ಬೆಳೆದ ಪರಿಸರ, ಪಡೆದ ವಿದ್ಯೆ, ಸುತ್ತಲಿನ ಸಮಾಜದ ಆಗುಹೋಗುಗಳು ಪ್ರಮುಖ ಪಾತ್ರವಹಿಸುತ್ತವೆ. ಸಿದ್ಧಲಿಂಗಯ್ಯನವರೂ ಇದರಿಂದ ಹೊರತಲ್ಲ. ಸ್ವತಃ ಅನುಭವಿಸಿದ ದಲಿತ ನೆಲೆಯ ನೋವುಗಳು, ಅಕ್ಷರದ ಅರಿವಿನ ಮೂಲಕ ಅವರು ಕಂಡುಕೊಂಡ ಜಗತ್ತು, ಅಂಬೇಡ್ಕರ್, ಪೆರಿಯಾರ್, ಫುಲೆ ಇವರ ಬರಹಗಳು ಭಾಷಣಗಳು ಇವರನ್ನು ಈ ಸಮಸ್ಯೆಗಳ ಕಡೆ ಹೆಚ್ಚು ಆಲೋಚಿಸುವಂತೆ ಮಾಡಿವೆ. ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ದಲಿತ ಲೋಕದಲ್ಲಿ ಹೊಸ ಅರಿವನ್ನು ಬಿತ್ತಲು, ಅವರನ್ನು ಉದ್ಧರಿಸಲು ಕಂಕಣಬದ್ಧರಾಗಿ ದುಡಿದ ಪ್ರತಿಯೊಬ್ಬ ದಲಿತ ಸೃಜನಶೀಲ ಬರಹಗಾರನ ಮೇಲೆ ಸಮಾಜ ಪರಿವರ್ತಕರ ಪ್ರಭಾವ ಬೀರಿರುವುದು ಸಹಜ ಸಂಗತಿ. ಈ ನಿಟ್ಟಿನಲ್ಲಿ ಸಿದ್ಧಲಿಂಗಯ್ಯನವರ ವಿವಿಧ ಬಗೆಯ ಸಾಹಿತ್ಯದ ಮೇಲೆ ಉಂಟಾಗಿರುವ ಇವರ ಪ್ರಭಾವ, ಪ್ರೇರಣೆಗಳನ್ನು ಗುರುತಿಸುವುದು ಮತ್ತು ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು ಹೇಗೆ ರೂಪುಗೊಂಡಿವೆ ಎಂಬುವುದನ್ನು ನನ್ನ ಸಂಶೋಧನೆಯ ನಿಬಂಧದಲ್ಲಿ ಕಂಡುಕೊಳ್ಳಲು ಪ್ರಯತ್ನಿಸುತ್ತೇನೆ.

ಅಧ್ಯಾಯ – ೨

ಕವಿ ಸಿದ್ಧಲಿಂಗಯ್ಯನವರ ಪರಿಚಯ ಮತ್ತು ಅವರೊಂದಿಗೆ ಮಾತುಕತೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ೧೯೫೪ರಲ್ಲಿ ಹುಟ್ಟಿದ ಸಿದ್ಧಲಿಂಗಯ್ಯನವರು ಹೊಸಗನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರು. ೧೯೭೫ರಲ್ಲಿ ಇವರ 'ಹೊಲೆಮಾದಿಗರ ಹಾಡು' ಪ್ರಕಟಗೊಂಡಾಗ ಕನ್ನಡ ಕಾವ್ಯಲೋಕ ಹೊಸ ಆಯಾಮ ಮತ್ತು ಧ್ವನಿಯನ್ನು ಪಡೆಯಿತು. ಜಡ್ಡುಗಟ್ಟಿದ್ದ ಭಾವನೆಗಳ ಅಭಿವ್ಯಕ್ತಿ ಹೊಸ ರಕ್ತಪುಷ್ಟಿಯನ್ನು ಪಡೆಯಿತು. ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ವರ್ಗದ ವೇದನೆ ಸಂವೇದನೆಗಳು ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಿ ಪಡೆದು ಆ ವರ್ಗ ಅದುವರೆಗೆ ಅದುಮಿಟ್ಟಿದ್ದ ರೋಷ, ರೊಚ್ಚು, ವಿಷಾದಗಳೆಲ್ಲ ಕಾವ್ಯದುದ್ದಕ್ಕೂ ಹರಿದವು.

ಕಾಲೇಜು ದಿನಗಳಲ್ಲಿ ಶ್ರೇಷ್ಠ ದರ್ಜೆಯ ಚರ್ಚಾಪಟುವಾಗಿದ್ದ ಸಿದ್ಧಲಿಂಗಯ್ಯನವರು ಹಾಸ್ಯ ಲೇಪಿತವಾದ, ಆದರೆ ಚುರುಕು ಮುಟ್ಟಿಸುವ, ಪರಿಣಾಮಕಾರಿಯಾದ ಭಾಷಣ ಕಲೆಯನ್ನು ಕರಗತವಾಗಿಸಿಕೊಂಡವರು. ಸಂಶೋಧನ ಸಹಾಯಕರಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಪ್ರವೇಶಿಸಿದ ಸಿದ್ಧಲಿಂಗಯ್ಯನವರು ಗ್ರಾಮದೇವತೆಗಳನ್ನು ಕುರಿತು ನಡೆಸಿದ ಸಾಂಸ್ಕೃತಿಕ ಅಧ್ಯಯನಕ್ಕೆ ಪಿಎಚ್.ಡಿ ಪದವಿ ಪಡೆದುಕೊಂಡಿದ್ದಾರೆ. ಪ್ರಸ್ತುತ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ಅದರ ನಿರ್ದೇಶಕರಾಗಿ, ವಿಶ್ವವಿದ್ಯಾಲಯದ ಮಾನವಿಕ ವಿಭಾಗಗಳ ಡೀನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಂದ ಪುರಸ್ಕೃತವಾಗಿರುವ ಸಿದ್ಧಲಿಂಗಯ್ಯನವರು ಸತತ ಎರಡು ಅವಧಿಗೆ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ಕನ್ನಡದ ಸಮಸ್ಯೆ ಮತ್ತು ಕನ್ನಡಿಗರ ಬವಣೆಗಳನ್ನು ಆಡಳಿತಶಾಹಿ–ಅಧಿಕಾರಶಾಹಿಗಳಿಗೆ ತಮ್ಮ ಚಾಟಿಯೇಟಿನಂಥ ಮಾತುಗಳ ಮೂಲಕ ಮನವರಿಕೆ ಮಾಡಿಕೊಟ್ಟು ಅವರನ್ನು ಕ್ರಿಯಾಶೀಲರಾಗಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ.

ಸಿದ್ಧಲಿಂಗಯ್ಯನವರ ಕೃತಿಗಳ

೧) ಹೊಲೆಮಾದಿಗರ ಹಾಡು (ಕವನ ಸಂಕಲನ)
೨) ಸಾವಿರಾರು ನದಿಗಳು (ಕವನ ಸಂಕಲನ)
೩) ಕಪ್ಪು ಕಾಡಿನ ಹಾಡು (ಕವನ ಸಂಕಲನ)
೪) ಮೆರವಣಿಗೆ (ಇಲ್ಲಿಯವರೆಗಿನ ಕವಿತೆಗಳು)
೫) ಗ್ರಾಮದೇವತೆಗಳು (ಸಂಶೋಧನಾ ಪ್ರಬಂಧ)
೬) ಊರುಕೇರಿ (ಆತ್ಮಕಥನ)
೭) ಪಂಚಮ (ನಾಟಕ)
೮) ನೆಲಸಮ (ನಾಟಕ)
೯) ಏಕಲವ್ಯ (ನಾಟಕ)
೧೦) ಸದನದಲ್ಲಿ ಸಿದ್ಧಲಿಂಗಯ್ಯ (ವಿಧಾನಪರಿಷತ್ತಿನ ಭಾಷಣಗಳು)
೧೧) ಅವತಾರಗಳು (ಪ್ರಬಂಧ ಸಂಗ್ರಹ)
೧೨) ಎಡ–ಬಲ (ಸಾಹಿತ್ಯ ವಿಮರ್ಶೆ)
೧೩) ಜನಸಂಸ್ಕೃತಿ (ಸಾಹಿತ್ಯ ವಿಮರ್ಶೆ)

ಸಂದರ್ಶನ

ಪ್ರಶ್ನೆ : ನಿಮ್ಮ ಮೊದಲ ಕವನ ಸಂಕಲನ ಕೃತಿಗೆ ಹೊಲೆಮಾದಿಗರ ಹಾಡು ಎಂಬ ಶೀರ್ಷಿಕೆ ಕೊಡಲು ಕಾರಣವೇನು?

ಉತ್ತರ : ಈ ಕೃತಿಯನ್ನು ನಾನು ರಚನೆ ಮಾಡುತ್ತಿದ್ದ ಸಂದರ್ಭದಲ್ಲಿ ದಲಿತರು ತಮ್ಮ ಜಾತಿಯ ಹೆಸರನ್ನು ಹೇಳಿಕೊಳ್ಳಲು ಭಯ ಮತ್ತು ಮುಜುಗರಕ್ಕೆ ಒಳಗಾಗುತ್ತಿದ್ದರು. ಆ ಸ್ಥಿತಿಯನ್ನು ಗಮನಿಸಿದ ನಾನು ಹೊಲೆಮಾದಿಗರು ಎಂದರೆ ಹೆಸರೇ ಸೂಚಿಸುವಂತೆ ಹೊಲೆಯರು ಎಂದರೇ ಹೊಲದ ಒಡೆಯರು, ಮಾದಿಗರು ಎಂದರೆ ಮಹಾ ಆದಿಗರು ಇವರು ಈ ದೇಶದ ಮೂಲನಿವಾಸಿಗಳು, ನೆಲದ ಒಡೆಯರು ಎಂದೇಳಿ ಹೊಲೆ ಮಾದಿಗರು ಎಂಬುದು ಅಪಮಾನದ ಸಂಕೇತವಲ್ಲ ಸ್ವಾಭಿಮಾನದ ಪ್ರತಿರೂಪ ಎಂದು ತಿಳಿಸಲು ಮತ್ತು ಹೊಲೆಮಾದಿಗರು ಎಡ–ಬಲ ಅಲ್ಲವೇ ಅಲ್ಲ ಅವರು ಹೊಂದಾಣಿಕೆಯಿಂದ ಸಹೋದರತ್ವದ ಜೀವನ ಸಾಗಿಸಬೇಕು ಎಂದು ನನ್ನ ಮೊದಲ ಕವನ ಸಂಕಲನಕ್ಕೆ 'ಹೊಲೆಮಾದಿಗರ ಹಾಡು' ಎಂದು ಶೀರ್ಷಿಕೆಯನ್ನು ಕೊಡಬಯಸಿದೆ.

ಪ್ರಶ್ನೆ : ನಿಮ್ಮ ಸಾಹಿತ್ಯ ರಚನೆಗೆ ಪ್ರೇರಣೆಯ ವಸ್ತು ಯಾವುದು?

ಉತ್ತರ : ನನ್ನ ಸಾಹಿತ್ಯ ರಚನೆಗೆ ಪ್ರೇರಣೆಯ ವಸ್ತು ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆ, ಅನ್ಯಾಯ, ದಬ್ಬಾಳಿಕೆ, ದಲಿತ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರಗಳು ಹಾಗೂ ಶತಶತಮಾನಗಳಿಂದ

ದಲಿತರು ವಿದ್ಯೆ, ಆಸ್ತಿ, ಅಧಿಕಾರವನ್ನು ಕಳೆದುಕೊಂಡು ಮೇಲ್ಜಾತಿಜನಗಳ ಅಧಿಕಾರದ ಹಿಡಿತದಲ್ಲಿ ಗುಲಾಮರಾಗಿ ಬದುಕುತ್ತಿದ್ದ ಪರಿಸ್ಥಿತಿ, ಬುದ್ಧ, ಬಸವ, ಫುಲೆ, ಪೆರಿಯಾರ್, ಅಂಬೇಡ್ಕರ್, ಮಾರ್ಕ್ಸ್ ಚಿಂತನೆಗಳು ನನ್ನ ಸಾಹಿತ್ಯ ರಚನೆಗೆ ಕಾರಣವಾದವು. ಜಾತಿರಹಿತ ಸಮಾಜ ನಿರ್ಮಿಸುವ ಧೋರಣೆ ನನ್ನ ಸಾಹಿತ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿತ್ತು.

ಪ್ರಶ್ನೆ : ಸಮಕಾಲೀನ ಸವಾಲುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ : ವರ್ತಮಾನದ ಸಂದರ್ಭದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳು ಸಮಾಜದಲ್ಲಿ ತಾಂಡವವಾಡುತ್ತಿವೆ. ಕೋಮುವಾದ, ಮತಾಂಧತೆ, ಭಯೋತ್ಪಾದನೆ, ಭ್ರಷ್ಟಾಚಾರ, ಮತ್ತು ಅನೈತಿಕತೆಯಂತಹ ಅಮಾನವೀಯ ಕೃತ್ಯಗಳು ಸಮಾಜದಲ್ಲಿ ನಡೆಯುತ್ತಿವೆ. ಈ ಸಮಸ್ಯೆಗಳು ಬಹುದೊಡ್ಡ ಸವಾಲುಗಳಾಗಿ ಮಾನವನ ಜೀವನದಲ್ಲಿ ಹೆಣೆದುಕೊಂಡಿವೆ. ಇದರ ವಿರುದ್ಧ ಆಳುವ ಸರ್ಕಾರಗಳು, ಸಾಹಿತಿಗಳು, ಯುವ ಜನತೆ ಪ್ರಜಾಪ್ರಭುತ್ವದ ಆಧಾರದ ಮೇಲೆ ಆಲೋಚನೆಮಾಡಿ ಈ ಸವಾಲುಗಳನ್ನು ಬುಡಸಮೇತ ತೆಗೆದು ಹಾಕಿ ಪ್ರಬುದ್ಧ ಸಮಾಜ ಕಟ್ಟಲು ಪ್ರಯತ್ನಿಸಬೇಕು.

ಪ್ರಶ್ನೆ : ಜ್ಯೋತಿ ಬಾಫುಲೆಯವರ ಚಿಂತನೆಗಳು ನಿಮಗೆ ಹೇಗೆ ಪ್ರಭಾವ ಬೀರಿವೆ?

ಉತ್ತರ : ಜ್ಯೋತಿ ಬಾಫುಲೆಯವರು ಬಹುದೊಡ್ಡ ಸಮಾಜ ಪರಿವರ್ತಕರು. ಅಂಬೇಡ್ಕರ್‌ರವರು ಫುಲೆಯವರನ್ನು ನನ್ನ ಗುರುಗಳು ಎಂದು ಕರೆಯುತ್ತಿದ್ದರು. ಗಾಂಧಿಯವರಿಗಿಂತ ಮೊದಲೇ ಫುಲೆ ಮಹಾತ್ಮರಾಗಿದ್ದರು. ಆದುದರಿಂದ ಅವರನ್ನು ಎಲ್ಲಾ ಜನರು ಮಹಾತ್ಮ ಫುಲೆ ಎಂದು ಕರೆಯುತ್ತಾರೆ. ಫುಲೆಯವರು 'ದೈಹಿಕ ಗುಲಾಮಗಿರಿಗಿಂತ ಮಾನಸಿಕ ಗುಲಾಮಗಿರಿ ಅಪಾಯಕಾರಿ ಇದನ್ನು ವಿದ್ಯೆ ಎಂಬ ಅಸ್ತ್ರದಿಂದ ಹೋಗಲಾಡಿಸಬಹುದು' ಎಂಬ ಮಾತು ನನ್ನನ್ನು ಫುಲೆ ವಿಚಾರದೆಡೆಗೆ ಸೆಳೆಯಿತು. ಅವರ ಬಗ್ಗೆ ಪುಸ್ತಕಗಳನ್ನು ಓದಿ ತಿಳಿದುಕೊಂಡಿದ್ದೇನೆ. ಅವರು ವಾಸಮಾಡಿರುವ ಮತ್ತು ಕೆಲಸಮಾಡುತ್ತಿದ್ದ ಮನೆಗಳಿಗೆ ಭೇಟಿ ನೀಡಿ ಪ್ರತ್ಯೕಕ್ಷ ಅನುಭವವನ್ನು ಪಡೆದುಕೊಂಡಿದ್ದೇನೆ. ನನ್ನ ಏಕಲವ್ಯ ನಾಟಕದ ಮೇಲೆ ಫುಲೆ ಚಿಂತನೆಗಳು ಪ್ರಭಾವ ಬೀರಿವೆ. ಅದೇ ರೀತಿಯಾಗಿ ನನ್ನ ಕೆಲವು ಕವಿತೆಗಳು ಅವರ ಪ್ರೇರಣೆಯಿಂದ ರಚಿತವಾಗಿವೆ.

ಪ್ರಶ್ನೆ : ಪೆರಿಯಾರ್ ಚಿಂತನೆಗಳು ನಿಮಗೆ ಹೇಗೆ ಪ್ರಭಾವ ಬೀರಿದವು?

ಉತ್ತರ : ಪೆರಿಯಾರ್ ಅವರನ್ನು ನಾನು ಅವರು ಬೆಂಗಳೂರಿಗೆ ಬಂದಿದ್ದ ಸಂದರ್ಭದಲ್ಲಿ ಭೇಟಿಯಾಗಿ ಮಾತನಾಡಿಸಿದ್ದೇನೆ. ಅವರು ತಳ ಸಮುದಾಯದ ಸ್ವಾಭಿಮಾನದ ಪ್ರತೀಕವಾಗಿದ್ದರು. ಅವರು ವೈಚಾರಿಕತೆಯನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದರು. ಅವರು ಎಲ್ಲೇ ಭಾಷಣ ಮಾಡಿದರೂ ಪ್ರಾರಂಭದಲ್ಲಿ "ದೇವರು ಇಲ್ಲ, ದೇವರು ಇಲ್ಲವೇ ಇಲ್ಲ. ದೇವರ ಬಗ್ಗೆ ಮಾತನಾಡುವವನು ಮುಠ್ಠಾಳ, ದೇವರನ್ನು ಪೂಜಿಸುವವನು ಅನೀತಿವಂತ, ದೇವರಿಗೆ ಗೌರವ ನೀಡುವವ ಪೆದ್ದ, ದೇವರನ್ನು ಪ್ರಚಾರಮಾಡುವವನು ಮೂರ್ಖ" ಎಂದು ಹೇಳುತ್ತಿದ್ದ ಮಾತುಗಳು ನನ್ನ ಮೇಲೆ ತುಂಬಾ ಪ್ರಭಾವ ಬೀರಿದವು. ಪೆರಿಯಾರ್‌ರವರ ಬಹುಸಂಸ್ಕೃತಿಯ ನೆಲೆಗಳು ನನ್ನಲ್ಲಿ ಒಬ್ಬ ವಿಚಾರವಂತ ಮೂಡಲು ಕಾರಣವಾದವು. ನನ್ನ ಸುಮಾರು ಕವಿತೆಗಳು, ನಾಟಕಗಳು, ವಿಮರ್ಶೆಗಳು ಅವರ ಪ್ರೇರಣೆಯಿಂದ ಸೃಷ್ಟಿಯಾಗಿವೆ. ಅವರ ಭಾಷಣ ಕೇಳಿ ನಾನು ಅವರ ಅಭಿಮಾನಿಯಾದೆ. ಕೆಲವು ವಿರೋಧಿಗಳು ನನ್ನ ಮತ್ತು ಕೃಷ್ಣಮೂರ್ತಿಯವರ ಮೇಲೆ ದೈಹಿಕ ಹಲ್ಲೆ ಮಾಡಿದರು. ಪೆರಿಯಾರ್ ಇದನ್ನು ಕಂಡು ಯಾವುದಕ್ಕೂ ಹೆದರಬಾರದು ಎಂದು ಹೇಳಿ ನನ್ನ ಬೆನ್ನುತಟ್ಟಿದರು. ಪೆರಿಯಾರ್ ಭಾಷಣದ ಸಮ್ಮೇಳನದಲ್ಲಿ ಅಂದಿನ ಭೀಮಸೇನೆಯ ಸ್ಥಾಪಕರಾದ ಬಿ.ಶ್ಯಾಂ ಸುಂದರ್‌ರವರನ್ನು ಭೇಟಿಮಾಡಿ ಅವರೊಂದಿಗೆ ಬಹಳ ವಿಚಾರಗಳನ್ನು ಚರ್ಚೆಮಾಡಿದೆ.

ಪ್ರಶ್ನೆ : ಅಂಬೇಡ್ಕರ್ ಚಿಂತನೆಗಳು ನಿಮಗೆ ಹೇಗೆ ಪ್ರಭಾವ ಬೀರಿದವು?

ಉತ್ತರ : ಪ್ರಾಥಮಿಕ ಹಂತದ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲೇ ಅಂಬೇಡ್ಕರ್ ಬಗ್ಗೆ ತಿಳಿದುಕೊಂಡಿದ್ದೆ. ಆ ಕಾಲದಲ್ಲಿ ಅಂಬೇಡ್ಕರ್ ಕೀ ಜೈ ಎಂದು ಕೂಗುವುದು ಬಾಯಿಪಾಠವಾಗಿತ್ತು. ಅಂಬೇಡ್ಕರ್‌ರವರ ಬಗ್ಗೆ ಬಹಳ ದಂತ ಕಥೆಗಳನ್ನು ನಾನು ಕೇಳಿದ್ದೆ. ಅಂಬೇಡ್ಕರ್‌ರವರು ದಲಿತ ಸಮುದಾಯದ ಸೂರ್ಯ ಎಂಬುವುದು ಅಂದಿನ ದಿನಗಳಲ್ಲೆ ತಿಳಿದುಕೊಂಡಿದ್ದೆ. ನಂತರದ ದಿನಗಳಲ್ಲಿ ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿ ತಿಳಿದುಕೊಂಡೆ. ಅಂಬೇಡ್ಕರ್‌ರವರ ಪ್ರಬುದ್ಧ ಭಾರತ ನಿರ್ಮಾಣದ ಪರಿಕಲ್ಪನೆ, 'ಬುದ್ಧನೆಡೆಗೆ ಮರಳಿ ಮನೆಗೆ' ಎಂಬ ಬೌದ್ಧಧರ್ಮದ ಬಗೆಗಿನ ಚಿಂತನೆ. ಜಾತಿ ರಹಿತ ಸಮಾಜದ ಪರಿಕಲ್ಪನೆ ನನ್ನ ಮೇಲೆ ಬಹಳವಾಗಿ ಪ್ರಭಾವ ಬೀರಿದೆ. ಅಂಬೇಡ್ಕರ್‌ರವರ ಚಿಂತನೆಗಳನ್ನು ನನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಅವರ ಸಂವಿಧಾನದ ಆಶಯಗಳು ಜಾರಿಯಾಗಬೇಕು ಎಂಬ ಕನಸು ಕೂಡ ನನಗೂ ಇದೆ. ಅಂಬೇಡ್ಕರ್‌ರವರ ಬಗ್ಗೆ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಭಾಷಣ ಮಾಡಿದ್ದೇನೆ. ಅವರ ಪೂನಾ ಒಪ್ಪಂದ, ತೆಗೆದುಕೊಂಡ ರಾಜಕೀಯ ನಿರ್ಣಯಗಳು ಮುಂತಾದ ವಿಷಯಗಳನ್ನು ಕುರಿತು ಬಹಳ ವೇದಿಕೆಯ ಮೇಲೆ ಚರ್ಚೆ ಮಾಡಿದ್ದೇನೆ. ಅವರ ಚಿಂತನೆಗಳ ಪ್ರಭಾವದಿಂದಾಗಿ ನನ್ನ ಬಹುಪಾಲು ಸಾಹಿತ್ಯ ರೂಪುಗೊಂಡಿದೆ.

ಪ್ರಶ್ನೆ : ದಲಿತ ಚಳುವಳಿ ಕಟ್ಟಿ ಬೆಳೆಸಿದ ಪ್ರಮುಖರಲ್ಲಿ ನೀವು ಕೂಡ ಒಬ್ಬರು. ಆದರೆ ನಿಮ್ಮ ಕಣ್ಣುಮುಂದೆಯೇ ಆ ಚಳುವಳಿ ನೂರಾರು ಭಾಗವಾಗಿ ಛಿದ್ರವಾಗುತ್ತಿದೆ ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಉತ್ತರ : ದಲಿತ ಚಳುವಳಿಗೆ ನಿಷ್ಠಾವಂತ ನಾಯಕರ ಅವಶ್ಯಕತೆ ಇದೆ. ಎಲ್ಲಾ ಸಮಾನ ಮನಸ್ಕರಾಗಿ ಹೋರಾಡಬೇಕು. ಅಂಬೇಡ್ಕರ್‌ರವರ ಸಿದ್ಧಾಂತದ ಮೇಲೆ ನಂಬಿಕೆ ಇಟ್ಟು ನಡೆದುಕೊಳ್ಳಬೇಕು. ಸ್ವಾರ್ಥಬಿಟ್ಟು ಸಮಾಜಕಟ್ಟುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಎಲ್ಲ ಮನಸ್ಸುಗಳು ಜೊತೆಗೂಡಿದರೆ ಮಾತ್ರ ಅಸಮಾನತೆಯನ್ನು ತೊಲಗಿಸಲು ಸಾಧ್ಯ. ಮುಂದಿನ ದಿನಗಳಲ್ಲಿ ನಾನು ಕೂಡ ಇದರ ಬಗ್ಗೆ ಪ್ರಯತ್ನಿಸುತ್ತೇನೆ.

ಪ್ರಶ್ನೆ : ದಲಿತ ಚಳುವಳಿ ಎಂದಾಕ್ಷಣ ಎಪ್ಪತ್ತರ ಕಾಲಕ್ಕೆ ಹೋಗುತ್ತಾರೆ. ಹಾಗಾದರೆ ಈ ಕಾಲದಲ್ಲಿ ದಲಿತ ಚಳುವಳಿ ಕಟ್ಟಲು ಸಾಧ್ಯವಿಲ್ಲವೇ?

ಉತ್ತರ : ಅದು ದಲಿತ ಚಳುವಳಿಯು ಪ್ರಾರಂಭದ ಹಂತವಾಗಿತ್ತು. ಆಕ್ರೋಶ, ಸ್ವಾಭಿಮಾನ, ಹೋರಾಟ, ಪ್ರತಿಭಟನೆ ತೀವ್ರಗತಿಯಲ್ಲಿ ನಡೆಯುತ್ತಿತ್ತು. ಹಾಗಾಗಿ ದಲಿತ ಚಳುವಳಿ ಎಂದಾಕ್ಷಣ ಎಪ್ಪತ್ತರ ಕಾಲಕ್ಕೆ ಹೋಗುತ್ತಾರೆ. ಇಂದೂ ಕೂಡ ಹಲವಾರು ಸಂಘಟನೆಗಳು ಹೋರಾಟ ಮಾಡುತ್ತಿವೆ. ಆ ಕಾಲದಷ್ಟು ತೀವ್ರಗತಿಯಷ್ಟು ಇಲ್ಲದಿದ್ದರೂ ಅಲ್ಲಲ್ಲಿ ಶೋಷಣೆಯ ವಿರುದ್ಧ ಪ್ರತಿಭಟನೆ ನಡೆಯುತ್ತಿದೆ. ಇಂದಿನ ನಾಯಕರು ವಿಚಾರವಂತರಾಗಿ ಸಾಗಬೇಕಿದೆ. ಅಂಬೇಡ್ಕರ್‌ರವರ ತತ್ವಸಿದ್ಧಾಂತವನ್ನು ತಮ್ಮ ಸಂಘಟನೆಯ ಮುಖ್ಯ ಅಂಶವಾಗಿ ಮಾಡಿಕೊಳ್ಳಬೇಕಿದೆ.

ಪ್ರಶ್ನೆ : ದಲಿತ ಕಾವ್ಯದ ಕಾಲ ಮುಗಿದು ಹೋಯಿತೆ?

ಉತ್ತರ : ದಲಿತ ಕಾವ್ಯಕ್ಕೆ ಕೊನೆಯೇ ಇಲ್ಲ. ಪ್ರಬುದ್ಧ ಸಮಾಜ ನಿರ್ಮಾಣದ ತನಕ ದಲಿತ ಕಾವ್ಯ ಇದ್ದೇ ಇರುತ್ತದೆ. ಸಾಮಾಜಿಕ ಸಮಾನತೆ, ಆರ್ಥಿಕಸಮಾನತೆ ನಿರ್ಮಾಣವಾಗಬೇಕಿದೆ. ಹೊಸತಲೆಮಾರಿನ ಯುವಕರು ಶೋಷಣೆಯ ವಿರುದ್ಧ ಕಾವ್ಯರಚಿಸುವ ಅವಶ್ಯಕತೆ ಇದೆ. ದಲಿತ

ಕಾವ್ಯ ಈ ಮಣ್ಣಿನ ಮೂಲ ನಿವಾಸಿಗಳ ಕಾವ್ಯವಾಗಿದೆ. ಜಾನಪದ ಸಾಹಿತ್ಯದಂತೆ ದಲಿತ ಸಾಹಿತ್ಯಕ್ಕೆ ಕೊನೆಯೇ ಇಲ್ಲ.

ಪ್ರಶ್ನೆ : ದಲಿತರು ಬರುವರು ದಾರಿಬಿಡಿ; ದಲಿತರ ಕೈಗೆ ರಾಜ್ಯ ಕೊಡಿ ಎಂದು ಆ ದಿನ ಕಾವ್ಯ ಬರೆದಿದ್ದೀರಿ, ಆದರೆ ಶೋಷಿತರಿಗೆ ಅಧಿಕಾರ ಇಂದೂ ಕೂಡ ಸಾಧ್ಯವಾಗಿಲ್ಲ, ಇದಕ್ಕೆ ಕಾರಣವೇನು?

ಉತ್ತರ : ದಲಿತರು ರಾಜಕೀಯವಾಗಿ ಒಂದಾಗಬೇಕು. ಓಟಿನ ಮಹತ್ವವನ್ನು ಅರಿತುಕೊಳ್ಳಬೇಕು. ಸಾಂದರ್ಭಿಕ ತೃಪ್ತಿಗಳನ್ನು ಬಿಟ್ಟು ಭವಿಷ್ಯದ ಬದುಕನ್ನು ಕುರಿತು ಮಾತನಾಡಬೇಕು. ವಿಚಾರ ಸಂಕಿರಣಗಳ ಮೂಲಕ ವಿದ್ಯಾರ್ಥಿಗಳನ್ನು ಜಾಗೃತಗೊಳಿಸಬೇಕು. ಈ ರೀತಿಯ ಕೆಲಸ ಉತ್ತರ ಪ್ರದೇಶದಲ್ಲಿ ನಡೆದಿರುವುದರಿಂದ ದಲಿತ ಮಹಿಳೆ ಮುಖ್ಯ ಮಂತ್ರಿಯಾಗಿ ರಾಜ್ಯವನ್ನು ಮುನ್ನಡೆಸುತ್ತಿದ್ದಾರೆ. ಅಲ್ಲಿನ ಬಹುಜನರಿಗೆ ಸ್ವಾಭಿಮಾನ ಮತ್ತು ಆತ್ಮಗೌರವವನ್ನು ನೀಡಿದ್ದಾರೆ. ಎಲ್ಲಿಯ ತನಕ ದಲಿತರು ಜಾಗೃತರಾಗುವುದಿಲ್ಲವೋ ಅಲ್ಲಿನ ತನಕ ಅಧಿಕಾರ ಪಡೆಯಲು ಸಾಧ್ಯವಿಲ್ಲ.

ಪ್ರಶ್ನೆ : ಅಂಬೇಡ್ಕರ್‌ರವರ ಸಂವಿಧಾನದ ಆಶಯ ಈಡೇರದಿರಲು ಕಾರಣವೇನು?

ಉತ್ತರ : ನಮ್ಮನ್ನು ಆಳುವ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಜಾಗೃತರಾಗಬೇಕು. ಆಳುವ ಸರ್ಕಾರದ ಮೇಲೆ ಒತ್ತಡ ತಂದು ಸಂವಿಧಾನದ ಆಶಯ ಈಡೇರಿಸುವಂತೆ ಪ್ರಜಾಪ್ರಭುತ್ವ ಸರ್ಕಾರವನ್ನು ಒತ್ತಾಯಿಸಬೇಕು. ಶೋಷಿತರು ಆಳುವ ವರ್ಗವಾಗಬೇಕು. ಸಂವಿಧಾನದ ಆಶಯವನ್ನು ಈಡೇರಿಸಬೇಕು.

ಪ್ರಶ್ನೆ : ನಿಮ್ಮ ಮುಂದಿನ ಸಾಹಿತ್ಯ ರಚನೆ ಹೇಗೆ ಸಾಗಿದೆ?

ಉತ್ತರ : ನನ್ನ ಸಾಹಿತ್ಯ ರಚನೆ ನಡೆಯುತ್ತಿದೆ. ನನ್ನ ಆತ್ಮ ಚರಿತ್ರೆಯಾದ ಊರುಕೇರಿಯ ಭಾಗ – ೩ ನ್ನು ಬರೆಯುತ್ತಿದ್ದೇನೆ. ಮೊದಲಿನಂತೆ ಕಾವ್ಯ ಬರೆಯಲು ಸಾಧ್ಯವಿಲ್ಲವೇನೋ, ಆದರೂ ಕಾವ್ಯವನ್ನು ಕೂಡ ಬರೆಯುತ್ತಿದ್ದೇನೆ.

ಪ್ರಶ್ನೆ : ಪ್ರಸ್ತುತ ಮತಾಂತರದ ಬಗ್ಗೆ ನಿಮ್ಮ ನಿಲುವೇನು?

ಉತ್ತರ : ಅಂಬೇಡ್ಕರ್ ಹೇಳುತ್ತಾರೆ ಹಿಂದೂ ಧರ್ಮವೆಂಬುವುದು ಉರಿಯುತ್ತಿರುವ ಮನೆಯಂತೆ, ಅಲ್ಲಿ ನೀವು ಇದ್ದರೆ ಸುಟ್ಟು ಬೂದಿಯಾಗುವುದು ಖಂಡಿತಾ ಎನ್ನುತ್ತಾರೆ. ದಲಿತರ ದೃಷ್ಟಿಯಲ್ಲಿ ಮತಾಂತರ

ಎಂಬುವುದಕ್ಕಿಂತ ಮಿಗಿಲಾಗಿ 'ಬೌದ್ಧ ಧರ್ಮದ ಕಡೆಗೆ ಮರಳಿ ಮನೆಗೆ' ಎಂಬ ಪರಿಕಲ್ಪನೆ ಮುಖ್ಯವಾಗುತ್ತದೆ. ಈ ದೇಶದ ಮೂಲ ಧರ್ಮವಾದ ಬೌದ್ಧ ಧರ್ಮಕ್ಕೆ ದಲಿತರು ಮರಳಿ ಹೋಗುವುದು ಸರಿಯಾದ ಮಾರ್ಗವಾಗಿದೆ. ಮತಾಂತರ ವೈಯಕ್ತಿಕ ವಿಷಯ ಮತ್ತು ಮತಾಂತರಗೊಳ್ಳುವುದು ಅವರವರ ಹಕ್ಕು. ಅದನ್ನು ತಡೆಯುವುದು ತಪ್ಪು ಹಾಗೂ ಪ್ರಜಾಪ್ರಭುತ್ವ ವಿರೋಧಿಯಾಗುತ್ತದೆ.

ಪ್ರಶ್ನೆ : ಇಂದಿನ ವಿದ್ಯಾರ್ಥಿ ಸಮುದಾಯಕ್ಕೆ ನಿಮ್ಮ ಸಲಹೆ ಏನು?

ಉತ್ತರ : ವಿದ್ಯಾರ್ಥಿಗಳು ಹೊಸ ಹೊಸ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು. ಪ್ರಗತಿಪರ ಆಲೋಚನೆಯನ್ನು ಬೆಳೆಸಿಕೊಳ್ಳಲು ಸಂವಿಧಾನ ಬದ್ಧವಾಗಿ ನಡೆದುಕೊಳ್ಳಬೇಕು. ಸಾಹಿತ್ಯ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಬೇಕು. ಸಮಾಜದ ಅಸಮಾನತೆ ವಿರುದ್ಧ ಹೋರಾಟಮಾಡಬೇಕು. ತಮ್ಮ ಗುರಿ–ಉದ್ದೇಶಗಳನ್ನು ಸ್ಪಷ್ಟಪಡಿಸಿಕೊಂಡು ಅವುಗಳ ಈಡೇರಿಕೆಗಾಗಿ ದುಡಿಯಬೇಕು.

ಪ್ರಶ್ನೆ : ಜಾತಿ ವಿನಾಶ ಮಾಡಲು ಇರುವ ಮಾರ್ಗಗಳಾವುವು?

ಉತ್ತರ : ಜಾತಿ ಎಂಬುವುದು ದೊಡ್ಡಗೋಡೆಯಾಗಿ ಬೆಳೆಯತೊಡಗಿದೆ. ಜಾತಿ ಮಾನವ ಸಮಾಜಕ್ಕೆ ಅಂಟಿಕೊಂಡಿರುವ ಕೊಳಕು. ಇದರ ವಿರುದ್ಧ ಹಲವಾರು ಮಹಾದಾರ್ಶನಿಕರು ಹೋರಾಡಿದ್ದಾರೆ. ಬುದ್ಧ, ಬಸವ, ಫುಲೆ, ಪೆರಿಯಾರ್, ಶಾಹುಮಹಾರಾಜ್, ನಾರಾಯಣಗುರು, ನಾಲ್ವಡಿಕೃಷ್ಣರಾಜ ಒಡೆಯರ್, ಅಂಬೇಡ್ಕರ್ ಮುಂತಾದ ಚಿಂತಕರು. ಜಾತಿ ವಿನಾಶವಾಗಬೇಕಾದರೆ ಸಂವಿಧಾನದ ಆಶಯ ಈಡೇರಬೇಕು. ಹಳ್ಳಿಗಳಲ್ಲಿ ಆಂದೋಲನಗಳು ಪ್ರಾರಂಭವಾಗಬೇಕು. ಅಂತರ್‌ಜಾತಿ ವಿವಾಹ, ಅಂತರ್‌ಜಾತಿ ಭೋಜನ ನಡೆಯಬೇಕು. ಎಲ್ಲ ಜಾತಿಯ ಜನರು ಕೂಡ ಜಾತಿವಿನಾಶಕ್ಕಾಗಿ ಸಂಕಲ್ಪಪಟ್ಟು ಹೋರಾಡಬೇಕು. ಮೇಲ್ಜಾತಿಯವರಲ್ಲಿ ಅಸ್ಪೃಶ್ಯತೆಯ ಬಗ್ಗೆ ಪಾಪಪ್ರಜ್ಞೆ, ಶೋಷಿತರಲ್ಲಿ ಜಾಗೃತಿ ಪ್ರಜ್ಞೆ ಬೆಳೆಯಬೇಕು.

ಪ್ರಶ್ನೆ : ಕರ್ನಾಟಕ ಸರ್ಕಾರ ಜಾರಿಗೆ ತರುತ್ತಿರುವ ಗೋಹತ್ಯೆ ನಿಷೇಧ ಕಾಯ್ದೆಯ ಬಗ್ಗೆ ನಿಮ್ಮ ನಿಲುವೇನು?

ಉತ್ತರ : ಪ್ರತಿಯೊಬ್ಬ ಭಾರತೀಯ ಪ್ರಜೆಯು ಅವರವರ ಸಂಸ್ಕೃತಿಗೆ ಅನುಗುಣವಾಗಿ ನಡೆದುಕೊಳ್ಳುತ್ತಾನೆ. ಆಹಾರ ಎನ್ನುವುದು ಸೇವಿಸುವ ವ್ಯಕ್ತಿಗೆ ಬಿಟ್ಟ ವಿಚಾರ. ಪ್ರತಿಯೊಬ್ಬರ

ಆಹಾರವನ್ನು ಗೌರವಿಸಬೇಕು. ಇದು ಸಂವಿಧಾನದ ನಿಯಮವೂ ಹೌದು. ತಿನ್ನುವ ಆಹಾರವನ್ನು ಕಿತ್ತುಕೊಳ್ಳುವುದು ಪ್ರಜಾಪ್ರಭುತ್ವ ವಿರೋಧಿಯಾಗುತ್ತದೆ.

ಪ್ರಶ್ನೆ : ದಲಿತ ಸಂಘಟನೆಗಳು ತಮ್ಮ ಹೆಸರನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆ ಇದೆಯೇ?

ಉತ್ತರ : ಹೆಸರನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆ ಇಲ್ಲ. ಸಂಘಟನೆಗಳು ಪ್ರಾಮಾಣಿಕವಾಗಿ ನಡೆದುಕೊಳ್ಳಬೇಕು. ಶೋಷಣೆಯ ವಿರುದ್ಧ ಹೋರಾಡಬೇಕು. ಜನ ಸಾಮಾನ್ಯರು ಒಪ್ಪಿಕೊಳ್ಳುವ ಹಾಗೆ ನಡೆದುಕೊಂಡಾಗ ಮಾತ್ರ ಸಂಘಟನೆ ಪ್ರಸಿದ್ಧಿಪಡೆಯಲು ಸಾಧ್ಯ.

ಪ್ರಶ್ನೆ : ಅಂಬೇಡ್ಕರ್‌ರವರ ಸಿದ್ಧಾಂತ ಕುರಿತು ಮಾತನಾಡುವ ಬಿ.ಎಸ್.ಪಿ. ರಾಜಕೀಯ ಪಕ್ಷ ಕುರಿತು ನಿಮ್ಮ ಅಭಿಪ್ರಾಯವೇನು?

ಉತ್ತರ : ಬಿ.ಎಸ್.ಪಿ ಉತ್ತಮ ರಾಜಕೀಯ ಪಕ್ಷವಾಗಿದೆ. ಆ ಪಕ್ಷ ಅಂಬೇಡ್ಕರ್‌ರ ಆಶಯದಂತೆ ನಡೆದುಕೊಳ್ಳುತ್ತಿದೆ. ಉತ್ತರ ಪ್ರದೇಶದಲ್ಲಿ ದಲಿತರಿಗೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಸರ್ವಜನರ ನಡಿಗೆ ಸೋದರತ್ವದ ಕಡೆಗೆ ಎಂಬ ಬಿ.ಎಸ್.ಪಿ ಪಕ್ಷದ ನಿಲುವು ಸಮಾಜ ಪೂರಕವಾಗಿದೆ. ಆ ಪಕ್ಷ ಕರ್ನಾಟಕದಲ್ಲಿ ಬೆಳೆಯಬೇಕಾಗಿದೆ. ವಿದ್ಯಾರ್ಥಿ ಯುವ ಜನತೆ ಆ ಪಕ್ಷದ ಕಡೆ ಆಕರ್ಷಣೆಯಾಗುತ್ತಿರುವುದು ಆರೋಗ್ಯಕರ ಸಂಗತಿಯಾಗಿದೆ. ಬಿ.ಎಸ್.ಪಿ. ಪಕ್ಷವೂ ತಮ್ಮ ಸಿದ್ಧಾಂತದಲ್ಲಿ ಬುದ್ಧ, ಬಸವ, ಪೆರಿಯಾರ್, ಫುಲೆ, ಶಾಹು, ನಾಲ್ವಡಿ, ಅಂಬೇಡ್ಕರ್‌ರವರುಗಳ ಚಿಂತನೆಗಳನ್ನು ಅಳವಡಿಸಿಕೊಂಡು ಸಾಗುತ್ತಿದೆ. ಆ ಪಕ್ಷಕ್ಕೆ ಭವಿಷ್ಯವಿದೆ.

ಪ್ರಶ್ನೆ : ನಿಮ್ಮನ್ನು ದಲಿತಕವಿ ಎಂದು ಕರೆದು ಸೀಮಿತಗೊಳಿಸುತ್ತಿದ್ದಾರೆಯೇ? ನೀವು ಬಹುಜನ ಕವಿಯಲ್ಲವೇ?

ಉತ್ತರ : ನಾನು ಕನ್ನಡದ ಕವಿ. ಆದರೂ ನನ್ನ ಜನ ಪ್ರೀತಿಯಿಂದ 'ನಮ್ಮ ದಲಿತ ಕವಿ' ಎಂದು ಕರೆದಾಗ ಪ್ರೀತಿಯಿಂದ ಒಪ್ಪಿಕೊಂಡಿದ್ದೇನೆ. ಮೀಸಲು ವಿಂಗಡಿಸುವ ಸಂದರ್ಭದಲ್ಲಿ ದಲಿತ ಕವಿ ಎಂದು ಕರೆದಾಗ ವಿರೋಧಿಸಿದ್ದೇನೆ. ನಾನು ಕೇವಲ ದಲಿತರನ್ನು ಕುರಿತು ಸಾಹಿತ್ಯ ರಚಿಸಲಿಲ್ಲ. ಈ ದೇಶದಲ್ಲಿ ಶೋಷಣೆಗೆ ಒಳಗಾದ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ರೈತರು, ಕೂಲಿಕಾರ್ಮಿಕರು, ಮಹಿಳೆಯರನ್ನು ಒಳಗೊಂಡಂತೆ ಸಾಹಿತ್ಯ ರಚಿಸಿದ್ದೇನೆ. ನಾನು ಬಹುಜನ ಕವಿ.

ಪ್ರಶ್ನೆ : ಅಂದು ವೀರಾವೇಷದ ಸಿದ್ಧಲಿಂಗಯ್ಯ ಇಂದು ಮೌನಿಯಾದ ಸಿದ್ಧಲಿಂಗಯ್ಯ ಕಾರಣ?

ಉತ್ತರ : ಮಾನವನ ಜೀವನ ಒಂದೇ ರೀತಿಯಲ್ಲಿ ಇರಲು ಸಾಧ್ಯವಿಲ್ಲ. ಪ್ರತಿಭಟಿಸುವ ರೀತಿ ಬೇರೆ ಬೇರೆಯಾಗಿರುತ್ತದೆ. ಮೌನವು ಕೂಡ ಒಂದು ಪ್ರತಿಭಟನೆ. ಮೌನವಾಗಿದ್ದ ಕಾರಣಕ್ಕೆ ವ್ಯವಸ್ಥೆಯೊಂದಿಗೆ ರಾಜಿಯಾಗುತ್ತೇವೆ ಎಂಬುದು ಸತ್ಯಕ್ಕೆ ದೂರವಾಗಿರುತ್ತದೆ. ಎಂದಿಗೂ ಸಿದ್ಧಾಂತದೊಂದಿಗೆ ಮಾತ್ರ ರಾಜಿ ಇಲ್ಲ. ಕಾಲಘಟ್ಟದಿಂದ ನಾನು ಎಂದಿಗೂ ತತ್ವ ಸಿದ್ಧಾಂತದಲ್ಲಿ ರಾಜಿಮಾಡಿಕೊಂಡವನೇ ಅಲ್ಲ. ಅಲ್ಲಲ್ಲಿ ಸಿಕ್ಕ ಅವಕಾಶಗಳಲ್ಲಿ ಪ್ರತಿಭಟಿಸುತ್ತಾ ಬಂದಿದ್ದೇನೆ. ಮುಂದೇನೂ ಕೂಡ ಪ್ರತಿಭಟಿಸುತ್ತೇನೆ.

ಪ್ರಶ್ನೆ : ನಿಮ್ಮನ್ನು ಇತ್ತೀಚಿನ ದಿನಗಳಲ್ಲಿ ಸಿದ್ಧಲಿಂಗಯ್ಯ ಮಾಜಿ ಸಾಹಿತಿ ಹಾಲಿ ರಾಜಕಾರಣಿ ಎಂದು ಕರೆಯುತ್ತಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ : ನಾನು ಎಲ್ಲೂ ರಾಜಕೀಯದಲ್ಲಿ ಚುನಾವಣೆಗೆ ಸ್ಪರ್ಧಿಸಿಲ್ಲ. ಯಾವುದೇ ಪಕ್ಷದ ಬಾವುಟ ಹಿಡಿದು ಚುನಾವಣೆ ಪ್ರಚಾರ ಮಾಡಲಿಲ್ಲ. ಕೊಟ್ಟ ಅವಕಾಶವನ್ನು ಬಳಸಿಕೊಂಡು ವಿಧಾನಪರಿಷತ್‌ನಲ್ಲಿ ಶೋಷಿತರ ಪರವಾಗಿ ಮಾತನಾಡಿದ್ದೇನೆ. ಜೀತಪದ್ಧತಿ, ದೇವದಾಸಿ ಪದ್ಧತಿ, ಅಗ್ನಿಶಾಮಕರ ಸಮಸ್ಯೆ, ಮಹಿಳೆಯರ ಸಮಸ್ಯೆ, ಸ್ಲಂ ನಿವಾಸಿಗಳ ಸಮಸ್ಯೆ, ಅಸ್ಪೃಶ್ಯತೆ ಮುಂತಾದ ವಿಷಯಗಳನ್ನು ಸದನದಲ್ಲಿ ಚರ್ಚಿಸಿದ್ದೇನೆ. ಶೋಷಿತರಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಿದ್ದೇನೆ. ನಾನು ಯಾವುದೇ ರಾಜಕೀಯ ಪಕ್ಷದ ಪರ ಅಲ್ಲ. ಶ್ರೀಸಾಮಾನ್ಯರಪರ ವಿಧಾನ ಪರಿಷತ್‌ನಲ್ಲಿ ಶೋಷಿತರ ಸಮಸ್ಯೆ ಕುರಿತು ಸತತ ೩ ಗಂಟೆಗಳ ಕಾಲ ಭಾಷಣ ಮಾಡಿದ್ದೇನೆ. ಪೌರಕಾರ್ಮಿಕರನ್ನು ಕುರಿತು ೧ ಗಂಟೆ ವಿಧಾನ ಪರಿಷತ್‌ನಲ್ಲಿ ಭಾಷಣ ಮಾಡಿದ್ದೇನೆ. ನಾನು ಎಂದಿಗೂ ವ್ಯವಸ್ಥೆಯೊಂದಿಗೆ ರಾಜೀಮಾಡಿಕೊಂಡಿಲ್ಲ.

ಪ್ರಶ್ನೆ : 'ಏಕಲವ್ಯ' ನಾಟಕದ ಮೂಲಕ ಏನನ್ನು ಹೇಳಲು ಹೊರಟಿದ್ದೀರಾ?

ಉತ್ತರ : ಏಕಲವ್ಯ ನಾಟಕದ ಮೇಲೆ ಫುಲೆ, ಪೆರಿಯಾರ್, ಅಂಬೇಡ್ಕರ್ ಈ ಎಲ್ಲಾ ಚಿಂತಕರು ಪ್ರಭಾವ ಬೀರಿದ್ದಾರೆ. ಏಕಲವ್ಯ ವಿದ್ಯೆ ಕಲಿಯಬೇಕು ಎನ್ನುವ ಚಿಂತನೆ ಶೋಷಿತರ ಮನದಾಳದ ಮಾತಾಗಿದೆ.

ಪ್ರಶ್ನೆ : ಮುಂದೆ ರಾಜಕೀಯ ಪ್ರವೇಶ ಮಾಡುತ್ತೀರಾ?

ಉತ್ತರ : ರಾಜಕೀಯ ಪ್ರವೇಶಮಾಡುವ ಕುರಿತು ನಾನು ಆಲೋಚನೆ ಮಾಡಿಲ್ಲ. ಪ್ರಸ್ತುತದಲ್ಲಿ ಒಬ್ಬ ಪ್ರಜ್ಞಾವಂತ ನಾಗರೀಕ ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೇನೆ. ಬಂದ ಅವಕಾಶವನ್ನು ಬಳಸಿಕೊಂಡು ಜನರಿಗೆ ಸಹಾಯಮಾಡುವ ಕೆಲಸಮಾಡುತ್ತಿದ್ದೇನೆ. ಶೋಷಿತರು ತಮ್ಮ ತಮ್ಮ ನಡುವಿನ ದ್ವಂದ್ವತೆಗಳನ್ನು ಬಿಟ್ಟು ಹೊಂದಾಗಿ ರಾಜಕೀಯ ಅಧಿಕಾರ ಪಡೆದು ಪ್ರಬುದ್ಧರಾಗಬೇಕು ಎನ್ನುವುದು ನನ್ನ ಬಯಕೆ.

ಪ್ರಶ್ನೆ : ಪ್ರಗತಿಪರ ಚಿಂತಕರಾದ ಕಿ.ರಂ. ನಾಗರಾಜ ಮತ್ತು ನಿಮ್ಮ ನಡುವಿನ ಒಡನಾಟ ಹೇಗಿತ್ತು?

ಉತ್ತರ : ಕಿ.ರಂ. ನಾಗರಾಜರವರು ನಿಜವಾದ ಪ್ರಗತಿಪರ ಚಿಂತಕರು. ಅವರಿಂದ ನಾನು ಬಹಳ ಕಲಿತಿದ್ದೇನೆ. ಅವರು ನನ್ನನ್ನು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ನನ್ನ 'ಹೊಲೆಮಾದಿಗರ ಹಾಡು' ಕೃತಿ ಪ್ರಕಟವಾದಾಗ ನಾನಿನ್ನು ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದೆ. ಕಿ.ರಂ. ಅವರು ಬಸವನ ಗುಡಿಯಿಂದ ಮಲ್ಲೇಶ್ವರದಲ್ಲಿದ್ದ ಕೂರ್ಗ್ ಪ್ರಿಂಟರ್ಸ್‌ಗೆ ಕರಡು ತಿದ್ದಲು ಬಾಡಿಗೆ ಸೈಕಲ್‌ನಲ್ಲಿ ಹೋಗಿ ಬರುತ್ತಿದ್ದರು. ಅವರು 'ಹೊಲೆಮಾದಿಗರ ಹಾಡು' ಕೃತಿಯನ್ನು ಪ್ರಕಟಮಾಡಲು ಮನಸ್ಸು ಮಾಡದಿದ್ದರೆ ನನ್ನ ಕವಿತೆಗಳು ಕತ್ತಲೆಯಲ್ಲಿಯೇ ಉಳಿಯುತ್ತಿದ್ದವು. ನಾನು ಎಂದೆಂದಿಗೂ ಪ್ರೊ॥ ಕಿ.ರಂ. ನಾಗರಾಜರವರಿಗೆ ಋಣಿಯಾಗಿರುತ್ತೇನೆ. ಅವರಿಂದ ನಾನು ಸಮಾಜ, ಸಾಹಿತ್ಯ, ರಾಜಕೀಯ, ಸಂಸ್ಕೃತಿ ಇತ್ಯಾದಿ ವಿಷಯಗಳನ್ನು ಅಧ್ಯಯನ ಮಾಡುವ ಕ್ರಮವನ್ನು ಕಲಿತಿದ್ದೇನೆ. ಅವರೊಬ್ಬ ಆಧುನಿಕ ಸೂಫಿಸಂತರು. ಮೌಖಿಕ ಪರಂಪರೆಯ ಮಹಾಜ್ಞಾನಿ. ಹೆಚ್ಚು ಬರೆಯಲಿಲ್ಲ. ಮಾತು ಮಾತು, ಮಾತು, ಮಾತಿನ ಮೂಲಕ ತನ್ನನ್ನು ಅನಾವರಣಗೊಳಿಸುತ್ತಾ ಹೋದರು. ಜಾತಿ, ಮತ, ಪಂಥ ಎಲ್ಲವನ್ನು ಮೀರಿ ಬೆಳೆದವರು. ಕನ್ನಡ ವಿಮರ್ಶಾ ಕ್ಷೇತ್ರವನ್ನು ಜೀವಂತವಾಗಿ ಮುಂದುವರಿಸಲು ಕಾವ್ಯ, ನಾಟಕವನ್ನು ಜೀವವಿಟ್ಟುಕೊಂಡು ನೋಡಬೇಕು, ಅನುಭವಿಸಬೇಕು ಎಂಬುದನ್ನು ಕಲಿಸಿಕೊಟ್ಟರು. ಹೊಸ ಕೃತಿ ನಾಟಕ, ಕಾವ್ಯ ಬಂದಾಗ ಜನ ಸಂಭ್ರಮಿಸುವ ಬಗೆಯನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಹೇಳಿಕೊಟ್ಟರು. ಕಾವ್ಯಕ್ಕೆ ಜೀವ ತುಂಬುತ್ತಿದ್ದ ಮಹಾ ಅನುಭಾವಿ ಸಂತ ಕಿ.ರಂ. ನಾಗರಾಜರವರು.

ಪ್ರಶ್ನೆ : ನೀವು ಸಾವಿರಾರು ನದಿಗಳು ಕವನ ಸಂಕಲನದಿಂದ ಏನನ್ನು ಹೇಳಲು ಬಯಸಿದ್ದೀರಾ?

ಉತ್ತರ : ಪ್ರಸ್ತುತ ಸಂದರ್ಭದಲ್ಲಿ ಮನುವಾದಿ ವೈದಿಕ ವ್ಯವಸ್ಥೆ ಸಮಾಜದ ಎಲ್ಲಾ ಮಜಲುಗಳನ್ನು ಆಕ್ರಮಿಸಿಕೊಂಡು ಜೀವವಿರೋಧಿ ಸಂಸ್ಕೃತಿಯನ್ನು ಬಿತ್ತುತ್ತಿದೆ. ಇದರ ವಿರುದ್ಧ ಶೋಷಿತರು ಸಾವಿರಾರು ನದಿಗಳ ರೂಪದಲ್ಲಿ ಒಂದೇ ಬಾರಿಗೆ ಮುನ್ನುಗ್ಗಿ ಹೋರಾಟ ಮಾಡಬೇಕಾದ ಅವಶ್ಯಕತೆ ಇದೆ. ತಮ್ಮ ಹೋರಾಟದಲ್ಲಿ ಆಕ್ರೋಶದ ಜೊತೆಗೆ ವೈಚಾರಿಕ ಚಿಂತನಾಕ್ರಮವನ್ನು ಮೈಗೂಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ನಾನು 'ಸಾವಿರಾರು ನದಿಗಳು' ಎಂದು ಕವನ ಸಂಕಲನಕ್ಕೆ ಹೆಸರು ಕೊಡಲು ಕಾರಣ ಹೋರಾಟವೆನ್ನುವುದು ಸಾಗರೋಪಾದಿಯಾಗಿ ಸಾಗಬೇಕು. ಸಾಗರವು ಎಲ್ಲ ಅಡೆತಡೆಗಳನ್ನು ಮೆಟ್ಟಿ ಹೇಗೆ ಸಾಗುತ್ತದೆಯೋ ಹಾಗೆ ಶೋಷಿತರು ಒಂದಾಗಿ ತಮ್ಮ ಅಡೆತಡೆಗಳು, ಒಳ ಜಗಳಗಳು, ಪಂಗಡಗಳು, ತಾರತಮ್ಯಗಳು ಮುಂತಾದ ವಿಷಯಗಳ ಕಡೆಗೆ ಗಮನಕೊಡದೆ ಹೋರಾಟ ಮಾಡಬೇಕು.

ಪ್ರಶ್ನೆ : ಪಂಚಮ ಮತ್ತು ನೆಲಸಮ ನಾಟಕಗಳ ಬಗ್ಗೆ ನಿಮ್ಮ ಅಭಿಪ್ರಾಯ?

ಉತ್ತರ : 'ಪಂಚಮ' 'ನೆಲಸಮ' ಎರಡು ಕೂಡ ನನ್ನ ಅನುಭವದ ಮೂಲಕ ಮೂಡಿಬಂದ ನಾಟಕಗಳು. ಪಂಚಮರು ಎಂದು ಈ ದೇಶದ ದಲಿತರನ್ನು ಕರೆಯುತ್ತಾರೆ. 'ಪಂಚಮ' ನಾಟಕದಲ್ಲಿ ಆಧುನಿಕತೆಯೊಳಗಿನ ಶೋಷಣೆ ಹೇಗೆ ವಿದ್ಯಾವಂತ ಸಮುದಾಯದ ಮೇಲೆ ನಡೆಯುತ್ತದೆ ಎಂಬುದನ್ನು ತಿಳಿಯಬಹುದಾಗಿದೆ. 'ನೆಲಸಮ' ನಾಟಕವು ದಲಿತರು ಶೋಷಿತರ ಬದುಕು ನೆಲಸಮವಾಗುತ್ತಿರುವ ಬಗೆಯನ್ನು ತಿಳಿಸುತ್ತದೆ. 'ನೆಲಸಮ' ನಾಟಕದಲ್ಲಿ ಆಳುವ ಜನರ ಪ್ರಭುತ್ವ ದಬ್ಬಾಳಿಕೆಯನ್ನು ತಿಳಿಸಲಾಗಿದೆ. ಇವೆರಡು ನಾಟಕಗಳು ಶೋಷಿತರನ್ನು ಜಾಗೃತಗೊಳಿಸಲು ರಚಿಸಲಾಗಿದೆ.

ಅಧ್ಯಾಯ - ೩

ದಲಿತ ಸಮಾಜದ ಪ್ರಸ್ತುತ ಸಮಸ್ಯೆಗಳು

ಭಾರತ ಸ್ವಾತಂತ್ರ್ಯವನ್ನು ಪಡೆದು ಆರು ದಶಕಗಳು ಕಳೆದಿದೆ. ಆದರೆ ಗಾಂಧೀಮಾದರಿಯ ರಾಷ್ಟ್ರ ಸ್ವಾತಂತ್ರ್ಯದ ಪರಿಕಲ್ಪನೆ ಸಾಕಾರದ ಹಂತದಲ್ಲಿದ್ದರೆ, ಅಂಬೇಡ್ಕರ್ ಮಾದರಿಯ ವ್ಯಕ್ತಿ ಸ್ವಾತಂತ್ರ್ಯದ ಪರಿಕಲ್ಪನೆ ನೆಲಕಚ್ಚಿದೆ. 'ದೈಹಿಕ ಮತ್ತು ಮಾನಸಿಕ ಗುಲಾಮಗಿರಿಯನ್ನು ನಾಶಮಾಡದೆ ದೇಶ ಸ್ವತಂತ್ರಪಡೆದರೂ ಅದು ಅಪಾಯಕಾರಿ'[೨] ಎಂಬ ಅಂಬೇಡ್ಕರ್‌ರವರ ಮಾತುಗಳು ಈ ಸಮಕಾಲೀನ ಸಂದರ್ಭದಲ್ಲಿ ಸತ್ಯವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ದಲಿತ ಸಮುದಾಯದ ಪರಿಸ್ಥಿತಿ ಹಿಂದಿಗಿಂತಲೂ ಇಂದು ಘೋರವಾಗಿದೆ. ದಲಿತರ ಜೀವಂತ ದಹನ, ದಲಿತ ಮಹಿಳೆಯರ ಮೇಲಿನ ಅತ್ಯಾಚಾರಗಳು, ಆಧುನಿಕ ಅಸ್ಪೃಶ್ಯತೆಯ ಆಚರಣೆಗಳು, ಮಲಹೊರುವ ಪದ್ಧತಿ ಎಂಬ ಕರ್ಮಕಾಂಡಗಳಂತಹ ಅಮಾನವೀಯ ಆಚರಣೆಗಳು ಬಹಿರಂಗವಾಗಿ ನಡೆಯುತ್ತಿದ್ದರೂ, ಆಳುವ ಸರ್ಕಾರವು ಸಾಧನಾ ಸಮಾವೇಶ, ಭಾರತ ಪ್ರಕಾಶಿಸುತ್ತಿದೆ ಎಂಬ ಘೋಷಣೆಗಳನ್ನು ನೀಡುತ್ತಿರುವುದು ಭಾರತ ದೇಶದ ಪ್ರಜ್ಞಾವಂತ ನಾಗರೀಕರು ತಲೆತಗ್ಗಿಸಬೇಕಾದ ವಿಷಯವಾಗಿದೆ.

ಈ ದೇಶದ ಮೂಲ ನಿವಾಸಿಗಳಾದ ದಲಿತರು ಸ್ವಾಭಿಮಾನ ಮತ್ತು ಸಹೋದರತ್ವದಿಂದ ಜೀವನ ನಡೆಸುತ್ತಿದ್ದರು. ಆದರೆ ಆರ್ಯರ ಆಗಮನದಿಂದ ಕುತಂತ್ರಕ್ಕೆ ಒಳಗಾಗಿ ವಿದ್ಯೆ, ಆಸ್ತಿ, ಅಧಿಕಾರವನ್ನು ಕಳೆದುಕೊಂಡು ತಾವು ಹುಟ್ಟಿಬೆಳೆದನೆಲೆಯಲ್ಲಿಯೇ ಪರಕೀಯರಾಗಿ ಗುಲಾಮರಾದರು. ಜಾತೀಯತೆಯಾಗಲಿ, ದಲಿತರ ಇನ್ನಿತರ ಕ್ಷೇತ್ರಗಳಲ್ಲಿ ಅಸಮಾನತೆಯಾಗಲಿ, ಬಹುಕಾಲದಿಂದಲೂ ಭಾರತೀಯ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಹಾಗೆಯೇ ಉಳಿದುಕೊಂಡು ಬಂದದ್ದನ್ನು ಕಾಣಬಹುದು. ರಾಮಾಯಣ, ಮಹಾಭಾರತ, ಗೀತೆ ಮುಂತಾದ ಹಿಂದು ಧಾರ್ಮಿಕ ಗ್ರಂಥಗಳಲ್ಲಿಯೂ ಸಹ ಶೋಷಣೆ ಬೆರೆತಿರುವುದು ನಮ್ಮೆಲ್ಲರ ಗಮನಕ್ಕೆ ಬಂದ ವಿಷಯವೇ ಆಗಿದೆ. ಮಾನವತಾಪರ ಸಂಸ್ಕೃತಿಯ ನೇತಾರ ಚಿಂತಕರಾದ ಮಹಾತ್ಮ ಜ್ಯೋತಿಬಾ ಫುಲೆ, ಶಾಹುಮಹಾರಾಜ್, ಕಬೀರ್, ಪೆರಿಯಾರ್, ಅಂಬೇಡ್ಕರ್ ಮುಂತಾದ ಮಹಾನ್ ಚಿಂತಕರು ಕೂಡ ಬದುಕಿನ ಅಸಮಾನತೆಗೆ, ಜಾತೀಯತೆ ಮೂಲದ ಅವಮಾನಕ್ಕೆ ತುತ್ತಾಗಿದ್ದಾರೆ. ಆ ಕಾರಣಕ್ಕಾಗಿಯೇ ತಮಗಾದ ಅವಮಾನ, ಶೋಷಣೆ, ಕಷ್ಟ-ನಷ್ಟ ತಮ್ಮ ಕೆಳವರ್ಗದ ಜನಾಂಗಕ್ಕೆ ಆಗಬಾರದೆಂದು

---

[೨] ಡಾ. ಮೂಡ್ನಾಕೂಡು ಚಿನ್ನಸ್ವಾಮಿ : ಒಂದು ಕೊಡ ಹಾಲಿನ ಸಮರ, ನವಕರ್ನಾಟಕ ಪ್ರಕಾಶನ, ಪುಟ-೪೮.

ಅರಿತು ಅವರಿಗೆ ಸಮಾನತೆಯ ಹಕ್ಕುಗಳನ್ನು ಶೋಷಣಾ ರಹಿತ ಬದುಕನ್ನು ಪೂರೈಸಿಕೊಡುವಲ್ಲಿ ಅವರನ್ನು ಸಮಾನತೆಯ ಹಂತಕ್ಕೆ ತರಲು ಹಗಲಿರುಳು ಶ್ರಮಿಸಿದ್ದಾರೆ.

ದಲಿತರಿಗೆ ದೊರಕುವ ಮೀಸಲಾತಿಯನ್ನು ಕಂಡು ಅಸೂಯೆಯ ಹಸಿವಿನಿಂದ ಆಕ್ರಮಣಕ್ಕೆ ಸಜ್ಜಾಗಿರುವ ಮೇಲ್ಜಾತಿಗಳು, ಜಾತಿಯ ಬೀಜ ಬಿತ್ತಿ ಜಾತಿಯನ್ನೆ ಫಲವನ್ನಾಗಿಸುವ ರಾಜಕಾರಣ ಸಮಕಾಲೀನ ಸಂದರ್ಭದಲ್ಲಿ ಬಹುದೊಡ್ಡ ಸವಾಲಾಗಿದೆ. ಇಂತಹ ಸಂದರ್ಭದಲ್ಲಿ ದಲಿತ ಸಮುದಾಯದ ಆಲೋಚನಾ ಕ್ರಮ ಕೇವಲ ಸಾಹಿತ್ಯ ಕೃಷಿ ಮಾತ್ರವಲ್ಲ, ಹೋರಾಟ ಮನೋಭಾವನೆಯ ಕೇಂದ್ರ ಬಿಂದುವಾಗಬೇಕು.

ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ದಲಿತ ಸಾಹಿತ್ಯ ಮತ್ತು ಚಳುವಳಿ ಈ ವರ್ತಮಾನದ ಸಂದರ್ಭದಲ್ಲಿ ಅಗತ್ಯವಾಗಿದೆ. ಅಂದಿಗಿಂತಲೂ ಇಂದು ಶೋಷಣೆಯ ಸ್ವರೂಪ ಬದಲಾಗಿ ತಳಸಮುದಾಯದ ಸಂಸ್ಕೃತಿಯನ್ನೇ ಬೇರುಸಹಿತ ಸುಟ್ಟು ಹಾಕುವ ಪ್ರಯತ್ನಗಳು ಬಹಿರಂಗವಾಗಿಯೇ ನಡೆಯುತ್ತಿವೆ. ಆದುದರಿಂದ ಆ ದಶಕದ ಸಾಹಿತ್ಯ ಮತ್ತು ಚಳುವಳಿಯನ್ನು ಮುಂದುವರಿಸುವುದು ಅವಶ್ಯಕವಾಗಿದೆ. ಅಂದು ಸೃಷ್ಟಿಯಾದ ಸಾಹಿತ್ಯದ ಮರು ಓದು ಈ ಕಾಲಕ್ಕೆ ಅಗತ್ಯವಾಗಿದೆ.

ದಲಿತರಿಗೆ ಹಸಿವು ಬಹುದೊಡ್ಡ ಸವಾಲಾಗಿದೆ. ಶತಶತಮಾನಗಳಿಂದಲೂ ಹಸಿವು ನೀಗಿಸಿಕೊಳ್ಳಲು ಉಳ್ಳವರ ಮನೆಯಲ್ಲಿ ಜೀವನ ಪರ್ಯಂತವಾಗಿ ಜೀತಗಾರಿಕೆಯನ್ನು ಮಾಡುತ್ತಾ ಬರುತ್ತಿದ್ದಾರೆ. ಹೊತ್ತು ಗಂಜಿಗಾಗಿ ಧಣಿಗಳನ್ನು ದೇವರೆಂದು ತಿಳಿದು ಅವರಿಗೆ ಸಲಾಮು ಹೊಡೆಯುತ್ತಾ ಜೀವನ ಸಾಗಿಸುತ್ತಿದ್ದಾರೆ. ತಮ್ಮ ಹೆಂಡತಿ ಮಕ್ಕಳನ್ನು ಕೂಡ ಮೇಲ್ಜಾತಿಯವರ ಮನೆಯಲ್ಲಿ ಜೀತಕ್ಕಿಳಿಸಿ ತಾವು ದುಡಿದು ಬಸವಳಿದು ಬೆಂಡಾಗಿ ಕೊನೆಯುಸಿರೆಳೆಯುವ ಪರಿಸ್ಥಿತಿ ಇಂದಿಗೂ ಜೀವಂತವಾಗಿದೆ.

ದೇವರು, ಹಣೆಬರಹ ಎಂಬ ಮೌಢ್ಯಗಳ ಆಧಾರದ ಮೇಲೆ ತಳಸಮುದಾಯದ ಜನರನ್ನು ಮೋಸಗೊಳಿಸಿ ಶೋಷಣೆಗೆ ಗುರಿಮಾಡಲಾಗಿದೆ. ಅಸ್ಪೃಶ್ಯತೆ ಮತ್ತು ಬಡತನ ದೇವರು ಕೊಟ್ಟಶಾಪವೆಂದು ಹೇಳಿ ಅವರಲ್ಲಿ ಮೌಢ್ಯತೆಯನ್ನು ತುಂಬಲಾಗಿದೆ. ಎಲ್ಲಾ ನಿರ್ಧಾರಗಳಿಗೂ ದೇವರೇ ಕಾರಣ ಆದುದರಿಂದ ಅವನಾಜ್ಞೆಗೆ ನಾವು ಪಾಲಕರಾಗಬೇಕು ಎಂಬ ಕಣ್ಣು ತೆರೆದುಕೊಂಡೇ ದಿಕ್ಕುತಪ್ಪಿಸುವ ಸಿದ್ಧಾಂತಗಳು ನಮ್ಮೊಳಗೆ ಬೇರೂರಿವೆ. ಕಂಪ್ಯೂಟರ್ ಮತ್ತು ವಿಜ್ಞಾನದ ಯುಗವೆಂದು

ಕರೆಯುತ್ತಿರುವ ಈ ಸಂದರ್ಭದಲ್ಲಿ ದಲಿತರು ವೈಜ್ಞಾನಿಕತೆಯನ್ನು ಸ್ವೀಕರಿಸದೇ ದೈವಿಕ ನೆಲೆಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಿರುವುದು ವಾಸ್ತವ. ಸತ್ಯವೇ ಮುಖ್ಯ ಎಂದೇಳಿದ ಬುದ್ಧ ಹುಟ್ಟಿದ ಈ ನಾಡಿನ ದುರಂತವಾಗಿದೆ.

ಇಂದಿನ ಯುವ ಜನತೆ ದಿಕ್ಕುತಪ್ಪಿ ಸ್ವಾರ್ಥ ಸಾಧಕರಾಗಿದ್ದಾರೆ. ಅಂಬೇಡ್ಕರ್‌ರವರು ಸ್ವಾಭಿಮಾನಿಯಾಗಿ ಹಿಂದೂ ಧರ್ಮದೊಳಗಿನ ಬಿರುಕುಗಳನ್ನು ನಾಡಿನುದ್ದಕ್ಕೂ ಸಾರಿ ಹೇಳಿದರು. 'ಮನುಷ್ಯನಿಗೆ ಮುಖ್ಯವಾದದ್ದು ಸ್ವಾಭಿಮಾನದ ಬದುಕು. ಆದ್ದರಿಂದ ಜಾತಿ ಎಂಬ ಅವಮಾನದ ಕವಚವನ್ನು ಕಿತ್ತು ಒಗೆಯಬೇಕು. ಅದಕ್ಕಾಗಿ ಇರುವ ಮಾರ್ಗ ಧರ್ಮಾಂತರವೊಂದೇ'[೩] ಎಂಬುದನ್ನು ಅಂಬೇಡ್ಕರ್ ಸರ್ವ ಶೋಷಿತರಿಗೂ ಹೇಳಿದರು. ಇಂದಿಗೂ ಅಂಬೇಡ್ಕರ್‌ರವರನ್ನು ಒಂದು ಜನಾಂಗದ ನಾಯಕರು ಎಂದೇಳಿ ಅವರನ್ನು ಮಿತಿಗೊಳಿಸುವ ಹುನ್ನಾರ ನಡೆಯುತ್ತಿದೆ.

ಈ ಸಮಕಾಲೀನ ಸಂದರ್ಭದಲ್ಲಿ ವಿದ್ಯೆ ಉಳ್ಳವರು ಮತ್ತು ಮೇಲ್ಜಾತಿಯವರು ಗುತ್ತಿಗೆ ಪಡೆದ ವಸ್ತುವಿನಂತಾಗಿದೆ. ಹಣವಂತರು ಸರ್ಕಾರದಿಂದ ಅನುಮೋದನೆ ಪಡೆದು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣವನ್ನು ವ್ಯಾಪಾರದ ವಸ್ತುವನ್ನಾಗಿ ಮಾಡಿದ್ದಾರೆ. ತಮ್ಮ ತಮ್ಮ ಜಾತಿ–ಜನಾಂಗಗಳಿಗೆ ಪ್ರವೇಶ ಕಲ್ಪಿಸಿ ವಿದ್ಯೆಯಿಂದ ತಳ ಸಮುದಾಯದ ಜನರನ್ನು ವಂಚಿಸುವ ಹುನ್ನಾರ ನಡೆಯುತ್ತಿದೆ. ಪ್ರತಿಷ್ಠಿತ ಬಡಾವಣೆಯ ಶಾಲೆಗಳಲ್ಲಿ ಹತ್ತಿರದ ಕೊಳಗೇರಿಯ ಮಕ್ಕಳಿಗೆ ಕಲಿಯಲು ಅವಕಾಶಕೊಡಿ ಎಂಬ ಸರ್ಕಾರದ ನಿಲುವು ತಪ್ಪು ಎಂಬುದು ಶಾಲೆಯ ಬಂಡವಾಳಶಾಹಿಗಳ ವಾದವಾಗಿವೆ. ಕಾರಣ, ತಮ್ಮ ಮಕ್ಕಳೊಂದಿಗೆ ಕೊಳಗೇರಿಯ ಮಕ್ಕಳು ಕಲಿತರೆ ತಮ್ಮ ಮಕ್ಕಳ ಭವಿಷ್ಯ ಹಾಳಾಗುತ್ತದೆ ಎಂಬ ಅವೈಜ್ಞಾನಿಕ ಅಭಿಪ್ರಾಯವನ್ನು ಮಂಡಿಸುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ ಜಾತಿ ವ್ಯವಸ್ಥೆ ತನ್ನ ಬಿಗಿಮುಷ್ಠಿಯಲ್ಲಿ ದಲಿತ ಜನರನ್ನು ಸಿಕ್ಕಿಸಿಕೊಂಡಿದೆ. ದಲಿತ ಸಮಾಜದಲ್ಲಿ ಸಾಮಾಜಿಕ ಪಿಡುಗುಗಳಾದ ಜಾತಿಪದ್ಧತಿ, ಅಸ್ಪೃಶ್ಯತೆ, ಶೋಷಣೆ, ಬಡತನ, ನಿರುದ್ಯೋಗ ತಾಂಡವವಾಡುತ್ತಿವೆ. ಅಸ್ಪೃಶ್ಯತೆ ರೂಪಾಂತರ ಹೊಂದುತ್ತಾ ಅಂತರ್ಮುಖವಾಗುತ್ತಿದೆ. ಜಾತಿ ಸರ್ವರಂಗದಲ್ಲಿ ತನ್ನ ಕರಾಳ ಹಸ್ತಗಳನ್ನು ಚಾಚಿದೆ. ಮಾನವ ಕೇಂದ್ರಿತವಾಗಬೇಕಾದ ಚಿಂತನೆಗಳು ಜಾತಿ ಧರ್ಮ ಕೇಂದ್ರವಾಗುತ್ತಿವೆ. ಮಾನವ ಧರ್ಮ ವಿನಾಶದ ಅಂಚಿನಲ್ಲಿದೆ. ಧರ್ಮದ ಹೆಸರಿನಲ್ಲಿ ಪ್ರಜಾಪ್ರಭುತ್ವ ನಾಶಗೊಳ್ಳುತ್ತಿದೆ. ದೈವ ಮೂಲಸಿದ್ಧಾಂತ

---

[೩] ಡಾ. ಮೂಡ್ನಾಕೂಡು ಚಿನ್ನಸ್ವಾಮಿ : ಒಂದು ಕೊಡ ಹಾಲಿನ ಸಮರ, ನವಕರ್ನಾಟಕ ಪ್ರಕಾಶನ, ಪುಟ–೫೬

ಮಾನವನ ಜೀವನವನ್ನು ಆಕ್ರಮಿಸಿಕೊಂಡು ಅವನ ಆಲೋಚನ ಕ್ರಮವನ್ನು ನಿಯಂತ್ರಿಸಿದೆ. ಇಂದು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಮೂಲಕ ಬೆಳೆಯಬೇಕಾದ "ಪ್ರಜಾಪ್ರಭುತ್ವ" ವ್ಯವಸ್ಥೆ ಹುಸಿಗೊಳ್ಳುತ್ತಿವೆ. ಹೀಗಾಗಿ ದಲಿತರು ತಮ್ಮ ಸಂವಿಧಾನಿಕ ಹಕ್ಕುಗಳಿಗಾಗಿ ಹೋರಾಟ ಮಾಡುವುದು ಪ್ರಸ್ತುತ ಎನಿಸುತ್ತದೆ.

ದಲಿತ ಸಮುದಾಯವು ಜಾಗತೀಕರಣವೆಂಬ ಕುದುರೆಯೊಂದಿಗೆ ಸಾಗಲು ಸಾಧ್ಯವಾಗುತ್ತಿಲ್ಲ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಈ ಸಮುದಾಯ ವಿದ್ಯೆಯಿಂದ ವಂಚಿತವಾಗಿತ್ತು. ಆಧುನಿಕ ಜಗತ್ತು ಇಂಗ್ಲಿಷ್ ಭಾಷಾ ಕೇಂದ್ರಿತವಾಗಿದೆ. ಇಲ್ಲಿ ದಲಿತರು ಪ್ರವೇಶ ಪಡೆಯುವುದು ಕಷ್ಟಸಾಧ್ಯ ಕೆಲಸ. ಖಾಸಗೀಕರಣ ಇಂದು ದಲಿತ ಸಮುದಾಯವನ್ನು ದಿಕ್ಕುತಪ್ಪಿಸುತ್ತಿದೆ. ಖಾಸಗೀಕಂಪನಿಗಳು ಪ್ರತಿಭೆಯ ಹೆಸರಿನಲ್ಲಿ ತಮ್ಮ ಮೇಲ್ಜಾತಿಯರಿಗೆ ಉದ್ಯೋಗ ನೀಡಿ ದಲಿತರನ್ನು ದೂರತಳ್ಳುವ ಹುನ್ನಾರಗಳನ್ನು ಅಮೂರ್ತವಾಗಿ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ದಲಿತರಿಗೆ ದುಡಿಯಲು ಭೂಮಿಯೂ ಇಲ್ಲದೆ; ಖಾಸಗೀಕರಣದಿಂದ ನೌಕರಿ ಪಡೆಯಲು ಸಾಧ್ಯವಾಗದೆ; ಬಂಡವಾಳ ತೊಡಗಿಸಿ ವ್ಯಾಪಾರ ಮಾಡಲು ಹಣವೂ ಕೂಡ ಇಲ್ಲದೆ ಮತ್ತೆ ಜೀತಗಾರಿಕೆಯನ್ನು ಅವಲಂಬಿಸಬೇಕಾದ ಪರಿಸ್ಥಿತಿ ಒದಗಿಬಂದಿದೆ.

ನಮ್ಮನ್ನಾಳುತ್ತಿರುವ ಸರ್ಕಾರಗಳು ಬಂಡವಾಳಶಾಹಿಗಳ ಪರ ಮತ್ತು ಮೇಲ್ಜಾತಿಗಳಪರ ಕಾನೂನುಗಳನ್ನು ರೂಪಿಸುತ್ತಿದ್ದಾರೆ. ಬಹು ಸಂಸ್ಕೃತಿಯನ್ನು ನಾಶಗೊಳಿಸಿ ತನಗೆ ಇಚ್ಛೆ ಬಂದಂತೆ ಏಕ ಸಂಸ್ಕೃತಿಯನ್ನುರೂಪಿಸಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಗೋಮಾಂಸ ನಿಷೇಧ ಕಾಯ್ದೆ ಒಂದು ಸೂಕ್ತ ಉದಾಹರಣೆಯಾಗಿದೆ. ಆಹಾರ ಎಂಬುವುದು ತಿನ್ನುವ ವ್ಯಕ್ತಿಗೆ ಬಿಟ್ಟ ವಿಚಾರ. ಅದನ್ನು ಕಿತ್ತುಕೊಳ್ಳುವುದು ಅಥವಾ ತಿನ್ನದಂತೆ ಕಾನೂನು ರೂಪಿಸುವುದು ಪ್ರಜಾಪ್ರಭುತ್ವವಿರೋಧಿಯಾಗುತ್ತದೆ. ದಲಿತರನ್ನು ಪ್ರಸ್ತುತದಲ್ಲಿ ಭಾಷೆ, ಬಣ್ಣ ಮತ್ತು ಆಹಾರದ ಹೆಸರಿನಲ್ಲಿ ಶೋಷಣೆ ಮಾಡಲಾಗುತ್ತಿದೆ. ಹಳ್ಳಿಗಳಲ್ಲಿ ದಲಿತರು ಸಾಮಾಜಿಕ ಬಹಿಷ್ಕಾರದಂತಹ ಅವ್ಯವಸ್ಥಿತ ಕೃತ್ಯಗಳಿಗೆ ಒಳಗಾಗಿ ಪ್ರಾಣಿಗಳಂತೆ ಜೀವನ ಸಾಗುತ್ತಿದ್ದಾರೆ. ಸಾರ್ವಜನಿಕ ಪ್ರದೇಶಗಳಾದ ಬಾವಿ, ಕೆರೆ, ದೇವಸ್ಥಾನ ಮುಂತಾದ ಸ್ಥಳಗಳಿಗೆ ಪ್ರವೇಶ ಪಡೆಯಲು ಸಾಧ್ಯವಾಗುತ್ತಿಲ್ಲ. ಸ್ವತಂತ್ರ್ಯ ಬಂದು ಆರು ದಶಕಗಳು ಕಳೆದರು ಕೂಡ ರಾಜ್ಯದಲ್ಲಿ ಒಬ್ಬ ದಲಿತ ಮುಖ್ಯಮಂತ್ರಿ, ಕೇಂದ್ರದಲ್ಲಿ ಪ್ರಧಾನ ಮಂತ್ರಿ ಗದ್ದುಗೆಯನ್ನು ಏರಲು ಸಾಧ್ಯವಾಗಲಿಲ್ಲ. ಇದು ದಲಿತರ ಹಿಂದುಳಿದಿರುವಿಕೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಕೇಸರೀಕರಣವೆಂಬುವುದು ದಲಿತ ಸಮುದಾಯವನ್ನು ಆಕ್ರಮಿಸಿಕೊಂಡಿದೆ. ದೇವರು ಧರ್ಮದ ಹೆಸರಿನಲ್ಲಿ ತಳಸಮುದಾಯದ ಜನ ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ಎಲ್ಲಾ ಶೋಷಣೆಗೂ ನಮ್ಮ ಹಿಂದಿನ ಜನ್ಮದ ಫಲವೇ ಕಾರಣವೆಂದು ನಂಬಿದ್ದಾರೆ. ಊರಿಂದ ಹೊರಗೆ ವಾಸಮಾಡುತ್ತಾ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ದಲಿತರ ಕೇರಿಗಳಿಗೆ ಬರುವ ಜನಪ್ರತಿನಿಧಿಗಳು ಅಂಗೈಯಲ್ಲೇ ಕೈಲಾಸ ತೋರಿಸಿ ಆಸೆ, ಆಮಿಷಗಳನ್ನು ನೀಡಿ ಗದ್ದುಗೆ ಏರುತ್ತಾರೆ. ಆದರೆ ದಲಿತ ಸ್ಥಿತಿ ಮತ್ತೆ ಅವನತಿಯ ಅಂಚಿಗೆ ಸರಿಯುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ.

ಇಂದು ಹಳ್ಳಿಗಳಲ್ಲಿನ ದಲಿತರು ವಾಸಮಾಡುವ ಕೇರಿಗಳನ್ನು ಗಮನಿಸಿದರೆ ಹಂದಿಗೂಡಿನಂತಹ ಮನೆಗಳು, ಕೊರಕಲು ರಸ್ತೆಗಳು, ಒಳಚರಂಡಿ ವ್ಯವಸ್ಥೆ ಇಲ್ಲದೆ ನಿಂತ ನೀರಲ್ಲಿ ಕೊಳೆತು ನಾರುತ್ತಿರುವ ವಾಸನೆ, ರಾತ್ರಿಯಾದರೆ ಕತ್ತಲು ಪ್ರಪಂಚ, ಅಜ್ಞಾನದಿಂದ ಕುಡಿದ ಅಮಲಿನಲ್ಲಿ ಬೈಗುಳಗಳ ತಾಣ, ಅಲ್ಲಿನ ದಲಿತ ಹೆಣ್ಣು ಮಕ್ಕಳ ಮೇಲೆ ಮೇಲ್ಜಾತಿ ಜನರ ಮೋಸದ ಆಟಗಳು ಇವೆಲ್ಲ ಭಾರತ ಪ್ರಕಾಶಿಸುತ್ತಿದೆ ಎಂದು ಹೇಳುವ ದೇಶದಲ್ಲಿ ಕಂಡುಬರುತ್ತಿರುವ ದಲಿತರ ಜೀವಂತ ದೃಶ್ಯಗಳು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳ ಇಂಗ್ಲಿಷ್‌ಯುಗದಲ್ಲಿ ದಲಿತ ಯುವಕರು ಪೈಪೋಟಿ ನೀಡಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ. ಕಂಪ್ಯೂಟರ್, ವಿಜ್ಞಾನ, ತಂತ್ರಜ್ಞಾನ ಇನ್ನೂ ಕೂಡ ತಳಸಮುದಾಯದ ಜನವನ್ನು ತಲುಪಿಲ್ಲ. ಅವುಗಳಿಂದ ವಂಚಿತರಾಗಿ ಬದುಕುತ್ತಿದ್ದಾರೆ. ಪೋಲಿಸರು, ಕಾನೂನುಗಳು ಉಳ್ಳವರ ಪರವಾಗಿ ಮಾತನಾಡುತ್ತಿವೆ. ಇಪ್ಪತ್ತೊಂದನೇ ಶತಮಾನದಲ್ಲೂ ಮಲಹೊರುವ ಪದ್ಧತಿ ಜೀವಂತವಾಗಿದೆ. ಜಾತಿಗೋಡೆ ಬೆಳೆಯುತ್ತಾ ತನ್ನ ಕದಂಬ ಬಾಹುಗಳನ್ನು ಚಾಚುತ್ತಿದೆ. ಮೇಲ್ಜಾತಿಯವರಿಗೆ ಜಾತಿ ಪ್ರತಿಷ್ಠೆಯ ಸಂಕೇತವಾಗಿದೆ.

ಅಸಮಾನತೆ ಇಂದು ಗಟ್ಟಿಗೊಳ್ಳುತ್ತಿದೆ. ಪ್ರಜಾಪ್ರಭುತ್ವ ಸರ್ಕಾರವೆಂದು ಅಧಿಕಾರಕ್ಕೆ ಬರುವ ರಾಜಕಾರಣಿಗಳು ಸ್ವಾರ್ಥಿಗಳಾಗುತಿದ್ದಾರೆ. ಇಲ್ಲಿ ಭಾರತದೊಳಗೊಂದು ಭಾರತ ನಿರ್ಮಾಣವಾಗುತ್ತಿದೆ. ಮೇಲ್ಜಾತಿಯವರದೊಂದು ದೇಶ, ದಲಿತರದೊಂದು ದೇಶ. ಮೇಲ್ಜಾತಿಯವರು ಪ್ರಕಾಶಿಸುತ್ತಿದ್ದಾರೆ. ಅವರ ಮಕ್ಕಳು ಇಂಗ್ಲಿಷ್ ಶಾಲೆಗಳಲ್ಲಿ ಗಗನಕ್ಕೆ ಏರುತ್ತಿದ್ದಾರೆ. ದಲಿತರು ನರಳುತ್ತಾ ಅವರ ಮಕ್ಕಳ

ಜೀತಮಾಡುತ್ತಿದ್ದಾರೆ. ಇವರಿಗೆ ಪೌಷ್ಠಿಕ ಆಹಾರದ ಕೊರತೆಯಿಂದ ರೋಗಗಳು ಆವರಿಸಿಕೊಳ್ಳುತ್ತಿವೆ. ಅಂಗವಿಕಲರಾಗುತ್ತಿದ್ದಾರೆ. ಒಂದು ರೀತಿಯಲ್ಲಿ ದಲಿತರ ಸ್ಥಿತಿ ಜೀವಂತ ಶವದಂತಾಗಿದೆ.

ಇಂದು ದಲಿತ ಸಂಘಟನೆಗಳು ಜೀವಂತಿಕೆಯನ್ನು ಕಳೆದುಕೊಂಡಿವೆ. ತನ್ನ ವೈಚಾರಿಕ ಸಿದ್ಧಾಂತವನ್ನು ಸಡಿಲಗೊಳಿಸಿಕೊಂಡಿವೆ. ಬಲಪಂಥೀಯ ಸಂಘಪರಿವಾರಗಳೊಂದಿಗೆ ಗುರುತಿಸಿಕೊಳ್ಳುತ್ತಿರುವ ದಲಿತ ಮುಖಂಡರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಮಾರ್ಗ ಹುಡುಕದೆ ಸ್ವಾರ್ಥ ಅಧಿಕಾರಕ್ಕಾಗಿ ದಲಿತ ಚಳುವಳಿಯು ನೂರಾರು ಭಾಗ ಮಾಡುತ್ತಿದ್ದಾರೆ. ಎಪ್ಪತ್ತರ ಕಾಲದ ಚಳುವಳಿ ಇಂದು ಅವಶ್ಯಕವಾಗಿದೆ. ಮುಖವಾಡ ಧರಿಸದ ನಾಯಕರು ಬೇಕಾಗಿದ್ದಾರೆ. ಅಂಬೇಡ್ಕರ್ ರೀತಿ ಯಾವ ತುರ್ತು ಪರಿಸ್ಥಿತಿಯಲ್ಲೂ ಸಿದ್ಧಾಂತದಲ್ಲಿ ರಾಜಿಮಾಡಿಕೊಳ್ಳದ ನೇರ, ದಿಟ್ಟ, ಪ್ರಮಾಣಿಕ ನಾಯಕತ್ವಬೇಕಾಗಿದೆ. ಮನುವಾದಿಗಳ ಕುತಂತ್ರವನ್ನು ಅರಿತು ಹೋರಾಡಬೇಕಾದರೆ ಇಡೀ ಶೋಷಿತ ಸಮುದಾಯವೇ ಒಂದಾಗಿ ಜಾಗೃತರಾಗಬೇಕು ಈ ದೇಶದ ಮೂಲನಿವಾಸಿ ಬಹುಜನರಾದ ಶೂದ್ರ, (ರೈತರು–ಕಾರ್ಮಿಕರು) ಅತಿಶೂದ್ರ, ಅಲ್ಪ ಸಂಖ್ಯಾತ ಸಮುದಾಯಗಳೆಲ್ಲ ಸಾಗರೋಪಾದಿಯಾಗಿ ಹೋರಾಡುವ ಪರಿಸ್ಥಿತಿ ಒದಗಿಬಂದಿದೆ.

ಒಟ್ಟಾರೆ ಹೇಳುವುದಾದರೆ ಪ್ರಸ್ತುತ ಸಮಾಜದಲ್ಲಿ ದಲಿತರ ಸಮಸ್ಯೆಗಳು ಹೆಮ್ಮರವಾಗಿ ಬೆಳೆದುನಿಂತಿವೆ. ಇದಕ್ಕೆಲ್ಲ ಪರಿಹಾರ, ಶೋಷಿತರು ಸಾಂಸ್ಕೃತಿಕವಾಗಿ ಜಾಗೃತರಾಗಬೇಕು, ಚುನಾವಣೆಯ ಸಂದರ್ಭದಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ದಲಿತ ನಾಯಕರು ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಚಿಂತಕರ ಚಿಂತನೆಗಳನ್ನು ಅರ್ಥಮಾಡಿಕೊಂಡು ತಮ್ಮ ನಿಲುವುಗಳನ್ನು ಭದ್ರಪಡಿಸಿಕೊಳ್ಳಲು ಕಂಕಣಬದ್ಧರಾಗಬೇಕು. ವಿಶ್ವವಿದ್ಯಾಲಯದ ದಲಿತ ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಜೊತೆಗೆ ಸಮಾಜದ, ಪ್ರಜಾಪ್ರಭುತ್ವದ ಉಳಿವಿಗಾಗಿ ಚಿಂತನೆಮಾಡಬೇಕು. ದಲಿತ ಸರ್ಕಾರಿ ನೌಕರರು ಸ್ವಾರ್ಥಿಗಳಾಗದೆ ತಮ್ಮ ಜನಾಂಗದ ಏಳಿಗೆಗೆ ಬದ್ಧರಾಗಬೇಕು. ಆಗ ಮಾತ್ರ ಸ್ವಲ್ಪ ಮಟ್ಟಿಗಾದರೂ ಶೋಷಣೆ ಮುಕ್ತ ಸಮಾನತಾ ಸಮಾಜ ಕಟ್ಟಬಹುದು.

ಅಧ್ಯಾಯ – ೪

ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು

ಭಾರತವು ಒಂದು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣತಂತ್ರವೆಂದು ಭಾರತದ ಸಂವಿಧಾನವು ಘೋಷಿಸಿದೆ. ಈ ಮೌಲ್ಯಗಳ ಆಧಾರದ ಮೇಲೆ ಭಾರತವನ್ನು ನಿರ್ಮಿಸುವುದು ಪ್ರಜಾಪ್ರಭುತ್ವ ಸರ್ಕಾರವನ್ನು ಒಪ್ಪಿಕೊಂಡಿರುವ ಭಾರತೀಯರಾದ ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯನ್ನು ನಮ್ಮ ಸಂವಿಧಾನದಲ್ಲಿ ಬಹುಮುಖ್ಯವಾಗಿ ಸೇರಿಸಲಾಗಿದೆ. ಅಬಲರೆಲ್ಲ ಸೌಲಭ್ಯಗಳನ್ನು ಪಡೆದು ಸಬಲರಾಗಬೇಕು. ಶೋಷಿತರು ಈ ದೇಶದ ಸಂಪೂರ್ಣ ಸಂಪನ್ಮೂಲದಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಪಾಲುಗಾರಿಕೆಯನ್ನು ಪಡೆದು ಸ್ವಾಭಿಮಾನಿಗಳಾಗಿ ಬದುಕಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ. ಅಂಬೇಡ್ಕರ್ ಒಂದು ಕಡೆ ಮಾತನಾಡುತ್ತಾ ಶತಶತಮಾನಗಳಿಂದ ಶೋಷಣೆಗೆ ಒಳಗಾಗಿ, ಮನುವಾದಿಗಳ ಕುತಂತ್ರದಿಂದ ವಿದ್ಯೆ, ಆಸ್ತಿ, ಅಧಿಕಾರವನ್ನು ಕಳೆದುಕೊಂಡು ಗುಲಾಮರಾಗಿ ಬದುಕುತ್ತಿರುವ ಈ ದೇಶದ ಮೂಲನಿವಾಸಿಗಳಾದ ಇಂದಿನ ಅಸ್ಪೃಶ್ಯರು ಮುಖ್ಯವಾಹಿನಿಗೆ ಬರಬೇಕಾದರೆ ಅವರಿಗೆ ನನ್ನ ಸಂವಿಧಾನ ದಿವ್ಯ ಔಷಧಿಯಾಗಿದೆ ಎಂದಿದ್ದಾರೆ. ಆದರೆ ಅಂಬೇಡ್ಕರ್‌ರವರ ಮಾತು ಮಾತಾಗಿಯೇ ಉಳಿಯಿತೇ ವಿನಃ ಸಮರ್ಪಕವಾಗಿ ಸಂವಿಧಾನ ಜಾರಿಗೆಯಾಗದೆ ಅಸ್ಪೃಶ್ಯರು ಇನ್ನಷ್ಟು ನೆಲಕಚ್ಚಿದ್ದಾರೆ.

ಇಪ್ಪತ್ತೊಂದನೇ ಈ ಶತಮಾನದಲ್ಲಿ ಬಹುಮುಖ್ಯವಾದ ಕೂಗು ಸಮಾನತೆಯದಾಗಿದೆ. ಬುದ್ಧ, ಬಸವ, ಫುಲೆ, ಪೆರಿಯಾರ್, ಅಂಬೇಡ್ಕರ್, ಕುವೆಂಪು ಮುಂತಾದ ಮಾನವತಾವಾದಿಗಳು ಆ ಕಾಲದಿಂದಲೂ ಕೂಡ ತಮ್ಮ ಸಾಹಿತ್ಯ ಮತ್ತು ಸಿದ್ಧಾಂತದಲ್ಲಿ ಸಮಾನತೆಯನ್ನು ಸಾರಿದರು ಮತ್ತು ಸಂಸ್ಥಾಪಿಸಲು ಪ್ರಯತ್ನಿಸಿದರು. ಆದರೆ ಇಲ್ಲಿನ ಮನುವಾದಿ ಕೊಳಕು ಮನಸ್ಸುಗಳು ಅದನ್ನು ಮೆಟ್ಟಿ ಬುಡಸಮೇತ ಸುಟ್ಟುಹಾಕುವಲ್ಲಿ ಜಾಗೃತರಾಗಿ ಸಂಘಟಿತರಾದರು.

ನಮ್ಮನ್ನಿಂದು ಆಳುತ್ತಿರುವುದು ಪ್ರಜಾಪ್ರಭುತ್ವ ಮಾದರಿಯ ಸಂವಿಧಾನವಲ್ಲ, ಬದಲಾಗಿ ಶ್ರೇಣೀಕೃತ ಸಮಾಜ ಮಾದರಿಯ ಮನುಸಂವಿಧಾನ. ಮನುಸಂವಿಧಾನವು ಎಲ್ಲಾ ನಿರ್ಧಾರಗಳಿಗೂ ದೇವರೇ ಕಾರಣವೆಂದು ತಿಳಿಸುತ್ತದೆ. ಶ್ರೇಣೀಕೃತ ಸಮಾಜವನ್ನು ಪ್ರೋತ್ಸಾಹಿಸುತ್ತದೆ. ಈ

ಮನುಧರ್ಮ ಶಾಸ್ತ್ರದ ಅಸ್ತಿತ್ವ ನಿಂತಿರುವುದೇ ವರ್ಣಾಶ್ರಮದ ಧರ್ಮದ ಮೇಲೆ. ವರ್ಣಾಶ್ರಮ ಧರ್ಮ ನಿಂತಿರುವುದು ಜಾತಿಗಳ ಮೇಲೆ. ಜಾತಿಗಳು ನಿಂತಿರುವುದು ಅಸ್ಪೃಶ್ಯತೆಯ ಮೇಲೆ. ಅಸ್ಪೃಶ್ಯತೆ ಇಲ್ಲದೆ ಮನುಧರ್ಮ ಶಾಸ್ತ್ರವಿಲ್ಲ. ಅಸ್ಪೃಶ್ಯತೆ ಇರುವುದರಿಂದಲೇ ಮೇಲ್ಜಾತಿಗಳಿಗೆ ವಿಶೇಷ ಗೌರವ, ಮನ್ನಣೆ ಇರುವುದು. ಆದುದರಿಂದ ಈ ಅಸ್ಪೃಶ್ಯತೆಯನ್ನು ಕಾಪಾಡಿಕೊಂಡು ಮನು ಸಂವಿಧಾನ ಮೂರ್ತ, ಅಮೂರ್ತವಾಗಿ ಜಾರಿಯಲ್ಲಿದೆ.

ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ಸಾಹಿತ್ಯ ಮತ್ತು ಚಳುವಳಿಯ ಮುಖ್ಯ ಉದ್ದೇಶ ಶೋಷಣೆ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವುದಾಗಿತ್ತು. ಅಲ್ಲಿಂದ ಇಲ್ಲಿಯ ತನಕ ಎಷ್ಟೇ ಈ ಮಾದರಿಯ ಚಳುವಳಿ ನಡೆದರೂ ಶೋಷಣೆ ಮುಕ್ತ ಸಮಾಜ ನಿರ್ಮಾಣ ಸಾಧ್ಯವಾಗಲಿಲ್ಲ. ಸಿದ್ಧಲಿಂಗಯ್ಯನವರು ಜನಸಾಮಾನ್ಯರ ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡಿದರು. ತಮ್ಮ ಸಾಹಿತ್ಯದಲ್ಲಿ ಸಂವಿಧಾನದ ಆಶಯಗಳನ್ನು ಅಭಿವ್ಯಕ್ತಿಸಿದರು. ಸಮಾನತೆ, ಸಹೋದರತೆ, ಸ್ವಾತಂತ್ರ್ಯ, ಜಾತ್ಯಾತೀತತೆ, ಸ್ವಾಭಿಮಾನ ಮತ್ತು ಬಹುಸಂಸ್ಕೃತಿಯ ನಿಲುವುಗಳನ್ನು ತಮ್ಮ ಸಾಹಿತ್ಯದಲ್ಲಿ ಕಟ್ಟಿಕೊಟ್ಟರು.

ಪ್ರಸ್ತುತ ಜಾತಿ ವ್ಯವಸ್ಥೆ ಹೆಮ್ಮರವಾಗಿ ಬೆಳೆದು ಎಲ್ಲೆಲ್ಲೂ ತನ್ನ ವಿಷದಬೇರುಗಳನ್ನು ಚಾಚುತ್ತಿದೆ. ಕೋಮುವಾದ, ಧರ್ಮಾಂಧತೆ, ಮತಾಂಧತೆಗಳು ಎಲ್ಲೆಡೆ ವಿಜೃಂಬಿಸುತ್ತಿವೆ. ಜಾತಿಯೆಂಬ ಭೂತ ಎಲ್ಲರ ಮೆದುಳುಗಳನ್ನು ಆಳುತ್ತಿದೆ. ಹಸಿವು, ಬಡತನ, ಅಜ್ಞಾನ, ಅನಕ್ಷರತೆ, ಅಸಮಾನತೆ, ಭ್ರಷ್ಟಾಚಾರ, ದೌರ್ಜನ್ಯಗಳು ತಾಂಡವವಾಡುತ್ತಿವೆ. ಮೇಲ್ಜಾತಿ ಎಂಬುದು ಒಂದು ಹೆಮ್ಮೆಯ, ಸ್ವಪ್ರತಿಷ್ಠೆಯ, ಗೌರವದ ವಿಷಯವಾಗಿ ಬಳಕೆಯಾಗುತ್ತಿರುವುದು ವಿಪರ್ಯಾಸವೇ ಸರಿ. ಇಂತಹ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಸಾಹಿತ್ಯದ ಮರು ಓದು ಅವಶ್ಯಕವಾಗಿದೆ. ಸಿದ್ಧಲಿಂಗಯ್ಯನವರ ಸಾಹಿತ್ಯ ಸಮಕಾಲೀನ ಚಿಂತನೆಗಳನ್ನು ಕುರಿತು ಮಾತನಾಡುತ್ತದೆ.

ಸಾಮಾಜಿಕ ಪ್ರಜ್ಞೆಯುಳ್ಳ ಕವಿ ಸಿದ್ಧಲಿಂಗಯ್ಯ ತನ್ನ ಸಮಾಜದೊಟ್ಟಿಗೆ ಬೆರೆತು ಅಲ್ಲಿನ ಸಮಸ್ಯೆಗಳನ್ನು ಆಳವಾಗಿ ಅರಿತುಕೊಂಡು ಪ್ರಾಮಾಣಿಕವಾಗಿ ಜನಪರವಾದ ಚಿಂತನೆಯನ್ನು ಕೊಡಬಲ್ಲವರಾಗಿದ್ದಾರೆ. ಆ ನಿಟ್ಟಿನಲ್ಲಿ ಸಿದ್ಧಲಿಂಗಯ್ಯನವರ ಕಾವ್ಯ ಸಮಾಜದಲ್ಲಿ ಸಮಸ್ಯೆಗಳು ಇರುವ ತನಕ ಪ್ರಸ್ತುತವಾಗುತ್ತದೆ. ಸಿದ್ಧಲಿಂಗಯ್ಯನವರ ಸಾಹಿತ್ಯ ಯಾವುದೋ ಒಂದು ಸಮುದಾಯದ ಅಭಿವ್ಯಕ್ತಿಯಾಗಿರದೆ ದೀನದಲಿತರ, ಬಡವರ, ದುರ್ಬಲರ, ಶ್ರಮಿಕರ, ರೈತರ ಹಿಂದುಳಿದ

ವರ್ಗದವರ ಮತ್ತು ಅಲ್ಪಸಂಖ್ಯಾತರ ಮುಖವಾಣಿಯಾಗಿರುವುದನ್ನು ಕಾಣಬಹುದು. ಇವರ ಸಾಹಿತ್ಯದಲ್ಲಿ ಸಾಮಾಜಿಕ ಜವಾಬ್ದಾರಿಯ ಹೊಣೆಗಾರಿಕೆ ಕಂಡುಬರುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಭಾರತ ಗುಲಾಮ ಗಿರಿಯಿಂದ ಮುಕ್ತವಾಯಿತು ಎಂಬ ಘೋಷಣೆಗಳು, ತ್ರಿವರ್ಣ ಧ್ವಜಗಳ ಜೈಕಾರ ಮುಗಿಲು ಮುಟ್ಟಿತ್ತು. ಆದರೆ ಆ ಸ್ವಾತಂತ್ರ್ಯ ಉಳ್ಳವರ ಪರವಾಯಿತೇ ವಿನಃ ಇಲ್ಲದವರ ಮನೆಯ ದೀವಿಗೆಯಾಗಲಿಲ್ಲವೆಂದು ಕವಿ ಹೇಳುತ್ತಾರೆ.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೋಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ.
ಸಮತೆಯ ಹೂವನು ಅರಳಿಸಲಿಲ್ಲ
(ನಲವತ್ತೇಳರ ಸ್ವಾತಂತ್ರ್ಯ)

ಈ ಮೇಲಿನ ಕವಿತೆ ಬ್ರಿಟಿಷರಿಂದ ಪಡೆದ ಸ್ವಾತಂತ್ರ್ಯ ಏನೆಲ್ಲ ಕರಾಳತೆಯನ್ನು ಪಡೆದುಕೊಂಡಿದೆ ಎಂಬುದನ್ನು ವಿಮರ್ಶಾತ್ಮಕವಾಗಿ ತಿಳಿಸಿಕೊಡುತ್ತದೆ. ಬಡವರ ಪಾಲಿಗೆ ಸ್ವಾತಂತ್ರ್ಯವೆಂಬುದು ಮರೀಚಿಕೆಯಾಗಿದ್ದು, ಅವರ ಬದುಕಿನಲ್ಲಿ ಯಾವ ಬಗೆಯ ಆಶಾಭಾವನೆಯನ್ನೂ ಮೂಡಿಸಿಲ್ಲ ಎಂಬುದನ್ನು ತಿಳಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸಮಾನತೆಗಾಗಿ ಕೂಗು ಎಲ್ಲ ಕಡೆ ಕೇಳಿ ಬರುತ್ತಿದೆ. ಸಿದ್ಧಲಿಂಗಯ್ಯನವರು ಸ್ವಾತಂತ್ರ್ಯ ಎಂಬುವುದು ಉಳ್ಳವರ ಪಕ್ಷವಾಗಿದೆ ಎಂದಿದ್ದಾರೆ. "ಸಮತೆಯ ಹೂವನು ಅರಳಿಸಲಿಲ್ಲ" ಎಂಬ ಮಾತು ಈ ಮುಂದಿನ ಅರ್ಥವನ್ನು ಕೊಡುತ್ತದೆ. ಸ್ವಾತಂತ್ರ್ಯವೆಂಬ ಕಪ್ಪು ಮೋಡ ತುಂಬಿದ ಮಳೆ ಬರಿಗೈಯ ನೆಲದಲ್ಲಿ ಸುರಿಯದೆ ಸದಾಜಲದಾವೃತ್ತಿಯ ಪರವಾಯಿತು ಎಂಬುದಾಗಿದೆ. ಸ್ವಾತಂತ್ರ್ಯನಂತರ ಆಧಿಕಾರಕ್ಕೆ ಬಂದ ರಾಜಕೀಯ ವ್ಯವಸ್ಥೆಯು ಶೋಷಿತರೆಲ್ಲರ ಹಂಬಲಗಳನ್ನು ನುಚ್ಚು ನೂರಾಗಿಸಿತು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರಿ ಮನಸ್ಥಿತಿ ತನ್ನೆಲ್ಲ ಕ್ರೌರ್ಯವನ್ನು ಮರೆಯತೊಡಗಿತು. ಶೋಷಿತರು ಶೋಷಿತರಾಗಿಯೇ ಮುಂದುವರೆಯುತ್ತಾ ಬಂದರು.

ಶೋಷಿತರು ಆಳುವ ವರ್ಗವಾಗಬೇಕು. ಅವರು ಅಧಿಕಾರ ಪಡೆದು ಸಬಲರಾಗಬೇಕು ಎಂಬ ಕೂಗು ದಲಿತ ಸಂಘಟನೆ ಮತ್ತು ಪ್ರಗತಿಪರ ಚಿಂತಕರ ಆಶಯವಾಗಿದೆ. ನಾನು ಸಾಯುವುದರೊಳಗೆ

ನನ್ನ ಜನ ಈ ದೇಶವನ್ನು ಆಳುವುದನ್ನು ಕಣ್ಣಾರೆ ಕಾಣಬೇಕು ಎಂಬುವುದು ಅಂಬೇಡ್ಕರ್‌ರವರ ಮನದ ಬಯಕೆಯಾಗಿತ್ತು. ಆದರೆ ಈ ಜಾತಿ ಆಧಾರಿತ ದೇಶದಲ್ಲಿ ಎಲ್ಲ ನಿರ್ಧಾರಗಳು ಉಳ್ಳವರ ಪರವಾಗಿ ನಿಯಮಗಳು ರೂಪುಗೊಳ್ಳುತ್ತಿವೆ. ಪ್ರಜಾಪ್ರಭುತ್ವ ಮರೆಯಾಗಿ ನಮಗೆ ಕಾಣುತ್ತಿರುವುದು ವಂಶಪಾರಂಪರ್ಯ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಪ್ರಜಾಪ್ರಭುತ್ವ. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ಅಂಬೇಡ್ಕರ್ ಆಶಯ ಈಡೇರುವಂತೆ ಕಾಣುತ್ತಿಲ್ಲ.

ದಲಿತರು ಬರುವರು ದಾರಿ ಬಿಡಿ
ದಲಿತರ ಕೈಗೆ ರಾಜ್ಯ ಕೊಡಿ (ದಲಿತರು ಬರುವರು)

ಈ ಮೇಲಿನ ಸಾಲುಗಳು ಶೋಷಿತರಿಗೆ ಅಧಿಕಾರಬೇಕು ಎಂಬ ಹಂಬಲವನ್ನು ಹೇಳುತ್ತವೆ. ಶೋಷಿತರು ಅಧಿಕಾರ ಪಡೆದರೆ ಸಮಾನತೆಯ ರಾಜ್ಯ ನಿರ್ಮಿಸಬಹುದು ಎಂಬುವುದಾಗಿದೆ. ಆಳುವ ವರ್ಗದ ಮೇಲೆ ಶೋಷಣೆ ನಡೆಯುವುದಿಲ್ಲ ಆದುದರಿಂದ ಶೋಷಿತರು ಆಳುವ ವರ್ಗವಾದಾಗ ಶೋಷಣೆಗೆ ತಾನಾಗಿಯೇ ಮುಕ್ತಿ ದೊರೆತಂತಾಗುತ್ತದೆ. ಅಂಬೇಡ್ಕರ್‌ರವರು ಅಧಿಕಾರ ಹೀನತೆಯೇ ಅಸ್ಪೃಶ್ಯತೆ ಎಂದಿದ್ದಾರೆ. ಈ ಮಾತಿನ ಅರ್ಥ ಅಸ್ಪೃಶ್ಯತೆ ನಾಶವಾಗಬೇಕಾದರೆ ಅಧಿಕಾರ ಪಡೆಯುವ ಮಾರ್ಗ ಕೂಡ ಒಂದು ಅಸ್ತ್ರವಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಪ್ರಗತಿಪರ ವೇದಿಕೆ ಮತ್ತು ಸಾಹಿತ್ಯಗಳಲ್ಲಿ ಕೇಳಿಬರುತ್ತಿರುವ ಮಾತೆಂದರೆ ಹಿಂದೂ ಧರ್ಮ ನಿಂತಿರುವುದು ಅಸ್ಪೃಶ್ಯತೆಯ ಮೇಲೆ; ಆದುದರಿಂದ ಅಸ್ಪೃಶ್ಯತೆಯಿಂದ ಅಸ್ಪೃಶ್ಯರು ಮುಕ್ತಿ ಪಡೆಯಬೇಕಾದರೆ ಹಿಂದೂ ಧರ್ಮ ತ್ಯಜಿಸುವುದೇ ಸೂಕ್ತಮಾರ್ಗವಾಗಿದೆ ಎಂದು:

ಜಾತಿಮತಗಳ ಮುಳ್ಳಿನ ಮೆಳೆಗೆ
ಮುಳ್ಳಾದರು ಇವರು
ತಮ್ಮನು ನುಂಗಿದ ಏಳು ಸಮುದ್ರಕೆ
ಮುಗಿಲಾದರು ಇವರು
ಹಿಂದೂ ಧರ್ಮವ ಕೊಂದರು ದಲಿತರು
ಜಮೀನುದಾರರ ಬಿಡಲಿಲ್ಲ (ದಲಿತರು ಬರುವರು)

ಈ ಮೇಲಿನ ಕವಿತೆಯು ಜಾತಿ ಮತಗಳ ಮುಳ್ಳಿನ ಮೆಳೆಯಾಗಿರುವ ಹಿಂದೂ ಧರ್ಮವನ್ನು ಬಿಟ್ಟು ಹೊಸ ಪರಿಕಲ್ಪನೆಯನ್ನು ಮೈಗೂಡಿಸಿಕೊಂಡು ವೈಚಾರಿಕ ಪ್ರಜ್ಞೆಯನ್ನು ಪಡೆದಿರುವ ಹೊಸ ತಲೆಮಾರಿನ ಜನಾಂಗವನ್ನು ಕುರಿತು ಮಾತನಾಡುತ್ತದೆ. ಹಿಂದೂ ಧರ್ಮ ಶೋಷಣೆಯ ಅಸ್ತ್ರವಾಗಿದೆ. ಧರ್ಮರಹಿತ ಮಾನವತಾ ಸಮಾಜ ಕಟ್ಟುವುದು ಸೂಕ್ತವೆನಿಸುತ್ತದೆ.

ಹಿಂದೂಗಳ ದೇವತೆಗಳನ್ನು ಅಂಬೇಡ್ಕರ್ ಒಪ್ಪುವುದಿಲ್ಲ. 'ಹಿಂದೂಗಳ ಆರಾಧ್ಯದೈವಗಳಾಗಿರುವ ರಾಮ ಮತ್ತು ಕೃಷ್ಣರ ಚಾರಿತ್ರ್ಯಕೂಡ ಹೆಮ್ಮೆ ಪಟ್ಟುಕೊಳ್ಳುವಂಥದ್ದಲ್ಲ'[4] ಎಂಬುವುದು ಅಂಬೇಡ್ಕರ್ ಅಭಿಪ್ರಾಯದಾಗಿತ್ತು.

ಹಿಂದೂ ಸನಾತನ ವ್ಯವಸ್ಥೆ ಮಾನವಜೀವನದ ಎಲ್ಲ ನಿರ್ಧಾರಗಳಿಗೂ ದೇವರೇ ಕಾರಣ ಎಂದು ಶತಶತಮಾನಗಳಿಂದ ಸಮಾಜವನ್ನು ಮೂಢನಂಬಿಕೆಯ ತಾಣವಾಗಿಸಿದೆ. ಇಂದು ದೇವರು, ಧರ್ಮದ ಹೆಸರಿನಲ್ಲಿ ಸರ್ಕಾರಗಳು ರಚನೆಯಾಗುತ್ತಿವೆ. ಭಾರತದಂತಹ ಪ್ರಜಾಪ್ರಭುತ್ವದ ದೇಶದಲ್ಲಿ ದೈವ ಕೇಂದ್ರಿತವಾಗಿ ನಡೆದುಕೊಳ್ಳುತ್ತಿರುವುದು ಬಹುದೊಡ್ಡ ದುರಂತವಾಗಿದೆ. ಪ್ರಸ್ತುತ ಪ್ರಜಾಪ್ರಭುತ್ವದ ಸರ್ಕಾರಗಳ ಹೆಸರಿನಲ್ಲಿ ದೈವ ಕೇಂದ್ರಿತ ಮಠಗಳು ನಮ್ಮನಾಳುತ್ತಿವೆ.

ದೇವರು ಆತ್ಮ ಕಂಡವರಿಲ್ಲ
ಶಾಸ್ತ್ರಪುರಾಣ ಸುಳ್ಳಿನ ಕಂತೆ
ಅರಮನೆ ಗುರುಮನೆ ಮೋಸದ ಜಾಲ
ಮುಗಿಯಲಿ ಶೋಷಣೆ ಮಾಡುವ ಕಾಲ (ಭೂಮಿ ಗುಂಡಾಗಿದೆ)

ಈ ಮೇಲಿನ ಕವಿತೆಯು ಇಂದು ದೇವಸ್ಥಾನಗಳು ದಲಿತರ ಬೆತ್ತಲೆ ಮೆರವಣಿಗೆ, ದೇವದಾಸಿ ಪದ್ಧತಿ, ಅಸ್ಪೃಶ್ಯತೆ ಮುಂತಾದ ಅನೀತಿಗಳ ತಾಣಗಳಾಗುತ್ತಿವೆ. ಮಠಗಳು ತ್ಯಾಗ, ನಿಷ್ಠೆ, ಪ್ರಾಮಾಣಿಕತೆಯನ್ನು ಬಿಟ್ಟು ಅನೈತಿಕ ಚಟುವಟಿಕೆಗಳ ಕೇಂದ್ರವಾಗುತ್ತಿವೆ ಎಂಬುವುದನ್ನು ತಿಳಿಸುತ್ತದೆ. ಈ ಕವಿತೆಯು ಶೋಷಣೆ ಮುಕ್ತ ಸಮಾಜದ ನಿರ್ಮಾಣವಾಗಬೇಕು ಎಂಬ ಆಶಯವನ್ನು ಕುರಿತು ಮಾತನಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರದ ಬೊಕ್ಕಸ ಬಹುಪಾಲು ದೇವಸ್ಥಾನಗಳ ನಿರ್ಮಾಣ ಅಥವಾ ಜೀರ್ಣೋದ್ಧಾರದ ಕೆಲಸದಲ್ಲಿ ವ್ಯಯವಾಗುತ್ತಿದೆ. ಈ ಸನಾತನ ಮನುವಾದಿಗಳು ಕಲ್ಲು, ಮಣ್ಣಿಗೂ ದೇವರ ಕಲ್ಪನೆ ಕೊಟ್ಟು ಸುಳ್ಳು ಪುರಾಣಗಳನ್ನು ಬಿತ್ತಿ, ವಾಸ್ತವ ಸತ್ಯವನ್ನು ದೂರಮಾಡಿದ್ದಾರೆ.

ಚಪ್ಪಟೆ ಎಂಬುದು ಅಪ್ಪಟ ಸುಳ್ಳು
ಸೂರ್ಯ ಚಂದ್ರ ದೇವರು ಅಲ್ಲ
ಕಲ್ಲು ಮಣ್ಣಿನ ಮುದ್ದೆಯು ಅಣ್ಣಾ
ಕಟ್ಟು ಕಥೆಗಳ ನಂಬಿ ಕೆಟ್ಟೆರಿ
ಭೂಮಿ ಗುಂಡಾಗಿದೆ. (ಭೂಮಿ ಗುಂಡಾಗಿದೆ)

---

[4] ಡಾ. ಬಿ.ಯು.ಸುಮಾ : ಡಾ.ಬಿ.ಆರ್ ಅಂಬೇಡ್ಕರ್, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ-೪೮,
(ವರ್ತಮಾನದೊಂದಿಗೆ ಮುಖಾಮುಖಿ)

ಈ ಕವಿತೆ ವಾಸ್ತವದ ವಿಜ್ಞಾನವನ್ನು ಕುರಿತು ಮಾತನಾಡುತ್ತದೆ. ಪ್ರಕೃತಿ ನಿರ್ಮಿತ ವ್ಯವಸ್ಥೆಗೆ ದೇವರ ನಾಮ ಹಾಕಿ ಜನರನ್ನು ವಂಚಿಸುವ ಕಾಲ ಇಂದಿಗೂ ಚಾಲ್ತಿಯಲ್ಲಿದೆ. ರಾಮಸೇತು ವಿಚಾರ ಇದಕ್ಕೆ ಸಾಕ್ಷಿಯಾಗಿದೆ. ಆದರೆ ಸಿದ್ಧಲಿಂಗಯ್ಯನವರ ಕವಿತೆ ಸತ್ಯವನ್ನು ಬಿಚ್ಚಿಡುತ್ತದೆ.

ಬುದ್ಧನ ಪ್ರಕಾರ ಮಾನವನನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಮಾರ್ಗವೇ ಧರ್ಮ. ಮನುಷ್ಯ–ಮನುಷ್ಯರ ನಡುವೆ ಧರ್ಮ ಸೇತುವೆಯಾಗಬೇಕು. ಸಂಬಂಧ ಬೆಸೆದು ಮಾನವೀಯತೆಯ ದೀವಿಗೆಯಾಗಬೇಕು. ಆದರೆ ಧರ್ಮಾಂಧತೆ ಮನುಷ್ಯನ ಎಲ್ಲಾ ವಲಯಗಳನ್ನು ಆಕ್ರಮಿಸಿಕೊಂಡಿದೆ. ಮಾನವ ಪ್ರೀತಿಯನ್ನು ಸಂಕುಚಿತಗೊಳಿಸಿ ಅವನ ಮಾತಿಗೆ ಯಾವುದೇ ಮೌಲ್ಯವಿಲ್ಲದೆ ಅವನನ್ನು ನಿರ್ಜೀವಿಯನ್ನಾಗಿಸಲು ಹೊರಟಿದೆ. ಇಂತಹ ಈ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ 'ಸುಂಟರಗಾಳಿ' ಕವಿತೆ ಮನುಷ್ಯ ವಿರೋಧಿ ಧರ್ಮ ಮತ್ತು ಮತಗಳನ್ನು ಧಿಕ್ಕರಿಸುತ್ತದೆ.

ಸುಂಟರಗಾಳಿಯೊಳಗೆ ಸಿಕ್ಕಿ ಥರಥರಗುಡುವ
ಗುರುಮಠದ ಧ್ವಜದಲಿ ಧರ್ಮವಿಲ್ಲ
ಮೂಳೆ ತುಂಬಿದ ಹಣೆಗೆ ಸೊಟ್ಟಸೊಟ್ಟಗೆ ಬಳಿದ
ನಾಮ ವಿಭೂತಿಯಲ್ಲಿ ಧರ್ಮವಿಲ್ಲ

ದಕ್ಷಿಣೆಯ ರುಚಿಯುಂಡು ಉಬ್ಬಿರುವ ಒಡಲಿನಲಿ
ಜುಟ್ಟು ಜನಿವಾರದಲಿ ಧರ್ಮವಿಲ್ಲ
ಊದುಕಡ್ಡಿಯ ಅರೆದು ಮೇಲೆದ್ದ ಧೂಮದಲಿ
ಧರ್ಮಸುಳಿ ಸುಳಿಯಾಗಿ ಸುಳಿವುದಿಲ್ಲ (ಸುಂಟರಗಾಳಿ)

ಸಿದ್ಧಲಿಂಗಯ್ಯನವರು ಈ ಕವಿತೆಯಲ್ಲಿ ಸ್ವಯಂ ಘೋಷಿತ ಧರ್ಮ ಗುರುಗಳನ್ನು ವಿಡಂಬನೆ ಮಾಡುತ್ತಾರೆ. ಧರ್ಮವೆಂಬುದು ಕಲ್ಲು ಬಂಡೆಗಳಲ್ಲಿ, ಜುಟ್ಟು ಜನಿವಾರಗಳಲ್ಲಿ ಇಲ್ಲ; ಅದು ಮಾನವನ ಹೃದಯದಲ್ಲಿ ಪರಿಶುದ್ಧವಾಗಿದೆ ಎಂದಿದ್ದಾರೆ.

ಒಂದೊಂದು ಜೀವದಲಿ ಎದೆಯಾಂತರಾಳದಲಿ
ಅಡಗಿಹುದು ಪರಿಶುದ್ಧ ಧರ್ಮಸತ್ವ
ಮಾನವತೆಗಾಪತ್ತು ಬಂದೊಡನೆ ಸಿಡಿದೆದ್ದು
ರಕ್ಷಣೆಗೆ ನಿಲ್ಲುವುದು ಯೋಧನಂತೆ (ಸುಂಟರಗಾಳಿ)

ಈ ಮೇಲಿನ ಸಾಲುಗಳು ಮಾನವೀಯತೆಯ ಪರಿಶುದ್ಧತೆಯನ್ನು ಹೇಳುವುದಲ್ಲದೆ ಅದುವೇ ಧರ್ಮದ ಮೂಲ ಎಂದು ಹೇಳುತ್ತವೆ. ಮಾನವತೆಗಾಪತ್ತು ಬಂದೊಡನೆ ರಕ್ಷಣೆಗೆ ನಿಲ್ಲುವುದು ಯೋಧನಂತೆ ಎಂಬ ಸಾಲುಗಳು ಇಂದಿನ ಹೊಸಕಾಲದ ಚಿಂತನ ಕ್ರಮವಾಗಿದೆ. ಧರ್ಮವೆಂದರೆ ಕೊಲ್ಲುವುದಲ್ಲ, ಕಾಪಾಡುವುದು ಎಂಬ ಜೀವಪರ ಆಲೋಚನೆಯನ್ನು ನೀಡುತ್ತವೆ.

'ಕತ್ತೆ ಮತ್ತು ಧರ್ಮ' ಅರ್ಥಹೀನ ಆಚರಣೆಯ ಧಾರ್ಮಿಕ ನೆಲೆಯನ್ನು ವ್ಯಂಗ್ಯ ಹಾಗೂ ವಿಡಂಬನಾತ್ಮಕ ಸ್ತರದಲ್ಲಿ ಚಿತ್ರಿಸುವ ಮಹತ್ವದ ಕವಿತೆಯಾಗಿದೆ. ಭಾರತದಂತಹ ಸಾಮಾಜಿಕ ಸಂದರ್ಭದಲ್ಲಿ ಮೌಢ್ಯಗಳು ಹೇಗೆ ಆಲೋಚನಾರಹಿತ ಜನರನ್ನು ಬಹುಬೇಗ ತನ್ನ ತೆಕ್ಕೆಯೊಳಗೆ ಸೆಳೆದುಕೊಳ್ಳುತ್ತವೆ ಎಂಬುದನ್ನು ಈ ಕವಿತೆ ವಿವರಿಸುತ್ತದೆ. ತಳಸಮುದಾಯದ ಜನ ಸಾರ್ವಜನಿಕ ಸ್ಥಳಗಳಾದ ಕೆರೆ, ಬಾವಿ, ದೇವಸ್ಥಾನ ಮುಂತಾದ ಸ್ಥಳಗಳನ್ನು ನಿರ್ಮಿಸಲು ಶ್ರಮಿಕರಾಗಿ ಬೆವರು ಸುರಿಸಿ ದುಡಿದಿರುತ್ತಾರೆ. ಆದರೆ ದುರಂತವೆಂದರೆ ಅವುಗಳ ಪ್ರವೇಶದಿಂದ ವಂಚಿಸಲ್ಪಡುತ್ತಾರೆ.

ಗೋರಿ ದೇವರ ಮಹಿಮೆ ಕೊಂಡಾಟ ನಡೆದಾಗ
ತಳ್ಳಾಟ ಹೊರಗೆ ಆಗಿತ್ತು/ ಕತ್ತೆಡಿದು
ತಳವಾದ್ರು ಸಿದ್ಧಯ್ಯ ತಳ್ಳುತ್ತಾರೆ. (ಕತ್ತೆ ಮತ್ತು ಧರ್ಮ)

ಸಿದ್ದಯ್ಯನ ಪ್ರೀತಿಯ ಕತ್ತೆಯ ಗೋರಿಯನ್ನು ಹೇಗೆ ಮೇಲ್ಜಾತಿಯವರು ಆಕ್ರಮಿಸಿ ತನ್ನದಾಗಿಸಿಕೊಂಡು ಇವನನ್ನೆ ಅಲ್ಲಿ ಪರಕೀಯನನ್ನಾಗಿಸುವ ರೀತಿ ಇದು. ಇಂದು ಮನುವಾದಿ ಇತಿಹಾಸಕಾರರು ತಮ್ಮದಲ್ಲದ್ದನ್ನು ತಮ್ಮದಾಗಿಸಿಕೊಂಡು ಇಲ್ಲಿನ ಮೂಲನಿವಾಸಿಗಳನ್ನು ಪರಕೀಯರನ್ನಾಗಿಸಿರುವು ,ದು ಇದಕ್ಕೆ ಸೂಕ್ತ ಉದಾಹರಣೆಯಾಗಿದೆ.

ಅಸ್ಪೃಶ್ಯತೆಯನ್ನು ತೊಡೆದುಹಾಕುವುದಕ್ಕಾಗಿ ಈ ದೇಶದಲ್ಲಿ ಸಾಧುಸಂತರು ಪ್ರಯತ್ನಿಸಿದ್ದಾರೆ. ಆದರೆ ಇವರ ಹೋರಾಟವನ್ನೆಲ್ಲ ಪುರೋಹಿತಶಾಹಿಗಳು ಅರಗಿಸಿಕೊಂಡು ತಮ್ಮ ಇಚ್ಛೆಗನುಗುಣವಾಗಿ ಸಮಾಜವನ್ನು ರೂಪಿಸಿದ್ದಾರೆ. ಇಂದು ಕೂಡ ಸಮಾಜದಲ್ಲಿ ಜಾತಿ ವ್ಯವಸ್ಥೆ ಸ್ಥಿರವಾಗಿದೆ. ದಲಿತ ವರ್ಗವಂತೂ ಸಮಾಜದಿಂದ ದೂರವಾಗಿ ಅಸ್ಪೃಶ್ಯರಾಗಿಯೇ ಜೀವನ ನಡೆಸುತ್ತಿದ್ದಾರೆ. ಅಸ್ಪೃಶ್ಯತೆ ಎನ್ನುವುದು ಭಾರತದ ಸಮಾಜಕ್ಕಂಟಿಕೊಂಡು ಬಂದ ಅನಿಷ್ಟ ಪದ್ಧತಿ. ಈ ರಾಷ್ಟ್ರದ ವೈದಿಕ ಮನಸ್ಸುಗಳು ಭಾರತದ ಮಣ್ಣಿನಲ್ಲಿ ಇತಿಹಾಸದುದ್ದಕ್ಕೂ ಚಾಚೂ ತಪ್ಪದೆ ಮೋಸ ಮಾಡಿಕೊಂಡು ಬಂದಿವೆ. ಇವರ ಪಂಚಾಂಗವೆಂಬ ಅಲಿಖಿತ ಸಂವಿಧಾನದ ಮುಂದೆ ನಮ್ಮ ಪ್ರಜಾಪ್ರಭುತ್ವ ಮಾದರಿಯ ಸಂವಿಧಾನ ತನ್ನ ಮೌಲ್ಯವನ್ನು ಕಳೆದುಕೊಂಡಿದೆ. ಇಂದು ಭಾರತದಲ್ಲಿ ಜಾರಿಯಲ್ಲಿರುವುದು ಮೇಲ್ಜಾತಿಯವರ ಅಲಿಖಿತ ಸಂವಿಧಾನವೇ ಹೊರತು ಬೃಹತ್ ಪ್ರಬುದ್ಧ ಭಾರತ ನಿರ್ಮಾಣ ಮಾದರಿಯ ಭಾರತದ ಲಿಖಿತ ಸಂವಿಧಾನವಲ್ಲ. ಈ ದಿಸೆಯಲ್ಲಿ ಅಸಮಾನತೆ ಎನ್ನುವುದು ಸ್ಥಿರಗೊಳ್ಳುತ್ತಿದೆ. ಅಸ್ಪೃಶ್ಯತೆಯಿಂದ ಹಳ್ಳಿಗಳಲ್ಲಿ ಜನರು ಪ್ರಾಣಿಗಳಂತೆ ಜೀವನ

ಸಾಗಿಸುತ್ತಿದ್ದಾರೆ. ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದಲ್ಲಿ ಜಾತಿ ನಿರ್ಮೂಲನೆಯನ್ನು ಕುರಿತು ಮಾತನಾಡುತ್ತಾರೆ.

ಜಾತಿ ಜಾತಿಯ ನಡುವೆ
ನಿಂತ ಸಾಗರದಲ್ಲಿ
ನಮ್ಮ ಪ್ರೀತಿಯ ಹಡಗು ಮುಳುಗಿತಲ್ಲೆ (ನಿನ್ನ ಕಣ್ಣಿನ ಮಾತ)

ಜಾತಿ ಸಮಾಜದಲ್ಲಿ ಪ್ರೀತಿ–ಪ್ರೇಮಗಳೂ ಕೂಡ ಜೀವಂತಿಕೆಯನ್ನು ಕಳೆದುಕೊಳ್ಳುತ್ತವೆ. ಇಲ್ಲಿ ಜಾತಿ ಎಷ್ಟು ಭಯಾನಕವಾದುದು ಎಂಬುದನ್ನು ಸಾಗರಕ್ಕೆ ಹೋಲಿಸಿದರೆ ಜಾತಿ ಸಾಗರವಾಗಿ ಎಲ್ಲವನ್ನು ತನ್ನ ಪ್ರಭುತ್ವದಲ್ಲಿ ಹಿಡಿದಿಟ್ಟುಕೊಳ್ಳುವುದಾಗಿದೆ ಎಂದು ತಿಳಿಯಬಹುದಾಗಿದೆ.

'ಜಾತಿ ನಿರ್ಮೂಲನೆ' ಎಂಬ ಪುಸ್ತಕವನ್ನು ಬರೆದ ಡಾ. ಅಂಬೇಡ್ಕರ್ ಅವರು ಅದರಲ್ಲಿ ಗಾಂಧೀಜಿ ಹಾಕಿಕೊಂಡ ಹರಿಜನೋದ್ಧಾರ ಕಾರ್ಯಕ್ರಮಗಳನ್ನು ಪ್ರಶ್ನಿಸುತ್ತಾರೆ. ಹಾಗೆಯೇ ಅಸ್ಪೃಶ್ಯರನ್ನು ಹರಿಜನ ಎಂಬ ಹೆಸರಿನಿಂದ ಸಂಬೋಧಿಸುವುದನ್ನು ಖಂಡಿಸುತ್ತಾರೆ. ದಲಿತರು ಮಾತ್ರ ದೇವರ ಮಕ್ಕಳಾದರೆ ಮೇಲ್ಜಾತಿಯವರು ಯಾರ ಮಕ್ಕಳು ಎಂದು ಕೇಳುತ್ತಾರೆ. ಅಸ್ಪೃಶ್ಯತೆ ನಾಶವಾಗದೆ ಪ್ರಬುದ್ಧ ಭಾರತ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂಬುದು ಅಂಬೇಡ್ಕರ್‌ರವರ ಸ್ಪಷ್ಟ ನಿಲುವಾಗಿತ್ತು. ಆದರೆ ಅಸ್ಪೃಶ್ಯತೆ ಇಂದೂ ಬೃಹದಾಕಾರವಾಗಿ ಬೆಳೆದು ನಿಂತಿದೆ. ಸಾರ್ವಜನಿಕ ಸ್ಥಳಗಳಾದ ಕೆರೆ, ಬಾವಿ, ದೇವಸ್ಥಾನಗಳಂತಹ ಮುಂತಾದ ಪ್ರದೇಶಗಳು ಇಂದಿಗೂ ದಲಿತರಿಗೆ ಅವಕಾಶ ಸಿಗುತ್ತಿಲ್ಲ. ಆಳುವ ಸರ್ಕಾರ ಅಸ್ಪೃಶ್ಯರ ಬಗ್ಗೆ ಭಾಷಣ ಮಾಡುತ್ತಾ, ನುಡಿದಂತೆ ನಡೆಯದೆ ಅಪಚಾರ ಎಸಗುತ್ತಿದ್ದಾರೆ. ಸಿದ್ಧಲಿಂಗಯ್ಯನವರು 'ಒಂದು ಪದ' ಎಂಬಕಾವ್ಯದ ಮೂಲಕ ಅಸ್ಪೃಶ್ಯತೆ ಕುರಿತ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ.

ಹೊಲೇರ್‍ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೋಟ್ಲು, ಬಾವಿ, ಮನೆ ಯಾವುದ್ಕೂ ಸೇರ್ಸಲ್ವಲ್ರೊ
ನಮ್‌ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಡ್‌ಕತ್ತಾರೆ
ನಾವ್ ಬೆಳದಿದ್ ತಿಂತಾರೆ ನಾವ್ ದುಡಿದಿತ್ ತಗತ್ತಾರೆ
ನಾವ್ ಮಾತ್ರ ಬ್ಯಾಡಾ
ಹೊಲೇರು, ಮಾದುಗ್ರು ಅನ್ನೋ ಬದ್ಲು, ಹರಿಜನಾ
ಅಂತ ಕರ್ದು ನಗ್ತಾರಲ್ಲಪ್ಪೋ (ಒಂದು ಪದ)

ಈ ಮೇಲಿನ ಸಾಲುಗಳು ಕಂಪ್ಯೂಟರ್‌ಯುಗ ಎಂದು ಕರೆಯುವ ಈ ಕಾಲದಲ್ಲೂ ಕೂಡ ಕಂಡು ಬರುತ್ತಿರುವ ದೃಶ್ಯಗಳಾಗಿವೆ. ಅಸ್ಪೃಶ್ಯ ಸಮುದಾಯದ ಭಂಗಿ ಜನರ ಮಲಹೊರುವ ಪದ್ಧತಿ ಇದಕ್ಕೆ ಜೀವಂತ ಸಾಕ್ಷಿಯಾಗಿದೆ.

ಮಂಡೇಲಾ ಬಿಡುಗಡೆಯ ಬೆನ್ನಹಿಂದೆ
ಬಂದ ಈ ಯುಗಾದಿ
ಜಾತಿ ಮತಗಳ ಜೈಲುವಾಸಿಗಳನ್ನು
ಬಿಡಿಸಿ ಕರೆತಂದೀತೆ
ಪ್ರೀತಿ ಮಾನವತೆಗಳ ಬಯಲು ಕಡೆಗೆ (ಯುಗಾದಿ – ೪)

ಈ ಮೇಲಿನ ಕವಿತೆಯು ೨೧ ವರ್ಷಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿ ಕಪ್ಪುವರ್ಣದ ಶೋಷಿತರ ಪರವಾಗಿ ಹೋರಾಡಿ ಸೆರೆಮನೆವಾಸ ಅನುಭವಿಸಿದ ನೆಲ್ಸನ್ ಮಂಡೇಲರನ್ನು ನೆನಪು ಮಾಡಿಕೊಡುತ್ತದೆ. ಯುಗಾದಿ ಪ್ರತಿ ವರ್ಷಗಳು ಬರುತ್ತದೆ. ಆದರೆ ಆ ಯುಗಾದಿ ಉಳ್ಳವರ ಮನೆಯ ದೀವಿಗೆಯಾಗಿ ಶೋಷಿತರ ಮನೆಗಳಿಗೆ ಕರಿನೆರಳಾಗಿ ತನ್ನ ಬೆಳಕ ಸೀಮತಗೊಳಿಸುತ್ತದೆ. ಜಾತಿ ಮತಗಳೆಂಬ ಜೈಲುಗಳಲ್ಲಿ ವಾಸ ಮಾಡುತ್ತಿರುವ ತಳ ಸಮುದಾಯದ ಜನಕ್ಕೆ ಬಿಡುಗಡೆಯಾವಾಗ ಎಂಬ ಆತಂಕ ಸಿದ್ಧಲಿಂಗಯ್ಯನವರಿಗಿದೆ. ಯುಗಾದಿ ಹಬ್ಬವನ್ನು ಪ್ರಶ್ನೆ ಮಾಡುತ್ತಿದ್ದಾರೆ ಪ್ರೀತಿ ಮಾನವತೆಗಳ ಬಯಲ ಕಡೆಗೆ ಶೋಷಿತರನ್ನು ನೀನು ಕರೆತಾ ಎಂದು. ಹಬ್ಬ-ಹರಿದಿನಗಳು, ದೇವರ ಉತ್ಸವಗಳು, ದೇವಾಲಯಗಳು ಜಾತೀಯತೆಯನ್ನು ನೀರೂದಿಬೆಳೆಸುತ್ತಿರುವ ಈ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಕಾವ್ಯ ಪ್ರಸ್ತುತ ಎನಿಸುತ್ತದೆ.

ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದಲ್ಲಿ ಎಲ್ಲರೂ ಅಗ್ನಿಶಾಮಕರಾಗಬೇಕು ಎಂದು ಹೇಳುವ ಮೂಲಕ ಜಾತಿ ಎಂಬ ಬೆಂಕಿಯನ್ನು ಆರಿಸಲು ಪ್ರತಿಯೊಬ್ಬರೂ ಪ್ರಜ್ಞಾವಂತರಾಗಬೇಕು ಎಂದು ಸೂಚಿಸುತ್ತಾರೆ.

ಜಾತಿ ವೈರದ ಜ್ವರವು ಏರುತಿಹುದಣ್ಣ
ಕೋಮುದ್ವೇಷದ ಬೆಂಕಿ ಉರಿಯುತಿಹುದಣ್ಣ
ಈ ಬೆಂಕಿಯಾರಿಸಲು ಪ್ರೀತಿ ಗಂಗೆಯು ಬೇಕು
ಎಲ್ಲರೂ ಅಗ್ನಿಶಾಮಕರಿಂದು ಆಗಬೇಕು (ಅಗ್ನಿಶಾಮಕರು)

ಇಂದಿನ ದಲಿತ ಯುವಕರು ಜಾಗೃತರಾಗಬೇಕು. ಮುಗಿಲೆತ್ತರ ಬೆಳೆಯುತ್ತಿರುವ ಜಾತಿಯನ್ನು, ಜಾತಿಯಿಂದುಂಟಾಗುತ್ತಿರುವ ಕೋಮುದ್ವೇಷದ ಬೆಂಕಿಯನ್ನು ಅಹಿಂಸಾತ್ಮಕ ಮಾರ್ಗದಿಂದ

ನಂದಿಸಬೇಕು ಎಂದು ಹೇಳುತ್ತಾರೆ. ಜಾತಿ ಪದ್ಧತಿಯ ಕಠಿಣ ಕಟ್ಟುಪಾಡುಗಳನ್ನು ದಿಕ್ಕರಿಸಿ ಮಾನವ ಪ್ರೀತಿಯನ್ನು ಪ್ರತಿಸ್ಥಾಪಿಸುವ ಛಲ ದಲಿತರಲ್ಲಿ ಮೂಡಬೇಕಾಗಿದೆ. ಸಿದ್ಧಲಿಂಗಯ್ಯನವರಿಗೆ ಜಾತಿಯ ಶೋಷಣೆ ಮುಖ್ಯವಾಗಿ ಕಾಣಿಸುತ್ತದೆ. ಕವಿ ತಮ್ಮ ಒಡಲಾಳದಿಂದ ಅನುಭವಿಸಿದ ಕರಾಳವಾದ ಜಾತಿಯ ಶೋಷಣೆಯನ್ನು ನಿರ್ಮೂಲನೆ ಮಾಡಲು ತಮ್ಮ ಸಾಹಿತ್ಯ ಮತ್ತು ಚಳುವಳಿಯ ಮೂಲಕ ಪ್ರಯತ್ನಿಸಿದರು.

ಜಾತಿಯನ್ನು ಹೂತು ಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ
ಸ್ವಾಭಿಮಾನದ ಸಮುದ್ರ (ಅಂಬೇಡ್ಕರ್)

ಅಂಬೇಡ್ಕರ್‌ರವರಿಂದ ಪ್ರೇರಣೆ ಪಡೆದ ಸಿದ್ಧಲಿಂಗಯ್ಯ ಸಮಕಾಲೀನ ಚಿಂತನೆಯಾದ ಜಾತಿ ನಿರ್ಮೂಲನೆಯನ್ನು ತಮ್ಮ ಸಾಹಿತ್ಯದಲ್ಲಿ ಹೇಳುವ ಮೂಲಕ ಜಾತ್ಯಾತೀತ ಮನೋಭಾವನೆ ಮೂಡಿಸಿದರು.

ಯುವ ಪೀಳಿಗೆಯು ಕೂಡ ಹೇಗೆ ಜಾತಿ ಎಂಬ ಶಾಪಕ್ಕೆ ಒಳಗಾಗುತಿದೆ ಎಂಬುದನ್ನು ಸಿದ್ಧಲಿಂಗಯ್ಯ ತಿಳಿಸುತ್ತಾರೆ. ಏನೂ ಅರಿಯದ ಮುಗ್ಧ ಚೇತನಗಳು ಇಂದಿನ ಮಾಧ್ಯಮದ ಯುಗದಲ್ಲಿ ಜಾತಿ ಹೆಮ್ಮರವಾಗಿ ಬೆಳೆಯುತ್ತಿದೆ. ವಿಶ್ವವಿದ್ಯಾಲಯಗಳು ಜಾತಿಯನ್ನು ಸೃಷ್ಟಿಮಾಡುವ ಕಾರ್ಖಾನೆಗಳು ಯುವ ಪೀಳಿಗೆಯಲ್ಲಿ ಜಾತಿ ಬಿತ್ತನೆ ಮಾಡಿ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ನಡೆಯುತ್ತಿವೆ.

ಜಾತಿ ಮತಗಳ ಹುಚ್ಚು ಕಾಳ ಸರ್ಪಗಳಾಗಿ
ಕಂದಮ್ಮಗಳ ಕಣ್ಣು ಕುಕ್ಕುತಿಹುದು
ಗೋಧಿಯನು ಬೆಳೆವಲ್ಲಿ ಕೋವಿಗಳ ಬೆಳೆಯಾಗಿ
ಮುಗ್ಧರೆದೆಗಳು ಚೂರು ಚೂರಾದವು
(ಪಂಚ ನದಿಗಳ ಹಾಡು)

ಸಿದ್ಧಲಿಂಗಯ್ಯನವರ ಈ ಕವಿತೆ ಭವಿಷ್ಯವನ್ನು ಕುರಿತು ಮಾತನಾಡುತ್ತದೆ. ಮುಂದಿನ ಪೀಳಿಗೆಯಾದ ಕಂದಮ್ಮಗಳು ಜಾತಿಯ ಕಾಳಸರ್ಪಗಳ ಕಪಿಮುಷ್ಟಿಗೆ ಸಿಲುಕಿಕೊಂಡು ಹೊರಬರಲಾಗದೆ ಇರುವ ಪರಿಸ್ಥಿತಿಯನ್ನು ಈ ಕವಿತೆಯು ಪ್ರಸ್ತಾಪಿಸುತ್ತದೆ. ಸಿದ್ಧಲಿಂಗಯ್ಯನವರಿಗೆ ಕೇವಲ ವರ್ತಮಾನದ ಚಿಂತೆ ಇಲ್ಲ. ಅದರ ಜೊತೆಗೆ ನಾಳಿನ ಪ್ರಬುದ್ಧ ಭಾರತ ನಿರ್ಮಾಣದ

ಯುವ ಜನತೆಯ ಬಗ್ಗೆ ಆಸೆ ಇದೆ. ಇಂದು ಶೋಷಣೆಗೆ ಒಳಗಾದರೂ ಕೂಡ ನಾಳೆ ನನ್ನ ಜನ ಜಾಗೃತರಾಗುತ್ತಾರೆ ಎಂಬ ಬಯಕೆ ಇದೆ.

ಕವಿ ಸಿದ್ಧಲಿಂಗಯ್ಯನವರ ಎಪ್ಪತ್ತರ ದಶಕದ ಕಾವ್ಯಗಳು ಪ್ರಚಲಿತ ರಾಜಕೀಯವನ್ನು ವಿಡಂಬನಾತ್ಮಕವಾಗಿ ಚಿತ್ರಿಸುತ್ತವೆ. ನಮ್ಮನ್ನು ಆಳುವ ರಾಜಕಾರಣಿಗಳು ಹೇಗೆ ಸ್ವಾರ್ಥ ಮತ್ತು ಭ್ರಷ್ಟಾಚಾರದ ಬೆನ್ನೆಲುಬುಗಳಾಗಿ ಮಾನವ ಜನಾಂಗವನ್ನು ನಾಶಪಡಿಸುತ್ತಿದ್ದಾರೆ ಎಂಬುದನ್ನು ತಿಳಿಸುತ್ತಾರೆ. ಜೊತೆಗೆ ಪ್ರಜಾಪ್ರಭುತ್ವದ ಹೆಸರೇಳಿ ಜನಾಭಿಪ್ರಾಯ ಪಡೆದು ಅಧಿಕಾರಕ್ಕೆ ಬರುವ ಮುಖವಾಡತನದ ವ್ಯಕ್ತಿತ್ವವನ್ನು ಬಯಲುಗೊಳಿಸುತ್ತಾರೆ.

ಇಲ್ಲಿನ ಮನುವಾದಿಗಳು ಈ ನೆಲದ ಬಹುಜನರನ್ನು ಮೋಸಗೊಳಿಸುತ್ತಾ ಅವರ ಸ್ವಾಭಿಮಾನದ ವಿರೋಧಿನೆಲೆಗಳನ್ನು ಹೇಗೆ ಭದ್ರಗೊಳಿಸುತ್ತಿದ್ದಾರೆ ಎಂದು ಸಿದ್ಧಲಿಂಗಯ್ಯ ಮಾತನಾಡುತ್ತಾರೆ. ರಾಜಕಾರಣಿಗಳು ಗೋಮುಖ ವ್ಯಾಘ್ರಗಳಾಗಿದ್ದುಕೊಂಡು ಬಣ್ಣ ಬಣ್ಣದ ಮಾತುಗಳನ್ನಾಡಿ ಜನರನ್ನು ದಿಕ್ಕುತಪ್ಪಿಸುತ್ತಿರುವ ಪರಿಯನ್ನು ಕುರಿತು

ನಮ್ಹಾಲ್ ಮೀಟಿಂಗ್ ಮಾಡ್ತಾರೆ, ಕಾನೂನ್ ಮಾಡ್ತಾರೆ
ನಮ್ಮ ಯಸ್ರೇಳಿ ಹಾರ ಹಾಕ್ತಾರೆ ಹಾಕುಸ್ಕತ್ತಾರೆ
ನಮ್ಮನ್ನ ಉದ್ದಾರ ಮಾಡ್ತೀವಿ ಅಂತ ಪೇಪ್ರಲಿ
ಮೈಕಲಿ ಜೋರಾಗಿ ಕೂಗ್ತಾ ಅವ್ರಲ್ಲಪ್ಪೋ (ಒಂದು ಪದ)

ಮನುವಾದಿ ರಾಜಕಾರಣಿಗಳು ತೋರಿಕೆಯ ನಡವಳಿಕೆಯನ್ನು ಈ ಕಾಲದಲ್ಲೂ ಹೇಗೆ ಪ್ರದರ್ಶನ ಮಾಡುತ್ತಿದ್ದಾರೆ ಎಂಬುದನ್ನು ಈ ಕಾವ್ಯದಿಂದ ತಿಳಿಯಬಹುದು. ರಾಜಕಾರಣಿಗಳು ದಿನಕ್ಕೊಂದು ಪಕ್ಷವನ್ನು ಬದಲಾಯಿಸಿಕೊಂಡು ತಮ್ಮ ತಮ್ಮ ಸ್ವಾರ್ಥ ಸಾಧನೆ ಮಾಡಿಕೊಂಡು ಅನೀತಿಯುತವಾಗಿ ಬದುಕುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ರೈತರ ಹೆಸರೇಳಿ ಪ್ರಮಾಣ ವಚನ ಸ್ವೀಕರಿಸುವ ಮಂತ್ರಿ, ಮುಖ್ಯಮಂತ್ರಿಗಳು ಗದ್ದುಗೆಮೇಲೆ ಕುಳಿತ ನಂತರ ರೈತರ ಮೇಲೆ ಲಾಟಿ ಚಾರ್ಜ್ ಮಾಡುವುದು ಇದಕ್ಕೆ ದೊಡ್ಡ ನಿದರ್ಶನ. ರಾಜಕಾರಣಿಗಳು ಜಾತಿಯ ನೆಲೆಯಲ್ಲಿ ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಈ ದಿನಗಳಲ್ಲಿ ಎಚ್ಚರಿಕೆ ಮಾತುಗಳಾಗಿ ಕವಿತೆಯ ಈ ಸಾಲುಗಳಿವೆ. ದಲಿತರ ಅಸಹಾಯಕರ ಏಳಿಗೆ ಅಭಿವೃದ್ಧಿ ಇತ್ಯಾದಿ ಹೆಸರಿನಲ್ಲಿ ಕುತಂತ್ರಗಳನ್ನು ಪ್ರದರ್ಶಿಸುತ್ತಿರುವ, ಲಾಭ ಬಡುಕರಾಗುತ್ತಿರುವವರ ಬಗೆಗೆ ಸಾತ್ವಿಕ ಸಿಟ್ಟನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ.

ಅಧಿಕಾರ ಪಡೆದ ರಾಜಕಾರಣಿಗಳು ತನ್ನ ಜಾತಿಯವರನ್ನೆಲ್ಲಾ ತನಗೆ ಬೇಕಾದ ಆಯಕಟ್ಟಿನ ಸ್ಥಳಗಳಲ್ಲಿ ಅಧಿಕಾರಾರೂಢರನ್ನಾಗಿಸಿರುವುದು ಸಾಮಾನ್ಯ ಸಂಗತಿಯಾಗುತ್ತಿದೆ.

ಶೋಷಿತರ ಉದ್ದಾರ ಮಾಡುತ್ತೇವೆ ಎಂದು ಹೇಳುತ್ತಲೇ, ಬಡವರ ಓಟಿನ ಫಲದಿಂದ ಅಧಿಕಾರಕ್ಕೆ ಬಂದ ರಾಜಕಾರಣಿಗಳು, ಬಡವರನ್ನೇ ಶೋಷಿಸುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ವಿಪರ್ಯಾಸವಾಗಿದೆ. ಬಹು ಸಂಖ್ಯಾತ ಬಡವರ ಬದುಕನ್ನು ಹೇಗೆ ಇಲ್ಲಿನ ರಾಜಕೀಯ ವ್ಯವಸ್ಥೆ ಕಬಳಿಸುತ್ತಿದೆ ಎಂಬುದನ್ನು ಕವಿ ಹೀಗೆ ಹೇಳಿದ್ದಾರೆ.

ಬಡವರ ಹೆಸರೇಳಿ ಪಟ್ಟಕ್ಕೆ ಬಂದೋರು
ಬಡವರ ಚಟ್ಟವ ಕಟ್ಟೇಸಿ / ಮಣ್ಣಾಡಿ
ಗುಡಿಸಲುಗಳನುಂಗಿ ನಗುತ್ತಾರಲ್ಲೊ (ಬಿದ್ದಾವು ಮನೆಗಳು)

ರೈತರಿಗೆ ಇಪ್ಪತ್ತಾನ್ನುಕುಗಂಟೆ ವಿದ್ಯುತ್ ಕಲ್ಪಿಸುತ್ತೇವೆ ಎಂದೇಳಿ ಪಾರ್ಲಿಮೆಂಟಿನ ಕುರ್ಚಿಯನ್ನು ಏರಿದ ಜನ ಪ್ರತಿನಿಧಿಗಳು ಚುನಾವಣೆಯ ಸಂದರ್ಭದಲ್ಲಿ ಜಗವೆಲ್ಲ ನಂಟು ಎಂದು ಭಾಷಣ ಬಿಗಿಯುತ್ತಾರೆ. ಆದರೆ ಮಂತ್ರಿಯಾದ ಮೇಲೆ ಗಂಟು ಮಾಡುವ ಕೆಲಸವನ್ನು ಚಾಚುತಪ್ಪದೆ ಪಾಲಿಸುತ್ತಾರೆ. ಭೂಮಿಯ ಮೇಲೆ ಹಲವರ ಪರಿಶ್ರಮದ ಫಲವನ್ನು ಕೆಲವರು ಉಂಡು ಬದುಕುತ್ತಿದ್ದಾರೆ. ಜನ ಸಾಮಾನ್ಯರು ಪ್ರಾಣತೆತ್ತು ಹೋರಾಡಿಗಳಿಸಿಕೊಟ್ಟ ಸ್ವಾತಂತ್ರ್ಯ ಇವತ್ತು ಅವರ ಬದುಕಿಗೆ ಮುಳುವಾಗಿರುವುದರ ಬಗೆಗೆ ಸಿದ್ಧಲಿಂಗಯ್ಯನವರಿಗೆ ವಿಷಾದವಿದೆ. ರಾಜಕಾರಣಿಗಳ ಕಾಲ ಕೆಳಗೆ ಸಿಕ್ಕಿ ತತ್ತರಿಸಿಹೋಗಿರುವುದನ್ನು ಕವಿತೆ ಹೀಗೆ ಕಟ್ಟಿಕೊಡುತ್ತದೆ.

ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೆ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ (ನಲವತ್ತೇಳರ ಸ್ವಾತಂತ್ರ್ಯ)

ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂದರ್ಭದ ಸ್ವಾತಂತ್ರ್ಯದ ನಿಷ್ಕ್ರಿಯತೆಯನ್ನು ಮೇಲಿನ ಕವಿತೆ ಬಿಂಬಿಸುತ್ತದೆ.

ಸಿದ್ಧಲಿಂಗಯ್ಯನವರು ರಾಜಕಾರಣದ ಒಳ ಹೊರಗನ್ನು ಸೂಕ್ಷ್ಮವಾಗಿಯೇ ಅರ್ಥೈಸಿಕೊಂಡವರು. ರಾಜಕೀಯ ಪ್ರಜ್ಞೆಯ ಹಿನ್ನೆಲೆಯಲ್ಲಿ ವ್ಯಕ್ತಗೊಂಡಿರುವ ಇವರ ಕವಿತೆಗಳಲ್ಲಿ ವಾಸ್ತವ ರಾಜಕಾರಣದ ಅವಾಂತರಗಳು ಬಿಚ್ಚಿಕೊಂಡಿವೆ. ವಿಧಾನಪರಿಷತ್ ಸದಸ್ಯರಾಗಿದ್ದಾಗ ತಾವು

ಕಂಡಂತಹ ರಾಜಕಾರಣಿಗಳ ತೆರೆಮರೆಯ ವ್ಯಕ್ತಿತ್ವವನ್ನು 'ದಶಾವತಾರ' ಕವಿತೆಯಲ್ಲಿ ಹೀಗೆ ಪರಿಚಯಿಸಿದ್ದಾರೆ.

ದಶಾವತಾರ ಹಾಕುವ ಮಂತ್ರಿ
ದೇಶವ ಮಾರುವ ದಳ್ಳಾಳಿ
ಸಮಾಜ ಸೇವೆಯ ಸೋಗಿನ ಧಣಿಯು
ವಿಷ ಮಾರಾಟದ ರೂವಾರಿ
ನಗೆ ಹೊಗೆಯಾಗುವ, ಹೊಗೆ ಮುಗಿಲಾಗುವ
ಹುಲಿ ಬೆಕ್ಕಾಗುವ ನರಿ ನವಿಲಾಗುವ
ದಶಾವತಾರದ ಪರಿ ನೋಡಣ್ಣ (ದಶಾವತಾರ)

ದೇಶಕ್ಕೆ ಕಂಟಕಪ್ರಾಯವಾಗಿರುವ ರಾಜಕಾರಣಿಗಳ ಊಸರವಳ್ಳಿತನವನ್ನು ಮೇಲಿನ ಕವಿತೆ ವಿಡಂಬಿಸುತ್ತದೆ. ಪುರಾಣ ಮೂಲದಲ್ಲಿನ 'ದಶಾವತಾರ' ಶುಭದ ಸಂಕೇತವಾಗಿ ಅಶುಭದ ವಿನಾಶಕ್ಕಾಗಿ ಹುಟ್ಟಿಕೊಂಡಂಥದ್ದು. ಆದರೆ ರಾಜಕಾರಣಿಗಳು ತೋರಿಸುವ ಗೋಸುಂಬೆತನದ ದಶಾವತಾರ ಇದೇ ದೇಶದ ಪ್ರಗತಿಯನ್ನೆ ಹಿಮ್ಮೆಟ್ಟಿಸುವಷ್ಟರ ಮಟ್ಟಿಗೆ ಅಪಾಯಕಾರಿಯಾಗಿದೆ.

ಪ್ರಸ್ತುತ ರಾಜಕಾರಣದಲ್ಲಿನ ಸಮಾಜದ್ರೋಹಿ ರಾಜಕಾರಣಿಗಳೆದುರು ನಿಜವಾದ ಪ್ರಗತಿಪರ ಕಳಕಳಿವುಳ್ಳ ಅಸಲಿ ರಾಜಕಾರಣಿಗಳು ಹೇಗೆ ತಮ್ಮೆಲ್ಲ ಅಸ್ತಿತ್ವವನ್ನು ಕಳೆದುಕೊಂಡಿದ್ದಾರೆ ಎಂಬುದನ್ನು ಕವಿತೆಯಲ್ಲಿ ವ್ಯಂಗ್ಯವಾಗಿ ಚಿತ್ರಿಸಿದ್ದಾರೆ.

'ಸಂಪಿಗೆಯ ಮರದಲ್ಲಿ' ಕವಿತೆಯಲ್ಲಿ ಕವಿ ಇಡೀ ಭಾರತದೇಶವನ್ನು ಸಂಪಿಗೆ ಮರಕ್ಕೆ ಹೋಲಿಸುತ್ತ, ಆ ಮರವನ್ನು ಆವರಿಸಿರುವ ಕರಾಳತೆಯನ್ನು ಇಲ್ಲಿ ಚಿತ್ರಿಸಿದ್ದಾರೆ.

ನೂರಾರು ಹಾವುಗಳು ಊರೆಲ್ಲ ನೋವುಗಳು
ಸಂಪಿಗೆಯ ಮರದಲ್ಲಿ ಸಾವಿನಾಟ
ಕೊಂಬೆ ಕೊಂಬೆಯ ಕೆಳಗೆ ಮಸೆದ ಕತ್ತಿಯ ಸಾಲು
ಹೆಣಗಳುಯ್ಯಾಲೆಯಲಿ ಮರದ ಕುಣಿತ (ಸಂಪಿಗೆಯ ಮರದಲ್ಲಿ)

ಈ ದೇಶವನ್ನು ರಾಜಕಾರಣಿಗಳು, ಅಧಿಕಾರಶಾಹಿ ವಿಷಸರ್ಪಗಳು ಕುಕ್ಕಿ ತಿನ್ನುತ್ತಿವೆ. ಬಡಜನರನ್ನು ಕೊಂದವರೆ ಅಧಿಕಾರದ ಗದ್ದುಗೆಯೇರಿ ಮೆರೆಯುತ್ತಿದ್ದಾರೆ. ಜನ ಸಾಮಾನ್ಯರ ಮೇಲಿನ ಕೊಲೆ-ಸುಲಿಗೆಗಳು ಸಾಮಾನ್ಯ ಸಂಗತಿಗಳಾಗಿವೆ ಎಂಬುದಾಗಿ ಶೋಷಕರ ಕಬಂದ ಬಾಹುಗಳಿಗೆ ಸಿಲುಕಿ ನಲುಗಿ ಹೋಗಿರುವ ಇಡೀ ದೇಶದ ವಾಸ್ತವ ಭೀಕರತೆಯನ್ನು 'ಸಂಪಿಗೆ ಮರದಲಿ' ಕವಿತೆ ಚಿತ್ರಿಸುತ್ತದೆ. ಇವರ ಹಲವು ಕವಿತೆಗಳಲ್ಲಿ ಸ್ವಾತಂತ್ರ್ಯ ನಂತರದ ಭಾರತದ

ರಾಜಕೀಯ, ಸಾಮಾಜಿಕ ಬದುಕಿನ ದುರಂತ ಚಿತ್ರಣದ ವಸ್ತು ನಿರ್ವಹಣೆಯಲ್ಲಿ ಏಕತಾನತೆಯ ಅಭಿವ್ಯಕ್ತಿ ಕಂಡುಬಂದರೂ ಶೋಷಕ ಹಾಗೂ ಶೋಷಿತ ವ್ಯವಸ್ಥೆಯ ವಿಭಿನ್ನ ಮುಖಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿವೆ.

ಸಿದ್ಧಲಿಂಗಯ್ಯನವರ 'ಕವಿತೆಗಳು' ದಲಿತ ಸಂಸ್ಕೃತಿಯ ಪ್ರತಿಬಿಂಬಗಳು. ಪ್ರತಿಯೊಂದು ಸಾಲುಗಳು ಕೂಡ ಪರಿವರ್ತನೆಯನ್ನು ಕುರಿತು ಮಾತನಾಡುತ್ತವೆ. ಸಿದ್ಧಲಿಂಗಯ್ಯನವರ ಅನುಭವದಿಂದ ಮೂಡಿಬಂದಿರುವ ಈ ಕವಿತೆಗಳು ಸಮಾಜದ ಶೋಷಣೆ, ಅಸ್ಪೃಶ್ಯತೆ, ಬಡತನವನ್ನು ಕುರಿತು ಮಾತನಾಡಿ, ಸಮಾನತೆಯ ತರುವ ದಾರಿಯನ್ನು ತೋರಿಸುತ್ತವೆ.

ನಾಟಕಗಳು

ಎಪ್ಪತ್ತರ ದಶಕದ ನಂತರ ರಚಿಸಲ್ಪಟ್ಟ ದಲಿತ-ಬಂಡಾಯ ನಾಟಕಗಳು ಕನ್ನಡ ನಾಟಕ ಕ್ಷೇತ್ರಕ್ಕೆ ಹೊಸಬಗೆಯ ಚಿಂತನೆ, ಆಲೋಚನೆ, ಹಾಗೂ ಅಭಿವ್ಯಕ್ತಿಯ ಸ್ತರಗಳನ್ನು ಪರಿಚಯಿಸಿದವು. ಎಪ್ಪತ್ತರ ದಶಕದ ದಲಿತ ಚಳುವಳಿಗೆ ಪೂರಕವೆಂಬಂತೆ ಬೀದಿನಾಟಕವು ತನ್ನ ಪ್ರಭಾವವನ್ನು ಉಂಟು ಮಾಡಿದೆ. ಈ ಸಂದರ್ಭದಲ್ಲಿ ರಚನೆಗೊಂಡ ಹೆಚ್ಚಿನ ನಾಟಕಗಳು ಸಾಮಾಜಿಕ ಸಮಸ್ಯೆ ಹಾಗೂ ವಾಸ್ತವ ಘಟನೆಗಳನ್ನು ಆಧರಿಸಿ ಅಭಿವ್ಯಕ್ತಗೊಂಡಿವೆ.

ಸಿದ್ಧಲಿಂಗಯ್ಯನವರು ಕವಿಯಾಗಿ ತಮ್ಮ ಸ್ವಂತಿಕೆಯನ್ನು ನಿರ್ಮಿಸಿರುವ ಹಾಗೆಯೇ ನಾಟಕ ಕ್ಷೇತ್ರದಲ್ಲಿಯೂ ತಮ್ಮದೇ ಆದ ದೃಷ್ಟಿಕೋನದಲ್ಲಿ ಕೃಷಿ ಮಾಡಿದ್ದಾರೆ. ಇವರು ಒಟ್ಟು ಮೂರು ನಾಟಕಗಳನ್ನು ರಚಿಸಿದ್ದು ಪಂಚಮ ಮತ್ತು ನೆಲಸಮವು ೧೯೮೦ರಲ್ಲಿ ಏಕಲವ್ಯ ೧೯೮೬ರಲ್ಲಿ ಪ್ರಕಟಗೊಂಡಿದೆ. ಈ ಮೂರು ನಾಟಕಗಳು ಸಮಾಜದ ಶೋಷಣೆಯನ್ನು ಕೇಂದ್ರವಾಗಿರಿಸಿಕೊಂಡು ರಚನೆಯಾಗಿವೆ. ಆಳುವ ವರ್ಗ ಸಮಾಜದ ಎಲ್ಲಾ ಮಜಲುಗಳನ್ನು ತನ್ನ ಕಪಿಮುಷ್ಠಿಗೆ ತೆಗೆದುಕೊಂಡು ದಲಿತರನ್ನು ಮೂಗುದಾರ ಹಾಕಿದ ಎತ್ತುಗಳ ಹಾಗೆ ನಡೆಸಿಕೊಳ್ಳುತ್ತಿದ್ದಾರೆ ಎಂಬುದನ್ನು ಸಿದ್ಧಲಿಂಗಯ್ಯನವರ ನಾಟಕಗಳು ತಿಳಿಸಿಕೊಡುತ್ತವೆ.

ಸಿದ್ಧಲಿಂಗಯ್ಯನವರು ಸಂವೇದನಶೀಲ ವ್ಯಕ್ತಿ. ದಲಿತರ ಮೆರವಣಿಗೆ ಬೀದರ್‌ನಿಂದ ಕೋಲಾರದ ತನಕ ಯಾವುದೇ ಮೂಲೆಯಲ್ಲಿ ನಡೆದರೂ ಅಲ್ಲಿ ಸಿದ್ಧಲಿಂಗಯ್ಯನವರ ಹಾಡುಗಳು ಬೆಂಕಿಯ ಉಂಡೆಯಾಗಿ ಹೋರಾಟಗಾರರ ಮನತುಂಬಿ ಹೊರಬರುತ್ತಿದ್ದವು. ಸಿದ್ಧಲಿಂಗಯ್ಯನವರು

ಕವಿತೆಗೆ ಮಾತ್ರ ಸೀಮಿತವಾಗಿರದೆ ತಳಸಮುದಾಯದ ನೋವು, ಹಸಿವು, ಶೋಷಣೆ ಮುಂತಾದ ಅಮಾನವೀಯ ಕೃತ್ಯಗಳ ವಿರುದ್ಧ ನಾಟಕಗಳನ್ನು ರಚಿಸಿದ್ದಾರೆ. ತಮ್ಮ ಸೃಜನ ಶೀಲತೆಯನ್ನು ಅಭಿವ್ಯಕ್ತಿಸಿದ್ದಾರೆ.

ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕ ಸಮಕಾಲೀನ ಚಿಂತನೆಯನ್ನು ಕುರಿತು ಮಾತನಾಡುತ್ತದೆ. ಶೋಷಿತರು ವಿದ್ಯೆ ಕಲಿತು ತಮ್ಮ ದಾಸ್ಯವನ್ನು ತಾವೇ ಕೊನೆಗಾಣಿಸಿಕೊಳ್ಳಬೇಕು ಎಂಬುವುದು ಇವತ್ತಿನ ಮಾತಾಗಿದೆ. ಅಂದು ಸೃಷ್ಟಿಯಾದ ಮನುಧರ್ಮಶಾಸ್ತ್ರ ಸಮಾಜವನ್ನು ನಾಲ್ಕು ಭಾಗಮಾಡಿ ವಿಂಗಡಿಸಿ ಬ್ರಾಹ್ಮಣರು ಪೂಜೆ, ವಿದ್ಯೆಗಳಿಗೆ, ಕ್ಷತ್ರಿಯರು ರಾಜ್ಯಭಾರ, ವೈಶ್ಯರು ವ್ಯಾಪಾರ ಶೂದ್ರರ ಮೇಲಿನ ಈ ಮೂರು ವರ್ಗದ ಸೇವೆ ಮಾಡಬೇಕಾಗಿ ನಿಯಮ ರೂಪಿಸಿತ್ತು. ಮಾನವ ವಿರೋಧಿ ನಿಯಮ ಅಲಿಖಿತವಾಗಿ ಇಂದೂ ಕೂಡ ಜಾರಿಯಲ್ಲಿರುವುದನ್ನು ನಾವು ಗಮನಿಸಬಹುದಾಗಿದೆ. ದೇಶದ ವಿಶ್ವವಿದ್ಯಾಲಯಗಳು ಜಾತಿಗೋಡೆಗಳನ್ನು ನಿರ್ಮಿಸುತ್ತಿವೆ. ಪರೀಕ್ಷಾ ಮೌಲ್ಯಮಾಪನದಲ್ಲಿ ಜಾತಿ ಎಂಬ ಭೂತವನ್ನು ವೈದಿಕ ಪ್ರಣೀತ ಮನಸ್ಸುಗಳು ಚಾಚೂತಪ್ಪದೆ ಪಾಲಿಸುತ್ತಿವೆ. ವಿದ್ಯೆ ವ್ಯಾಪಾರೀಕರಣವಾಗುತ್ತಿದೆ, ವಿದ್ಯೆ ಉಳ್ಳವರ ಸ್ವತ್ತೆ ವಿನಃ ಇಲ್ಲದವರ ಸ್ವತ್ತಲ್ಲ ಎಂಬ ಮಾತು ಸಾಮಾನ್ಯವಾಗುತ್ತಿದೆ.

ಸಿದ್ಧಲಿಂಗಯ್ಯನವರ ಏಕಲವ್ಯ ಸ್ವಾಭಿಮಾನಿ, ಈ ಕಾಲದ ದಲಿತ ಯುವಕರ ಮಾರ್ಗದರ್ಶಿ, ಅವನು ತೆಗೆದುಕೊಳ್ಳುವ ನಿರ್ಣಯಗಳು ಮಾನವೀಯತೆಯನ್ನು ಸಾರುತ್ತವೆ. ಅವನು ನಡೆದುಕೊಳ್ಳುವ ರೀತಿ ಸ್ವಾಭಿಮಾನದಿಂದ ಕೂಡಿರುತ್ತದೆ.

೧೯೮೬ರಲ್ಲಿ ರಚಿಸಲಾದ 'ಏಕಲವ್ಯ' ಸಿದ್ಧಲಿಂಗಯ್ಯನವರ ಮೂರನೇ ನಾಟಕವಾಗಿದ್ದು, ಒಟ್ಟು ಹನ್ನೊಂದು ದೃಶ್ಯಗಳಲ್ಲಿ ನಾಟಕದ ವಸ್ತು ಬಿಚ್ಚಿಕೊಳ್ಳುತ್ತಾ ಸಾಗುತ್ತದೆ. ಏಕಲವ್ಯನ ಕುರಿತಾಗಿ ರಚಿಸಲಾಗಿರುವ ಈವರೆಗಿನ ನಾಟಕಗಳಿಗಿಂತ, ಈ ನಾಟಕವು ಸಾಮಾಜಿಕ ಸಂದೇಶ ಮತ್ತು ಆಲೋಚನೆಯಲ್ಲಿ ವಿಭಿನ್ನ ದೃಷ್ಟಿಕೋನವುಳ್ಳದ್ದಾಗಿದೆ. ಈ ನಾಟಕದಲ್ಲಿ ದಲಿತರ ಎಚ್ಚೆತ್ತ ಪ್ರಜ್ಞೆ ಹೋರಾಟವಾಗಿ ಘೋಷಿತಗೊಂಡಿರುವುದನ್ನು ಕಾಣಬಹುದು. ನವ ನಾಗರೀಕತೆಯ ಸ್ವಾರ್ಥ, ಅಹಂಕಾರ ಮತ್ತು ಕ್ರೌರ್ಯದ ಸಾಕಾರವಾಗಿ ರಾಜ ಮತ್ತವನ ಅನುಚರವರ್ಗ ಕಾಣಿಸಿಕೊಳ್ಳುತ್ತದೆ. ಪ್ರಸ್ತುತ ಸಂದರ್ಭದಲ್ಲಿ ದಲಿತ ಜನಾಂಗದ ವ್ಯಕ್ತಿಯೊಳಗೆ ಯಾವುದೇ ರೀತಿಯ ಪ್ರಬುದ್ಧ ಪ್ರತಿಭೆ ಇದ್ದರೂ ಅದನ್ನು ಜಾತಿಯ ಮೀಸಲಾತಿ ಪ್ರತಿಭೆ ಎಂದು ಅಳತೆ ಮಾಡುವ ಜನ ನಮ್ಮ ಮುಂದೆ

ಇದ್ದಾರೆ. ಪ್ರತಿಭೆ ಎಷ್ಟೇ ಇದ್ದರೂ ಪ್ರಸ್ತುತ ರಾಜಕೀಯ ಹಣಬಲ ಮತ್ತು ಜಾತಿ ಬಲದ ಮೇಲೆ ನಿರ್ಣಯವಾಗುತ್ತದೆ. ಹಳ್ಳಿಗಾಡಿನ ಸಾಮಾನ್ಯ ಜನ ನಗರ ಪ್ರದೇಶದ ಆಳುವ ಜನರಿಂದ ದೂರವಾಗುತ್ತಾರೆ ಎಂಬುದನ್ನು 'ಏಕಲವ್ಯ' ನಾಟಕದ ಪ್ರಾರಂಭದ ಈ ಸಾಲುಗಳು ಸಾಕ್ಷಿಯಾಗುತ್ತವೆ.

ಹಾಡು – *ಅಡವಿಯ ಬಾಲನು ಘನ ಏಕಲವ್ಯನು*
ಹೋರಾಟ ಮಾಡಿದ ಕಥೆಯ ಕೇಳಿ
ಕಾಡಿನ ಹೂವೊಂದು ಊರಿನ ಗುಡಿಯಲ್ಲಿ
ಪೂಜೆಯ ಸಲ್ಲದೆ ಹೋಯಿತಲ್ಲ
ಮೇಲು ಕೀಳಿನ ಜಾಲ ಜಗವೆಲ್ಲ ಆವರಿಸಿ
ತನ್ನಾಟ ಆಡಿದ ಕಥೆಯ ಕೇಳಿ
ಗಿಳಿಯೊಂದು ಹಾಡಲು ಉಳಿದಂಥ ಮೃಗಗಳು
ದನಿಕಿತ್ತು ಕೊಂಡಂಥ ಕಥೆಯ ಕೇಳಿ
ಊರು ಕಾಡಿನ ನಡುವೆ ನೂರು ಅಂತರ ಮೂಡಿ
ಧರೆ ಹತ್ತಿ ಉರಿದಂಥ ಕತೆಯ ಕೇಳಿ

ಎಂಬ ಸಾಲುಗಳು ನಿಸರ್ಗ ಸಹಜ ಸಂಸ್ಕೃತಿಗೆ ಸಾಂಕೇತಿಕವಾಗಿರುವ ಏಕಲವ್ಯನಿಗೆ ಆಗಿರುವ ಅನ್ಯಾಯವನ್ನು ಸಾರುತ್ತವೆ. ಪ್ರಸ್ತುತ ರಾಜಕೀಯ ವಂಶಪಾರಂಪರ್ಯದಿಂದ ಕೂಡಿದೆ. ಇಲ್ಲಿ ಸಾಮಾನ್ಯ ಪ್ರಜೆಗಳಿಗೆ ಅವಕಾಶವಿಲ್ಲ, ತಮ್ಮ ಮಕ್ಕಳಿಗೆ ಮಾತ್ರ ಅವಕಾಶ ಸಿಗುತ್ತದೆ. ಸಂವಿಧಾನದ ಪ್ರಕಾರ ಪ್ರಜಾಪ್ರಭುತ್ವದಲ್ಲಿ ಅಧಿಕಾರ ಸರ್ವರಿಗೂ ಹಂಚಿಕೆಯಾಗಬೇಕು. ಆದರೆ ವಾಸ್ತವದಲ್ಲಿ ಪರಿಸ್ಥಿತಿಯೇ ಬೇರೆಯಾಗಿದೆ. ಏಕಲವ್ಯ ಕಾಡಿನ ಉತ್ತಮ ಪ್ರತಿಭೆ, ಇವನು ದ್ರೋಣಚಾರ್ಯರಿಂದ ದೂರವಾಗುತ್ತಾನೆ.

ಪ್ರಸ್ತುತ ಸಂದರ್ಭದಲ್ಲಿ ರಾಷ್ಟ್ರದ ಸಂಪನ್ಮೂಲ ಕೆಲವು ಮಂದಿ ಜನರ ಕೈಲಿ ಶೋಷಣೆಗೊಂಡಿದೆ. ಶೋಷಣೆ ಮಾಡಿಕೊಳ್ಳುವುದು ತಮ್ಮ ಹಕ್ಕು ಎನ್ನುವಂತೆ ಅವರು ವರ್ತಿಸುತ್ತಿದ್ದಾರೆ. ಈ ನಾಟಕದಲ್ಲಿ ಕಾಡಿನ ಜನರಾದ ಗಾಳಣ್ಣ ಮತ್ತು ಬೋರಣ್ಣ, ನಾಡಿನ ಜನರಾದ ಸೈನಿಕ ಮತ್ತು ಶೆಟ್ಟಿ ನಡುವೆ ಸಂವಾದ ನಡೆಯುತ್ತದೆ. ರಾಜನ ಪರಿವಾರದ ಸದಸ್ಯರಾದ ಸೈನಿಕ ಮತ್ತು ಶೆಟ್ಟಿ ರಾಜನ ಸರ್ವಾಧಿಕಾರತ್ವದ ಧೋರಣೆಯನ್ನು ವ್ಯಕ್ತಪಡಿಸುತ್ತಾರೆ. ಕಾಡು ರಾಜನ ಸ್ವತ್ತು, ಅವನೇ ಈ ಕಾಡಿನ ಸೃಷ್ಟಿಕರ್ತ ಎನ್ನುವಂತೆ ಮಾತನಾಡುತ್ತಾರೆ. ರಾಜನೇ ಪ್ರತ್ಯಕ್ಷ ದೇವರು ಎಂಬ ಮಾತಿನಂತೆ

ಸೈನಿಕ : ನಮ್ಮಪ್ಪಂದೂ ಅಲ್ಲ, ನಿಮ್ಮಪ್ಪಂದೂ ಅಲ್ಲ,
ಮಹಾರಾಜರದು, ಅಪ್ರೇ ನಮ್ಮನ್ನೂ, ನಿಮ್ಮನ್ನೂ ಸಾಕಿ
ಸಲಹ್ತಾ ಇರೋದು ಅವರು ಮನಸ್ಸು ಮಾಡದೇ ಏನೂ
ನಡೆಯೊಲ್ಲ, ಒಂದು ಹಕ್ಕಿ ಕೂಡ ಹಾರಲ್ಲ. ಒಂದ್
ಹೂವು ಕೂಡ ಅರಳಲ್ಲ.

ಶೆಟ್ಟಿ : ಅವನು ಆಜ್ಞೆ ಮಾಡ್ದೆ ಇದ್ರೆ ರಾತ್ರೀಲಿ ಪ್ರಜೆಗಳಿಗೆ
ಕನಸು ಕೂಡ ಬೀಳಲ್ಲ.

ಎಂದು ಹೇಳುತ್ತಾರೆ. ಅಧಿಕಾರ ಶಾಹಿ ವ್ಯವಸ್ಥೆ ಹೇಗೆ ತನ್ನ ಕಪಿಮುಷ್ಟಿಯಲ್ಲಿ ಇದೇ ಸಾಮಾಜಿಕ ಬದುಕನ್ನು ಬಂಧಿಸಿದೆ ಮತ್ತು ನಿಯಂತ್ರಿಸುತ್ತಿದೆ ಎಂಬುದನ್ನು ಮೇಲಿನ ಮಾತು ತಿಳಿಸುತ್ತದೆ. ಪ್ರಸ್ತುತ ನಮ್ಮ ದೇಶದ ಪರಿಸ್ಥಿತಿಯೂ ಇದರಿಂದ ಹೊರತಲ್ಲ, ಗಣಿಗಾರಿಕೆ, ಕಾಡಿನ ಮೇಲಿನ ನಿಯಂತ್ರಣ, ಕಾಡಿನ ನಿವಾಸಿಗಳನ್ನು ಒಕ್ಕಲೆಬ್ಬಿಸುವಿಕೆ ಇಂದು ಸಾಮಾನ್ಯವಾಗುತ್ತಿದೆ. ಅಧಿಕಾರಶಾಹಿಯ ಇಚ್ಛೆಗನುಗುಣವಾಗಿಯೇ ಇದೆಲ್ಲವೂ ನಡೆಯುತ್ತಿದೆ. ಸಂವಿಧಾನಾತ್ಮಕವಾಗಿ ನಿರ್ದಿಷ್ಟಪಂಗಡದವರಿಗೆ ಅಧಿಕಾರ ಕೊಡುವ ಅನಿವಾರ್ಯವಿದೆಯಾದರೂ ಅವರನ್ನು ತಮ್ಮ ಕಬಂಧ ಮುಷ್ಠಿಯೊಳಗೆ ಇರಿಸಿಕೊಂಡು ಅತಂತ್ರರನ್ನಾಗಿಸುವ ಹುನ್ನಾರ ಎದ್ದುಕಾಣುತ್ತಿದೆ. ಏಕಲವ್ಯನಂತೆ ಇಂತಹ ಹುನ್ನಾರಗಳಿಗೆ ಬಲಿಯಾಗದ ಸ್ವಾಭಿಮಾನ, ದೃಢಸಂಕಲ್ಪ ಶೋಷಿತ ಸಮುದಾಯದ ಪ್ರಜ್ಞೆಯಾಗಬೇಕಾಗಿದೆ.

ಮನುಧರ್ಮಶಾಸ್ತ್ರವು ಶೋಷಿತ ಸಮುದಾಯವನ್ನು ವಿದ್ಯೆಯಿಂದ ವಂಚಿಸಿ ಕಾನೂನನ್ನೆ ರೂಪಿಸಿತ್ತು. ಅಂದು ಶಾಸ್ತ್ರದಿಂದ ಕಳೆದು ಕೊಂಡ ವಿದ್ಯೆಯನ್ನು ಇಂದು ಕೂಡ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಶ್ರೇಣಿಕೃತವಾದ ಜಾತಿ ಪ್ರಣೀತ ವ್ಯವಸ್ಥೆಯಲ್ಲಿ ಮೂಲ ಸಂವೇದನೆಯ ಶೋಷಿತ ಸಮುದಾಯವನ್ನು ಜಾತಿಯ ಕಾರಣಕ್ಕಾಗಿ ಕುತಂತ್ರ ಹಾಗೂ ಸ್ವಾರ್ಥದಿಂದ ಹೇಗೆ ವಿದ್ಯೆಯಿಂದ ದೂರ ಇರಿಸಲಾಗಿದೆ ಎಂಬುದಕ್ಕೆ ಈ ಪ್ರಸಂಗ ಸ್ಪಷ್ಟ ನಿದರ್ಶನವಾಗಿದೆ. ಕೆಳಜಾತಿಯವನೊಬ್ಬ ವಿದ್ಯೆ ಕಲಿಯುವ ಹಂಬಲದಿಂದ ಬಂದಾಗ ಮೇಲ್ವರ್ಗದ ಜಾತಿಯ ಮನಸ್ಸುಗಳು ಜಾತಿಯನ್ನು ಮುಂದುಮಾಡಿ ಹೇಗೆ ಆತನನ್ನು ನಿಂದಿಸುತ್ತವೆ ಎಂಬುದನ್ನು ಏಕಲವ್ಯ ದ್ರೋಣರ ನಡುವಿನ ಸಂಭಾಷಣೆಯಿಂದ ತಿಳಿಯಬಹುದು.

ದ್ರೋಣ : ಏಕಲವ್ಯ ನಿನ್ನ ಕನಸು ನನಸಾದರೆ
ಲೋಕದ ದುರಂತಕ್ಕೆ ನಾಂದಿಯಾಗುತ್ತದೆ. ನಿನಗೆ ಗುರು
ಮುಖೇನ ವಿದ್ಯೆ ಕಲಿಸಲು ಶಾಸ್ತ್ರ ಸಮ್ಮತಿಯಿಲ್ಲ. ನಿನ್ನನ್ನು
ಶಿಷ್ಯನನ್ನಾಗಿ ಸ್ವೀಕರಿಸಲು ನನಗೆ ಸಾಧ್ಯವಿಲ್ಲ.

ಏಕಲವ್ಯ : ಪೂಜ್ಯರೆ...... ಕೀಳು ಕುಲದಲ್ಲಿ ಹುಟ್ಟಿದ ತಪ್ಪಿಗೆ ಜೀವನ ಪೂರ್ತಿ ನಾನು ವಿದ್ಯೆಯಿಂದ ದೂರವಾಗಬೇಕೆ?

ಕೀಳು ಕುಲದಲ್ಲಿ ಹುಟ್ಟಿದ ತಪ್ಪಿಗೆ ಜೀವನ ಪೂರ್ತಿ ನಾನು ಈ ವಿದ್ಯೆಯಿಂದ ದೂರವಾಗಬೇಕೆ? ಎಂಬ ಏಕಲವ್ಯನ ಪ್ರಶ್ನೆ ಇಡೀ ಶೋಷಿತ ಸಮುದಾಯದ ಪ್ರಶ್ನೆಯಾಗಿದೆ. ಈ ದೇಶದ ಧರ್ಮಶಾಸ್ತ್ರ ಪುರಾಣಗಳು ಹೇಗೆ ಬಹುಸಂಖ್ಯಾತ ಮೂಲ ನಿವಾಸಿಗಳನ್ನು ವಿದ್ಯೆಯಿಂದ ವಂಚಿಸಿವೆ ಎಂಬುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದು. ಮಾನವ ಸಂಕುಲಕ್ಕೆ ಜ್ಞಾನವು ಅನ್ನದಷ್ಟೇ ಮಹತ್ವದ್ದು. ಪುರೋಹಿತಶಾಹಿ ವ್ಯವಸ್ಥೆ ವರ್ಣ ಕಲ್ಪನೆಯ ಜೊತೆಗೆ ಶೂದ್ರ ಹಾಗೂ ಶೋಷಿತರಿಗೆ ಅಕ್ಷರವನ್ನು ನಿರಾಕರಿಸಿ ಅಂಧಕಾರದತ್ತ ನೂಕಿದ್ದು ಕುಟಿಲ ನೀತಿಯಾಗಿದೆ.

ಈ ಆಧುನಿಕ ಯುಗದಲ್ಲೂ ದಲಿತರು ಮೂಢನಂಬಿಕೆಗಳಿಗೆ ಒಳಗಾಗುತ್ತಿದ್ದಾರೆ. ಈ ಸನಾತನ ಮನಸ್ಸುಗಳು ಇವರಿಗೆ ತುಂಬಿರುವ ಮೌಢ್ಯ ಗುಣಮುಖವಾಗುವ ಸೂಚನೆಗಳು ಕಾಣಿಸುತ್ತಿಲ್ಲ. ದೇವರು-ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯನ್ನು ದಲಿತರು ಕರ್ಮ ಸಿದ್ಧಾಂತವೆಂಬಂತೆ ಒಪ್ಪಿಕೊಂಡಿದ್ದಾರೆ. ಈ ಶೋಷಣೆ ಎಂಬುವುದು ನಮ್ಮ ಪೂರ್ವ ಜನ್ಮ ಫಲವೆಂಬಂತೆ ಸ್ವೀಕರಿಸುತ್ತಿದ್ದಾರೆ. ತಾವು ಅಸಹಾಯಕರಾಗಿ ತಮ್ಮ ಹೆತ್ತವರನ್ನೇ ತಮ್ಮ ಜಾತಿಯನ್ನೇ ನಿಂದಿಸಿಕೊಳ್ಳುವಂತೆ ಈ ಮನುವಾದಿಗಳು ದಲಿತರ ಮನಸ್ಸುಗಳಲ್ಲಿ ಅವೈಚಾರಿಕತೆಯನ್ನು ತುಂಬಿದ್ದಾರೆ.

ಏಕಲವ್ಯ : *ಪೂಜ್ಯರೆ ತಮ್ಮ ಶಿಷ್ಯನಾಗುವ ಭಾಗ್ಯ ನನಗಿಲ್ಲ.*
ಬೇಡನಾಗಿ ಹುಟ್ಟಿ ಬಿಲ್ಲುವಿದ್ಯೆ ಕಲಿಯಲು ಶಾಸ್ತ್ರ
ಸಮ್ಮತವಲ್ಲ.
ಓಹ್, ಇದಕ್ಕೆ ಖಂಡಿತವಾಗಿಯೂ ನೀವಾರು
ಹೊಣೆಗಾರರಲ್ಲ. ಕೀಳುಕುಲದಲ್ಲಿ ಹುಟ್ಟಿದ ಪಾಪಕ್ಕೆ ನಾನೇ
ಕಾರಣ, ನನ್ನ ಜನ್ಮಕ್ಕೆ ಧಿಕ್ಕಾರವಿರಲಿ, ಈ ಜನ್ಮದಲ್ಲಿ
ನನ್ನನ್ನು ಅವಮಾನಕ್ಕೆ ಈಡುಮಾಡಿದ ಹಿಂದಣ
ಜನ್ಮದ ನನ್ನಪಾಪ ಪರಂಪರೆಗೆ ಧಿಕ್ಕಾರವಿರಲಿ
ಹೆಚ್ಚು ಕಲಿಯ ಬೇಕೆಂಬ ಆಸೆಯ ಕಿಡಿಯನ್ನು ನನ್ನ ಎದೆಯಲ್ಲಿ
ಹೊತ್ತಿಸಿದ ನನ್ನ ಜ್ಞಾನ ದಾಹಕ್ಕೆ ಧಿಕ್ಕಾರವಿರಲಿ.

ವಾಸ್ತವದಲ್ಲಿಯೂ ಅನೇಕ ದಲಿತ ಪ್ರತಿಭೆಗಳು ಜಾತಿಯ ಕಾರಣದಿಂದಾಗಿ ಏಕಲವ್ಯನ ಹಾಗೆ ತಿರಸ್ಕಾರ, ನಿಂದನೆಗಳಿಗೆ ಒಳಗಾಗುತ್ತಿರುವುದನ್ನು ಕಾಣಬಹುದು. ಇದು ಭಾರತೀಯ ಜಾತಿವ್ಯವಸ್ಥೆಯಲ್ಲಿ ದಲಿತರ ವಸ್ತು ಸ್ಥಿತಿಯನ್ನು ಬಿಂಬಿಸುತ್ತದೆ.

ಬ್ರಾಹ್ಮಣಶಾಹಿ ಚಿಂತನೆ ಜಾತಿ, ವರ್ಗವ್ಯವಸ್ಥೆಯನ್ನು ಶಾಶ್ವತಗೊಳಿಸುವ ನಿಟ್ಟಿನಲ್ಲಿ ಹೇಗೆ ಚಿಂತಿಸುತ್ತದೆ ಎಂಬುದನ್ನು ನಾಟಕಕಾರರು ಭೀಷ್ಮರ ಮಾತುಗಳಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ!

ಭೀಷ್ಮ : ...... ನಮ್ಮ ವ್ಯವಸ್ಥೆ ಹಲವು
ಮೌಲ್ಯಗಳನ್ನು ಆಧರಿಸಿ ನಿಂತು, ಬದುಕೇ ಒಂದು ಸೂತ್ರಕ್ಕೆ
ಬದ್ಧವಾಗಿದೆ. ಈ ಲೋಕದಲ್ಲಿ ಮುಗಿಲೆತ್ತರದ ತೆಂಗಿನ
ಮರಗಳಿವೆ, ಸಣ್ಣಪುಟ್ಟ ತುಳಸಿಗಿಡಗಳಿವೆ. ಹೆಮ್ಮಾವಿನ ಮರಗಳಿವೆ.
ಅವುಗಳನ್ನು ಬಳಸಿದ ನವಿರಾದ ಬಳ್ಳಿಗಳಿವೆ.
ಖಗಮೃಗಗಳಲ್ಲಿಯೂ ಸಾಕಷ್ಟು ಏರುಪೇರುಗಳಿವೆ. ಇನ್ನು
ಮನುಜರಲ್ಲಿ ಬಡವ ಶ್ರೀಮಂತರಿದ್ದಾರೆ. ಬೇಡುವವರೂ,
ನೀಡುವವರೂ ಇದ್ದಾರೆ. ಅರಸರೂ, ಆಳುಗಳೂ ಈ ನೆಲದ
ಮೇಲಿದ್ದಾರೆ. ಲೋಕದ ಮಾನವ ಜೀವಗಳ ನಡುವೆ
ತರತಮ ಸಂಬಂಧಗಳನ್ನು ಉಳಿಸಿಕೊಂಡು ಬರುವುದೇ
ನಮ್ಮೆಲ್ಲರ ಜವಾಬ್ದಾರಿ. ಭಗವಂತನಿಂದ ಸೃಷ್ಟಿಯಾದ
ಲೋಕರೂಢಿಗೆ ಕುಂದಾದರೆ ಭಗವಂತನಿಗೆ ಅವಮಾನ
ಮಾಡಿದಂತೆ

ವ್ಯಾದಿಗ್ರಸ್ಥ ಸಂಪ್ರದಾಯ ಬದ್ಧ ಮನಸ್ಥಿತಿಗಳು, ವ್ಯವಸ್ಥೆಯ ಯಥಾಸ್ಥಿತಿ ಬದುಕನ್ನು ಕಾಪಾಡುವಲ್ಲಿ ಸದಾ ಹಪಹಪಿಸುತ್ತಿರುತ್ತವೆ, ಜಾತಿವಾದಿ ಮನಸ್ಸುಗಳು ಶ್ರೇಣೀಕೃತ ಸಮಾಜದ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಹೇಗೆ ಜಾಣತನದಿಂದ ಪ್ರಕೃತಿಯ ವಿವಿಧತೆಯನ್ನು ಉಪಮಾತ್ಮಕವಾಗಿ ಬಳಸುತ್ತವೆ ಎಂಬುದನ್ನು ಮೇಲಿನ ಮಾತು ಸ್ಪಷ್ಟಪಡಿಸುತ್ತದೆ..

ಶೋಷಿತ ಸಮುದಾಯದಲ್ಲಿ ಪ್ರಜ್ಞಾವಂತರಾದವರನ್ನು ಈ ವ್ಯವಸ್ಥೆ ಹೇಗೆ ತನ್ನ ತೆಕ್ಕೆಯೊಳಗೆ ಹಿಡಿದಿಡಲು ಪ್ರಯತ್ನಿಸುತ್ತಿರುತ್ತದೆ ಎಂಬುದನ್ನು ಒಂಭತ್ತು ಮತ್ತು ಹತ್ತನೆ ದೃಶ್ಯದಲ್ಲಿ ನಾಟಕಕಾರರು ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಮುಂದೆ ನಡೆಯಲಿರುವ ಕುರುಕ್ಷೇತ್ರ ಯುದ್ಧಕ್ಕೆ ಏಕಲವ್ಯನನ್ನು ದಾಳವಾಗಿ ಬಳಸಿಕೊಳ್ಳಲು ಕೌರವ ಮತ್ತು ಪಾಂಡವರು ಹೇಗೆ ಸಂಚು-ಪ್ರತಿಸಂಚುಗಳನ್ನು ನಿರ್ಮಿಸುತ್ತಾರೆ ಎಂಬುದನ್ನು ಇಲ್ಲಿ ತಿಳಿಯಬಹುದು. ದುರ್ಯೋಧನನು ಏಕಲವ್ಯನ ಬಗೆಗೆ ಆಡುವ ಮಾತುಗಳಲ್ಲಿ ಇದು ಸ್ಪಷ್ಟಗೊಳ್ಳುತ್ತದೆ!

ದುರ್ಯೋಧನ : ಕಾಡಿನಲ್ಲಿರುವ ಪುಟ್ಟ
ಪಡೆಯೊಂದರ ನಾಯಕನಾದ ಏಕಲವ್ಯ ದೊಡ್ಡ ಸಾಮ್ರಾಜ್ಯದ
ಕುರುಸೇನೆಯನ್ನು ಸೇರಿ ಹೋರಾಡಿ ಹುತಾತ್ಮನಾಗಲಿ.
ಚರಿತ್ರೆಯಲ್ಲಿ ಅವನ ಹೆಸರು ಅಜರಾಮರವಾಗಲಿ

ದುರ್ಯೋಧನನಾಡುವ ಸ್ವಾರ್ಥದ ಈ ಮಾತುಗಳಲ್ಲಿ, ಭಾರತದ ನಿಜವಾದ ಚರಿತ್ರೆ ಅಡಗಿದೆ. ಚರಿತ್ರೆಯನ್ನು ಪುರಾಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಂತಹ ಅನೇಕ ನೋವಿನ ದಾಖಲೆಗಳನ್ನು ಕಾಣಬಹುದು. ರಾಮಾಯಣದ ಶೂದ್ರತಪಸ್ವಿ, ಶಂಭೂಕನ ಪರಸಂಗ ಇಂತಹ

ಮತ್ತೊಂದು ಉದಾಹರಣೆ ಮಹಾಭಾರತದ ಕರ್ಣನ ಪ್ರಸಂಗ. ಈ ನಿಟ್ಟಿನಲ್ಲಿ ಈಗಿನ ಭಾರತೀಯ ಇತಿಹಾಸವನ್ನು ಪುನರ್‌ನಿರ್ಮಿಸುವ ಅಗತ್ಯತೆ ಇದೆ.

ನಾಟಕದ ಕೊನೆಯ ದೃಶ್ಯ, ನಾಟಕಕಾರನ ಆಶಯ ಮತ್ತು ಧೋರಣೆಯನ್ನು ಸಮರ್ಥವಾಗಿ ಬಿಂಬಿಸುತ್ತದೆ, ಏಕಲವ್ಯನು – ಕೃಷ್ಣ, ಅರ್ಜುನ, ಕರ್ಣ, ದುರ್ಯೋಧನರುಗಳು ಬೀಸಿದ ಬಲೆಗೆ ಬಲಿಯಾಗದೆ, ಅದರು ವಿರುದ್ಧ ಮುಖಾಮುಖಿ ಸಂಘರ್ಷಕ್ಕೆ ಅಣಿಯಾಗುತ್ತಾನೆ. ತುಳಿಯುವ ಶೋಷಕ ಸಮಾಜದ ವಿರುದ್ಧ ಸಮರ ಸಾರುತ್ತಾನೆ. ಸಂಧಾನಕ್ಕಾಗಿ ಬಂದ ಕೃಷ್ಣ, ಅರ್ಜುನ, ಕರ್ಣ, ದುರ್ಯೋಧನರಿಗೆ ಏಕಲವ್ಯ ಪ್ರತಿಕ್ರಿಯಿಸುವ ಬಗೆ ಇಡೀ ಪ್ರತಿಗಾಮಿ ವ್ಯವಸ್ಥೆಯನ್ನು ತಾತ್ವಿಕವಾಗಿ ಪ್ರಶ್ನಿಸುವಂತದ್ದಾಗಿದೆ.

ಅರ್ಜುನ : *ನೀನು ನಿಜವಾದ ವೀರ, ತಿರಸ್ಕೃತನಾದರೂ ಯಾರ*
ಸಹಾಯ ಇಲ್ಲದೆ ವಿದ್ಯೆ ಕಲಿತ ಛಲಗಾರ, ಬಲಗೈಯಲ್ಲಿ
ಹೋದದ್ದನ್ನು ಎಡಗೈಯಲ್ಲಿ ಸಾಧಿಸಿದೆ. ಹೆಬ್ಬೆರಳು
ಹೋದದ್ದು ಮಹಾ ಪ್ರಮಾದಕ್ಕ ಎಡೆ ಕೊಡಲಿಲ್ಲವಲ್ಲ.

ಏಕಲವ್ಯ : *ಆದರೂ ನನಗೆ ನೋವಾಗಿದೆ ಅರ್ಜುನ, ಬಲಗೈ ಹೆಬ್ಬೆರಳು*
ಕತ್ತರಿಸಿದ ಗಾಯ ಮಾಗಿದ್ದರೂ ಹೃದಯದಲ್ಲಾದ ಗಾಯ
ಮಾಯಲು ಯುಗಯುಗಳೇ ಬೇಕೆನಿಸುತ್ತದೆ."

ಅರ್ಜುನನ ಮಾತಿನಲ್ಲಿ, ತಾನು ಎಸಗಿದ ಆ ಕೃತ್ಯವನ್ನು, ಶೋಷಣಾ ಪ್ರವೃತ್ತಿಯನ್ನು ಸಮರ್ಥಿಸಿಕೊಳ್ಳುವ ಜಾಣತನವಿದ್ದರೆ, ಏಕಲವ್ಯನ ಮಾತಿನಲ್ಲಿ ತನಗಾದ ಶೋಷಣೆಯ ವಸ್ತುಸ್ಥಿತಿಯ ಪ್ರಜ್ಞೆ ಮತ್ತು ಪ್ರತಿಭಟನೆಯ ಜಾಗೃತಿಯಿದೆ.

ಶೋಷಿತ ಸಮುದಾಯ, ತಮ್ಮ ಮೇಲೆ ಪಾರಂಪರಿಕವಾಗಿ ನಡೆದಿರುವ ದಬ್ಬಾಳಿಕೆ, ದೌರ್ಜನ್ಯದ ವಸ್ತುಸ್ಥಿತಿಯ ಅರಿವಿನ ಎಚ್ಚರದಿಂದಲೇ ಸುತ್ತಲ ಸಮಾಜದೊಟ್ಟಿಗೆ ವ್ಯವಹರಿಸಬೇಕಾಗಿದೆ. ಎಚ್ಚರ ತಪ್ಪಿದಲ್ಲಿ ವ್ಯವಸ್ಥೆಯ ಕಬಂಧಬಾಹುಗಳ ಬಂಧನದಲ್ಲಿ ಸಿಲುಕುವ ಅಪಾಯವಿದೆ. ಜೊತೆಗೆ, ವ್ಯವಸ್ಥೆಯೊಳಗೆ ಕರಗಿಹೋಗಿ ಅದೇ ವ್ಯವಸ್ಥೆಯ ಮುಖವಾಣಿಯಾಗುವ ದುರಂತವೂ ಇದೆ. ಈ ವಾಸ್ತವ ಸತ್ಯವನ್ನು ನಾಟಕಕಾರರು ಕರ್ಣ ಮತ್ತು ಏಕಲವ್ಯರ ನಡುವೆ ನಡೆಯುವ ಸಂಭಾಷಣೆಯ ಮೂಲಕ ಹೀಗೆ ವ್ಯಕ್ತಪಡಿಸಿದ್ದಾರೆ.

ಕರ್ಣ : ಏಕಲವ್ಯ, ಕುಲದಲ್ಲಿ ಕೀಳೆನಿಸಿಕೊಂಡ ನಮ್ಮಂಥವರನ್ನು
ಮಮತೆಯಿಂದ ಕಾಣುವ ಜೀವ ಸುಯೋಧನನೊಬ್ಬನೇ?
ನಿನಗೂ ನನಗೂ ಈ ವಿಚಾರದಲ್ಲಿ ಸಾಮ್ಯತೆ ಇದೆ.
ಆದ್ದರಿಂದ ಅವನನ್ನು ಬೆಂಬಲಿಸುವುದು ಒಳ್ಳೆಯದು.
ನಮ್ಮನ್ನು ಹೀಯಾಳಿಸಿದ ಪಾಂಡವರ ಅಹಂಕಾರಕ್ಕೆ
ಸರಿಯಾದ ಉತ್ತರವೆಂದರೆ ಕೌರವರ ಪರವಾಗಿ ಕುರುಕ್ಷೇತ್ರದಲ್ಲಿ
ಹೋರಾಡುವುದು.

ಏಕಲವ್ಯ : ಕರ್ಣ, ನನಗೂ ನಿನಗೂ ಹೋಲಿಕೆಯಲ್ಲಿ? ನೀನೀಗ ಸೂತ
ಪುತ್ರನಲ್ಲ, ಅದನ್ನು ಮೀರಿ ಬೆಳೆದಿದ್ದೀಯ. ಈಗ ನೀನು
ಅಂಗಾಧಿಪತಿ, ಆದರೆ ನಾನಿನ್ನೂ ಬೇಡ, ಅದಕ್ಕಾಗಿಯೇ
ಕೌರವರು, ಪಾಂಡವರಿಬ್ಬರ ಹಿತಾಸಕ್ತಿಗಳು ನನಗೆ
ಬೇರೆಯಾಗಿ ಕಾಣುತ್ತಿಲ್ಲ. ಸುಯೋಧನ ನಿನ್ನನ್ನು
ಒಪ್ಪಿಕೊಂಡಿದ್ದಾನೆ. ಇಡೀ ಸೂತ ಕುಲವನ್ನಲ್ಲ, ಸೂತ ಕುಲ
ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇದೆ. ಸುಯೋಧನನ
ಆಶ್ರಯದಲ್ಲಿ ನೀನು ಮಾತ್ರ ಬೆಳೆದೆ, ನೀನು ನಿನ್ನ
ಕುಲದವರನ್ನು ಕಣ್ಣು ತುಂಬ ನೋಡಿಲ್ಲ, ಅವರೊಡನೆ
ಒಡನಾಟ ಮಾಡಿಲ್ಲ, ಬೆಸ್ತನ ಮೈ ವಾಸನೆಯಿಂದ
ಸುಯೋಧನ ಹತ್ತುಗಾವುದ ದೂರ ಓಡಿದರೆ ನೀನು
ನೂರು ಗಾವುದ ದೂರ ಓಡುವ ಸ್ಥಿತಿಯಲ್ಲಿದ್ದಿಯೆ. ನನ್ನ
ಮಾತು ಸುಳ್ಳೆ ದಾನಶೂರ?, ನನಗೆ ಎರಡೂ ಶಕ್ತಿಗಳೂ
ಒಂದೇ, ಅವರವರ ಸ್ವಾರ್ಥಕ್ಕಾಗಿ ಬಡಿದಾಡುತ್ತಿದ್ದಾರೆ.
ಇವರಿಬ್ಬರ ಕಚ್ಚಾಟದಲ್ಲಿ ನಾವೇಕೆ ಬಲಿಪಶುವಾಗಬೇಕು?

ಕರ್ಣ ಮತ್ತು ಏಕಲವ್ಯ ಇಬ್ಬರೂ ಕೂಡ ಶೋಷಿತ ಸಮುದಾಯದ ಪ್ರತಿನಿಧಿಗಳಾಗಿದ್ದರೂ, ಇವರಿಬ್ಬರಲ್ಲಿ ಸೂಕ್ಷ್ಮ ವ್ಯತ್ಯಾಸವನ್ನು ಕಾಣಬಹುದು. ನಾಟಕಕಾರರು ಅದನ್ನು ವಸ್ತುನಿಷ್ಠವಾಗಿ ಗುರುತಿಸಿದ್ದಾರೆ. ಕರ್ಣ ತನಗಾದ ಶೋಷಣೆಯ ವಾಸ್ತವದ ಅರಿವಿನ ಕೊರತೆಯಿಂದಾಗಿ ಮತ್ತೆ ಶೋಷಕ ವ್ಯವಸ್ಥೆಯ ಮತ್ತೊಂದು ಮಗ್ಗುಲಾದ ದುರ್ಯೋಧನನ್ನು ಬೆಂಬಲಿಸುತ್ತಾನೆ. ಆದರೆ ಏಕಲವ್ಯನಿಗೆ ಶೋಷಣೆಯ ಸ್ಪಷ್ಟ ಅರಿವಿರುವ ಕಾರಣ ಕೌರವ ಪಾಂಡವರಿಬ್ಬರೂ ಆತನಿಗೆ ಶೋಷಕರಾಗಿಯೇ ಕಾಣುತ್ತಾರೆ. ಕರ್ಣ ವ್ಯವಸ್ಥೆಗೆ ಬಲಿಯಾಗಿ, ಅದರೊಟ್ಟಿಗೆ ರಾಜಿಯಾದರೆ;

ಏಕಲವ್ಯ, ವ್ಯವಸ್ಥೆಯನ್ನು ಪ್ರತಿಭಟಿಸಿ ನಿಲ್ಲುತ್ತಾನೆ. ಪ್ರಸ್ತುತ ಶೋಷಿತ ಸಮುದಾಯದ ರಾಜಕಾರಣದ ಸಂಬಂಧದಲ್ಲಿ ಈ ಎರಡೂ ಬಗೆಯ ಮನಸ್ಥಿತಿಗಳನ್ನು ಕಾಣಬಹುದು.

'ಪಂಚಮ' ನಾಟಕವು 'ಜಾತಿ ಸಮಸ್ಯೆ'ಯ ಸ್ತರದಲ್ಲಿ ಬದುಕಿನ ಕ್ರೌರ್ಯಗಳನ್ನು ಜಿಜ್ಞಾಸೆಗೆ ಒಳಪಡಿಸಿದರೆ, 'ನೆಲಸಮ' ನಾಟಕವು 'ವರ್ಗಸಂಘರ್ಷ'ದ ನೆಲೆಯಲ್ಲಿ ಮನುಷ್ಯ ಬದುಕಿನ ಅಸ್ತಿತ್ವದ ತಲ್ಲಣಗಳನ್ನು ಚರ್ಚಿಸುತ್ತದೆ. 'ನೆಲಸಮ' ಎಂಬ ನಾಟಕದ ಹೆಸರೇಅರ್ಥಪೂರ್ಣವಾಗಿದ್ದು, ಬೂರ್ಜ್ವ ಅಧಿಕಾರಶಾಹಿ, ರಾಜಕೀಯ ವ್ಯವಸ್ಥೆ ಬಡವರ ಬದುಕನ್ನು ತುಳಿಯುವ ದುರಂತದ ಸಂಕೇತವಾಗಿಯೂ; ಶೋಷಕ ವ್ಯವಸ್ಥೆಯನ್ನು ಇನ್ನಿಲ್ಲವಾಗಿಸಬೇಕೆಂಬ ಹೋರಾಟದ ಆಶಯವಾಗಿಯೂ ಇದೆ. ನಾಲ್ಕು ದೃಶ್ಯಗಳಲ್ಲಿ ಸಾಗುವ 'ನೆಲಸಮ' ನಾಟಕವು ಹಾಡಿನ ಮೂಲಕ ಆರಂಭವಾಗಿ, ಹಾಡಿನ ಮೂಲಕವೇ ಮುಕ್ತಾಯಗೊಳ್ಳುವುದು ವಿಶೇಷವಾಗಿದೆ. ನಾಟಕದ ಆರಂಭದಲ್ಲಿ ಮತ್ತು ಕೊನೆಯಲ್ಲಿ ಬರುವ ಎರಡೂ ಹಾಡುಗಳುನಾಟಕಕಾರರ 'ಸಾವಿರಾರು ನದಿಗಳು' ಮತ್ತು 'ಕಪ್ಪುಕಾಡಿನ ಹಾಡು' ಕವನ ಸಂಕಲನಗಳಲ್ಲಿ 'ಕೊಳಗೇರಿಯ ಹಾಡು', 'ಬಿದ್ದಾವು ಮನೆಗಳು' ಎಂಬ ಶೀರ್ಷಿಕೆಯಲ್ಲಿ ಕವಿತೆಗಳಾಗಿ ಪ್ರಕಟಗೊಂಡಿವೆ.

ನಾಟಕದ ಆರಂಭದಲ್ಲಿ ಮೂವರು ಹಾಡುಗಾರರು ಕಂಜರಿ ನುಡಿಸುತ್ತ ರಂಗದ ಮೇಲೆ ಹಾಡುತ್ತ ಬರುವ :

ಬಡವರ ಜೋಪಡಿ ನೆಲಸಮವಾದ
ನೋವಿನ ಕಥೆಕೇಳಿ
ದುಡಿಯುವ ಜನಗಳ ಪ್ರಾಣವು ಹೋದ
ಗೋಳಿನ ಕಥೆಕೇಳಿ.

ಈ ಹಾಡಿನಲ್ಲಿ ನಗರ ಪ್ರದೇಶದಲ್ಲಿನ ಕೊಳಗೇರಿಯ ಜನರ ಬದುಕಿನ ವಾಸ್ತವ ನಿರೂಪಣೆ ಇದೆ. ಬಡವರು ಬದುಕನ್ನು ಕಟ್ಟಿಕೊಳ್ಳಲು ಹಪಹಪಿಸಿದ ಸ್ಥಿತಿಗಳನ್ನು ದಾಖಲೆಗೊಳಿಸಿದೆ. ಓಟಿನ ಉದ್ದೇಶದಿಂದ ತಾತ್ಕಾಲಿಕ ಬೆಳಕನ್ನು ನೀಡಿ ಸಮಯಸಾಧಕತನ ತೋರಿಸಿದ ರಾಜಕಾರಣಿಗಳ ವಿಡಂಬನೆಯನ್ನು ಗುರುತಿಸಲು ಸಾಧ್ಯ.

ಮಾರ್ಕ್ಸವಾದದ ತಾತ್ವಿಕತೆಯನ್ನು ಪ್ರಧಾನ ಅಭಿವ್ಯಕ್ತಿಯನ್ನಾಗಿಸಿಕೊಂಡಿರುವ ಈ ನಾಟಕವು, ನಗರದ ಶ್ರೀಮಂತರ ಹಾಗೂ ಕೊಳಗೇರಿಯ ಬಡಜನರ ಬದುಕಿನ ನಡುವಿನ ಸಂಘರ್ಷವನ್ನು ತೆರೆದಿಡುತ್ತದೆ. ಇದು ಒಂದು ಬಗೆಯಲ್ಲಿ ಎರಡು ಭಿನ್ನಸಂಸ್ಕೃತಿಗಳ ಮುಖಾಮುಖಿ ಸಂಘರ್ಷವೂ

ಹೌದು. ಆರಂಭದ ಹಾಡು ಮುಗಿದ ನಂತರ ಮಹಾರಾಣಿ ಚಂದ್ರಮ್ಮನ ಮಗ ವಿಜಯ ಮತ್ತು ಆತನ ಸಹಾಯಕ ಚೆನ್ನ ರಂಗದ ಮೇಲೆ ಪ್ರವೇಶಿಸುತ್ತಾರೆ. ಚೆನ್ನನ ಪಾತ್ರ ವ್ಯವಸ್ಥೆಯೊಟ್ಟಿಗೆ ರಾಜಿಯಾಗಿದ್ದರೂ, ಆ ವ್ಯವಸ್ಥೆಯ ಹಲವು ಸಣ್ಣತನಗಳನ್ನು ವ್ಯಂಗ್ಯ ಹಾಗೂ ವಿಡಂಬನಾತ್ಮಕವಾಗಿ ಟೀಕಿಸುವುದನ್ನು ಕಾಣಬಹುದು.

ವಿಜಯ ಮತ್ತು ಚೆನ್ನ ಲೋಕಾಭಿರಾಮವಾಗಿ ಮಾತನಾಡಿಕೊಂಡು ಬರುತ್ತಿರುವಾಗ ಎಲ್ಲಿಂದಲೋ ಬಂದ ದುರ್ವಾಸನೆಯನ್ನು ಸಹಿಸದೆ ಸಂಕಟಪಡುತ್ತಿದ್ದ ವಿಜಯನನ್ನು ಗಮನಿಸಿದ ಚೆನ್ನ ಏಜೆಂಟರನ್ನು ಕರೆಯುತ್ತಾನೆ :

ಚೆನ್ನ : (ಅವರನ್ನ ಪರೀಕ್ಷಿಸುವಂತೆ ಮಾಡಿ) ನಿಮಗೆ ಮೂಗೇ ಇಲ್ವೇನ್ರೋ?

ಏಜೆಂಟರು: ಮೂಗು ಅದೇ ಸ್ವಾಮಿ..... ಏನು ಮಾಡಬೇಕು ಹೇಳಿ?

ಚೆನ್ನ : ನಿಮ್ಮ ಮೂಗಿಗೆ ದುರ್ವಾಸನೆ ಬಡೀತಾ ಇಲ್ವೇನ್ರೋ?

ಏಜೆಂಟರು: (ಆಶ್ಚರ್ಯದಿಂದ) ಎಲ್ಲಿ? ಎಲ್ಲಿ ವಾಸನೆ ಬಡೀತಾ ಇದೆ? ಏನೂ ಇಲ್ವಲ್ಲ?

ಚೆನ್ನ : ಲೇ ನಿಮಗೆ ಬಡೀದೆ ಇರಬಹುದು, ನಮಗೆ ಬಡೀತಾ ಅದಲ್ಲಾ. ಮೊದಲು ಮೂಗು ಮುಚ್ಚಿಕೊಳ್ರೋ.... (ಅವರು ಯಾಂತ್ರಿಕವಾಗಿ ಮೂಗು ಮುಚ್ಚಿಕೊಳ್ಳುವರು) ಲೇ.......ಏನು ನಿಂತಿರೋದು...... ಈ ದುರ್ವಾಸನೆ ಎಲ್ಲಿಂದ ಬರ್ತಾ ಇದೆ ತಿಳಿದುಕೊಂಡು ಬನ್ನಿ (ಇಬ್ಬರೂ ಮೂಗು ಮುಚ್ಚಿಕೊಂಡು ಓಡುವರು)"

ಚೆನ್ನನ ಈ ಮಾತುಗಳು, ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸರ್ವಾಧಿಕಾರಿ ಆಡಳಿತ ವ್ಯವಸ್ಥೆ ಹೇಗೆ ತನ್ನ ಇಚ್ಛೆಗೆ ತಕ್ಕಂತೆ ಜನಸಾಮಾನ್ಯರನ್ನು ಬಳಸಿಕೊಂಡು ನಿಯಂತ್ರಿಸುತ್ತಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಸರ್ವಾಧಿಕಾರಿ ವ್ಯವಸ್ಥೆಯನ್ನು ಪ್ರಶ್ನಿಸುವ ಹಕ್ಕನ್ನು ಕಳೆದುಕೊಂಡಿದ್ದ ಜನಸಾಮಾನ್ಯರು, ಅಧಿಕಾರಿಗಳ ಆಜ್ಞೆಗೆ ತಕ್ಕಂತೆ ವರ್ತಿಸುವುದು ಅನಿವಾರ್ಯವಾಗಿತ್ತು. ಆಜ್ಞೆಯನ್ನು ಮೀರಿ ಪ್ರಶ್ನಿಸುವವರನ್ನು ಘೋರ ಶಿಕ್ಷೆಗೆ ಒಳಪಡಿಸಲಾಗುತ್ತಿತ್ತು. ಈ ಅಂಶವನ್ನು ನಾಟಕಕಾರರು ಬಹಳ ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ದುರ್ವಾಸನೆ ಎಲ್ಲಿಂದ ಬರುತ್ತಿದೆ ಎಂಬುದನ್ನು ತಿಳಿದುಕೊಂಡು ಬರಲು ಹೋಗಿದ್ದವರಲ್ಲಿ :

ಏಜೆಂಟ್ ೧ :(ಓಡಿ ಬಂದು ಏದುಸಿರು ಬಿಡುತ್ತಾ) ಸ್ವಾಮಿ ನನಗೆ ಏನೂ ಗೊತ್ತಾಗ್ತಾ ಇಲ್ಲ...... ಇಲ್ಲೆ ಪಕ್ಕದಲ್ಲೇ ಒಂದು ಪೋಲಿಸ್ ಸ್ಟೇಷನ್ ಅದೆ...... ಅಲ್ಲಿ ಏನೋ ನರ ಮನುಷ್ಯರ ವಾಸನೆ ಬರ್ತಾ ಇದೆ.

ವಿಜಯ : ಸಾಧ್ಯವಿಲ್ಲ....... ಎಂದೆಂದಿಗೂ ಸಾಧ್ಯವಿಲ್ಲ. ಅಪ ಪ್ರಚಾರ, ಇವರಿಗೆ ವಿರೋಧ ಪಕ್ಷದೋರು ಹೇಳಿಕಟ್ಟಿರಬೇಕು. ಹಿಡೀರಿ ಇವರನ್ನು ಒಳಕ್ಕೆ ಹಾಕಿ (ಕಿರುಚುವನು)

ಮೇಲಿನ ಸಂಭಾಷಣೆಯನ್ನು ಸೂಕ್ಷ್ಮವಾಗಿ ಗ್ರಹಿಸಿದರೆ, ತುರ್ತುಪರಿಸ್ಥಿತಿಯಲ್ಲಿ ಪ್ರತಿಗಾಮಿ ರಾಜಕೀಯ ವ್ಯವಸ್ಥೆ ತನ್ನೆಲ್ಲ ದೌರ್ಜನ್ಯಕ್ಕೆ ಪೋಲೀಸ್ ಅಧಿಕಾರವನ್ನು ಬಳಸಿಕೊಂಡ ಬಗೆ ಅರಿವಾಗುತ್ತದೆ. ಸರ್ವಾಧಿಕಾರಿ ವ್ಯವಸ್ಥೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಹಲವು ಜನವಿರೋಧಿ ಕಾರ್ಯಕ್ರಮಗಳಲ್ಲಿ ಕೊಳಗೇರಿ ಜನರ ಬದುಕನ್ನು ನಾಶಗೊಳಿಸುವುದೂ ಒಂದು. ಇದನ್ನು ನಾಟಕಕಾರರು ಇಡೀ ನಾಟಕದಲ್ಲಿ ವಸ್ತುನಿಷ್ಠವಾಗಿ ಬಿಂಬಿಸಿದ್ದಾರೆ. ಅಂದಿನ ಸರ್ಕಾರಕ್ಕೆ ಕೊಳಗೇರಿ ನಿರ್ಮೂಲನಗೊಳಿಸುವ ಮೂಲ ಉದ್ದೇಶವಿತ್ತೆ ವಿನಃ, ಕೊಳಗೇರಿಯ ಜನರಿಗೆ ಪುನರ್‌ವಸತಿಯನ್ನು ಕಲ್ಪಿಸುವ, ಅವರ ಬದುಕನ್ನು ಪುನರ್‌ನಿರ್ಮಿಸುವ ಯಾವುದೇ ಜನಪರ ಕಾಳಜಿ ಇರಲಿಲ್ಲ ಎಂಬುದನ್ನು ಈ ನಾಟಕ ಸ್ಪಷ್ಟಪಡಿಸುತ್ತದೆ.

ಈ ನಾಟಕ ಸ್ವಾತಂತ್ರ್ಯಾನಂತರದ ಭಾರತದ ಸಮಾಜವಿರೋಧಿ ರಾಜಕಾರಣದ ವಿಪರ್ಯಾಸವನ್ನು ಕಟ್ಟಿಕೊಡುತ್ತದೆ. ಭಾರತೀಯರಿಗೆ ವಿದೇಶಿಯರ ಆಡಳಿತದಿಂದ ಸ್ವಾತಂತ್ರ್ಯ ಸಿಕ್ಕಿ ವರ್ಷಗಳು ಉರುಳುತ್ತಿದ್ದರೂ ಕೊಳಗೇರಿಯ ಬದುಕನ್ನು ಹಸನುಗೊಳಿಸಲು ಸಾಧ್ಯವಾಗದಿರುವುದು ದುರಂತ. ಆದರೆ ಭಾರತೀಯ ರಾಜಕಾರಣ ನೊಂದಜನಸಾಮಾನ್ಯರ ಜೀವನವನ್ನೆ ಕಸಿದುಕೊಳ್ಳಲು ಯತ್ನಿಸುತ್ತಿರುವುದು ಭೀಕರವಾಗಿದೆ.

ನಾಟಕಕಾರರು ನಾಟಕದಲ್ಲಿ ಬರುವ ಮಹಾರಾಣಿ ಚಂದ್ರಮ್ಮಳ ವ್ಯಕ್ತಿತ್ವವನ್ನು ಪರಿಚಯಿಸುತ್ತಲೇ, ಆ ಮೂಲಕ ಇಂದಿರಾಗಾಂಧಿಗೆ ಬಡವರ ಬಗೆಗೆ ಇದ್ದಂತಹ ಹುಸಿ ಕಾಳಜಿ ಮತ್ತು ಆಕೆಯ ಮುಖವಾಡದ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದಾರೆ. ಆ ಎಲ್ಲ ಪ್ರತಿಭಟನಾ ಧೋರಣೆ ಇಡೀ ನಾಟಕದ ಮೂಲ ಸೆಲೆಯಾಗಿರುವುದನ್ನು ಕಾಣಬಹುದು.

ವಿಜಯ : *ಅಮ್ಮ, ಈ ಬಡವರಿಂದ ಇಡೀ ದೇಶಕ್ಕೆ ಕಳಂಕ ಬಂದಿದೆ.*
ಅವರ ಕೊಳಗೇರಿಗಳು ಗಂಗಾ ಯಮುನೆಯಂಥ ಪವಿತ್ರ
ನದಿಗಳು ಹರಿಯುವ ನಾಡಿನಲ್ಲಿ ಇರಲೇ ಬಾರದು.

ಮಹಾರಾಣಿ : ವಿದೇಶದ ಪ್ರವಾಸಿಗರು ಬಂದಾಗಲಂತೂ ಈ ಬಡವರು
ಎಲ್ಲೆಂದರಲ್ಲಿ ಅವರ ಕಣ್ಣಿಗೆ ಬಿದ್ದು ಭಾರತದ ಮಾನವನ್ನು
ಬೀದಿಪಾಲು ಮಾಡುತ್ತಾರೆ.

ವಿಜಯ : *ಅಮ್ಮ, ವಿದೇಶಿಯರು ಇಂಡಿಯಾದಲ್ಲಿ ಪ್ರವಾಸ*

ಮಾಡುವಾಗ ಬಡವರನ್ನೆಲ್ಲಾ ಮನೆಯಲ್ಲಿ ಕೂಡಿ ಬೀಗ ಹಾಕಬೇಕು. ಅಥವಾ ಅವರನ್ನು ನಗರದಿಂದ ಹೊರಗೆ ಓಡಿಸಬೇಕು. ಇಲ್ಲದಿದ್ದರೆ ಈ ಪ್ರದೇಶದ ಮಾನ ಮರ್ಯಾದೆ ಸರೀಕರ ಮುಂದೆ ಹರಾಜಾಗುತ್ತದೆ.

ಮಹಾರಾಣಿ : *ಭಾರತದ ರಾಜಕುಮಾರ, ಆ ಗುಡಿಸಲುಗಳು ಒಂದು ಗಳಿಗೆಯೂ ಈ ನಗರದಲ್ಲಿರಲು ಬಿಡಬಾರದು. ಬಡವರು ಎಲ್ಲಾದರೂ ಹೋಗಿ ಬದುಕಲಿ ಭಾರತದ ಮಾನವು ಉಳಿಯಲಿ.......................... ಬಡವರ ಬಗ್ಗೆ ಭಾಷಣ ಮಾಡಲು ಮೈಕು ಇರಬೇಕು. ಬಡವರು ಇರಬೇಕು, ನನ್ನ ಸುತ್ತ ಬಂದೂಕಧಾರಿ ಪೋಲಿಸ್ ಇರಬೇಕು, ನನ್ನ ಭಾಷಣಕ್ಕೆ ಗಳಿಗೆ ಗಳಿಗೆಗೆ ಚಪ್ಪಾಳೆ ಇರಬೇಕು, ಚಪ್ಪಾಳೆ ತಟ್ಟದ ಬಡವರ ತಟ್ಟಲು ಕೆಲವರು ಇರಬೇಕು.*

ಮೇಲಿನ ಈ ಎಲ್ಲ ಮಾತುಗಳು, ಭಾರತದಂತಹ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ, ಅಧಿಕಾರಶಾಹಿ ಹೇಗೆ ಬಡವರನ್ನು ಶೋಷಿಸುತ್ತಿದೆ ಎಂಬುದನ್ನು ಅಭಿವ್ಯಕ್ತಿಸುತ್ತವೆ. ವರ್ಗ ತಾರತಮ್ಯದ ಪರಿಸರದಲ್ಲಿ ಬಡವರ ಚಿಂತಾಜನಕ ಸ್ಥಿತಿಯ ಭೀಕರತೆ ಇಲ್ಲಿದೆ. ಪ್ರಸ್ತುತ ಭಾರತದಲ್ಲಿನ ಬಡವರ ಸ್ಥಿತಿ ಮೇಲಿನ ವಿವರಕ್ಕಿಂತ ಭಿನ್ನವಾದದ್ದೇನಲ್ಲ. ರಾಜಕಾರಣ ತನ್ನೆಲ್ಲ ಜನಪದ ಮೌಲ್ಯಗಳನ್ನು ಕಳೆದುಕೊಂಡು ಹೇಗೆ ಶೋಷಣೆಯ ಮಾನದಂಡವಾಗಿ ಬಳಕೆಯಾಗಿದೆ ಎಂಬುದನ್ನು ಮಹಾರಾಣಿಯ ಮಾತುಗಳು ತಿಳಿಸಿಕೊಡುತ್ತವೆ.

ಪ್ರಜಾಪ್ರಭುತ್ವ ವ್ಯವಸ್ಥೆಯ ಮೌಲ್ಯಗಳನ್ನು ಮೆಟ್ಟಿನಿಂತ ತುರ್ತುಪರಿಸ್ಥಿತಿ, ಬಡವರ, ಶ್ರಮಿಕರ ಬದುಕಿನ ಅಸ್ತಿತ್ವವನ್ನು ಹೇಗೆ ನುಚ್ಚುನೂರು ಮಾಡಿತು ; ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೇಗೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿತು ಎಂಬುದನ್ನು ಕೊಳಗೇರಿಯನ್ನು ನೆಲಸಮ ಮಾಡಲು ಬಂದ ಮಹಾರಾಣಿಯ ಕಡೆಯ ಏಜೆಂಟರು ಆಡುವ ಮಾತುಗಳಿಂದ ತಿಳಿಯಬಹುದು.

ಏಜೆಂಟ್ ೧ : .... ಗೌರ್ನಮೆಂಟ್ ಅಂದ್ರೆ ದೇವ್ರು.
ಈ ದೇಶದ ದೇವ್ರು. ಈ ಗುಡಿಸಲ್ ಕೆಡವಾಕ್ತೀವಿ
ಇಲ್ಲಿ ಪಾರ್ಕ್‌ಮಾಡಬೇಕು. ಹೂವಾ ಬೆಳಸ್‌ಬೇಕು
ಸಾಯಂಕಾಲದ ಹೊತ್ತು ಶ್ರೀಮಂತರು ಬಂದು ಕೂತ್ಕ
ತ್ತಾರೆ. ಅವ್ರ ಹೆಂಡ್ತಿ, ಮಕ್ಳು, ನಂಟ್ರು ಬಂದ್ ಕುಂತ್‌ಕೊತ್ತಾರೆ.

ಪ್ರಜಾಪ್ರಭುತ್ವದ ನಾಡಿನಲ್ಲಿ ಸರ್ಕಾರಿ ಕಾನೂನುಗಳು ಜನಪರವಾಗಿ ವರ್ತಿಸಬೇಕಾಗಿತ್ತು.ಹತಾಶ ಜನರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಉದ್ದರಿಸುವ ಪ್ರಮುಖ ಆಶಯಗಳೇ ರಾಜಕಾರಣದ ಮುಖ್ಯ ಸಿದ್ಧಾಂತ. ಆದರೆ, ಭಾರತದ ಅಧಿಕಾರಶಾಹಿ ವ್ಯವಸ್ಥೆ, ಸ್ವಾತಂತ್ರ್ಯಾ ನಂತರದ ದಿನಗಳಿಂದಲೂ ಈ ದೇಶದ ಬಡವರನ್ನು, ದುರ್ಬಲರನ್ನು ತನ್ನ ಹುಸಿಮೌಲ್ಯಗಳಿಂದ ವಂಚಿಸುತ್ತಾ ಬಂದಿದೆ ಎಂಬುದಕ್ಕೆ 'ನೆಲಸಮ' ನಾಟಕ ಜೀವಂತ ಸಾಕ್ಷಿಯಾಗಿದೆ.

ಪರಿಣಾಮದ ದೃಷ್ಟಿಯಿಂದ 'ಪಂಚಮ'ಕ್ಕಿಂತ 'ನೆಲಸಮ' ನಾಟಕ ಓದುಗರ ಅಥವಾ ನೋಡುಗರ ಪ್ರಜ್ಞೆಯಲ್ಲಿ ಬಡವರ, ತುಳಿತಕ್ಕೊಳಪಟ್ಟವರ ಬದುಕಿನ ಸಮಸ್ಯೆಗಳ ಬಗ್ಗೆ ಚಿಂತನೆಯನ್ನು ಹುಟ್ಟುಹಾಕಬಲ್ಲದು. "ಪಂಚಮ"ದ ಕ್ರಾಂತಿಕಾರಿಯ ಗೆಲುವಿಗಿಂತ 'ನೆಲಸಮ'ದ ದಲಿತರ ದುರಂತ ಆಳವಾಗಿ ಮನಸ್ಸಿನಲ್ಲಿ ಬೇರೂರುತ್ತದೆ. ಸಮಕಾಲೀನ ಘಟನೆಯೊಂದನ್ನು ಆಧರಿಸಿ ರಚಿಸಲಾಗಿರುವ ಈ ನಾಟಕದ ಪಾತ್ರ ಪರಿಪೋಷಣೆ ಮತ್ತು ಸಂಭಾಷಣೆಗಳಲ್ಲಿ ಯಕ್ಷಗಾನ ಸಂಪ್ರದಾಯದ ಧಾಟಿಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಾರೆ. ಇಲ್ಲಿನ ಹಾಡುಗಳೂ ಭಾವತೀವ್ರತೆಯಿಂದ ಕೂಡಿದ್ದು ದುರಂತದ ನೋವನ್ನು ಪರಿಣಾಮಕಾರಿಯಾಗಿ ಮೂಡಿಸುತ್ತವೆ. ಜಾತಿಹೋರಾಟ, ವರ್ಗಹೋರಾಟದಂತಹ ಸಮಕಾಲೀನವಾದ ಜ್ವಲಂತ ಸಮಸ್ಯೆಗಳನ್ನು ವಸ್ತುವಾಗಿಸಿಕೊಳ್ಳುವ ಲೇಖಕನು ಎದುರಿಸಬೇಕಾಗುವ ವಿಶಿಷ್ಟ ಸವಾಲುಗಳನ್ನು ಸಿದ್ದಲಿಂಗಯ್ಯನವರು ಅರಿತಿದ್ದಾರೆ.

ಒಟ್ಟಾರೆ 'ಪಂಚಮ' ಮತ್ತು 'ನೆಲಸಮ' ನಾಟಕಗಳ ಮುಖೇನ ಸಿದ್ಧಲಿಂಗಯ್ಯನವರು ಶೋಷಕ ವ್ಯವಸ್ಥೆಯ ದೌರ್ಜನ್ಯ, ದಬ್ಬಾಳಿಕೆ ; ಶೋಷಿತ ಸಮುದಾಯದ ಅಸಹಾಯಕತೆ, ದುಸ್ಥಿತಿಯನ್ನು ಕುರಿತು ವಿವೇಚಿಸಿದ್ದಾರೆ. ಜೊತೆಗೆ ಶೋಷಿತರು ಪ್ರಜ್ಞಾವಂತರಾಗಿ, ಸಂಘರ್ಷಾತ್ಮಕ ಧೋರಣೆಯ ಮೂಲಕವಾದರೂ ಸಾಮಾಜಿಕ ಬದಲಾವಣೆಗೆ ಮುಂದಾಗಬೇಕು ಎಂಬ ತಮ್ಮ ಆರೋಗ್ಯಕರ ನಿಲುವನ್ನು ಈ ನಾಟಕಗಳಲ್ಲಿ ಪ್ರತಿಪಾದಿಸಿರುವುದು ಅವರಿಗಿರುವ ದಟ್ಟ ಸಾಮಾಜಿಕ ಪ್ರೇಮವನ್ನು ತಿಳಿಸುತ್ತದೆ.

ಎಪ್ಪತ್ತರ ದಶಕದ ನಂತರ ಪ್ರಜ್ಞಾವಂತ, ಅಕ್ಷರಸ್ಥ ದಲಿತ ಸಮುದಾಯದ ವಿಭಿನ್ನ ಧೋರಣೆಯ ಮನಸ್ಥಿತಿಗಳ ತಾಕಲಾಟವನ್ನು ನಾಟಕಕಾರರು ಸಮರ್ಥವಾಗಿ ಬಿಂಬಿಸಿದ್ದಾರೆ. "ಆಳುವ ವರ್ಗದ ಸಂಸ್ಕೃತಿಯಲ್ಲಿ ಕರಗಿ ಹೋಗಿ ಸುಳ್ಳು ಮನುಷ್ಯರಾಗಿ ಮಾರ್ಪಟ್ಟಿರುವ ವಿದ್ಯಾವಂತ ದಲಿತರ ಅಸ್ತಿತ್ವದ ಹುಡುಕಾಟದ ಪ್ರಶ್ನೆ, "ಪಂಚಮ" ನಾಟಕದ ವಸ್ತು. ಇಲ್ಲಿ ಬರುವ ಐದು ಜನ ಅಭ್ಯರ್ಥಿಗಳು

ಐದು ಧೋರಣೆಗಳ ಪ್ರತಿನಿಧಿಗಳು. ಶೋಷಿತ ಹಾಗೂ ಶೋಷಕ ವರ್ಗಗಳಲ್ಲಿನ ಅಜ್ಞಾನ, ದೌರ್ಜನ್ಯವನ್ನು ಚಿತ್ರಿಸುತ್ತಲೇ, ತಾರತಮ್ಯದ ಸಮಾಜದ ಅಸ್ತಿತ್ವಕ್ಕೆ ಹೇಗೆ ಈ ಎರಡೂ ವರ್ಗಗಳು ಮೂಲಕಾರಣಗಳಾಗಿವೆ ಎಂಬುದನ್ನೂ ವಿವರಿಸಿದ್ದಾರೆ. ಯಥಾಸ್ಥಿತಿವಾದದ ಮೂಲಭೂತ ಬದಲಾವಣೆಯ ನಿಟ್ಟಿನಲ್ಲಿ ಶೋಷಿತ ಸಮುದಾಯಗಳು ಯಾವ ಬಗೆಯ ಪ್ರಜ್ಞೆಯನ್ನ ಮೈಗೂಡಿಸಿಕೊಂಡಾಗ ಆರೋಗ್ಯ ಪೂರ್ಣ ಸಮಸಮಾಜದ ನಿರ್ಮಿತಿ ಸಾಧ್ಯ ಎಂಬುದನ್ನು ನಾಟಕಕಾರರು 'ಪಂಚಮ' ಪಾತ್ರದ ಮುಖೇನ ಅಭಿವ್ಯಕ್ತಿಸಿದ್ದಾರೆ. ತುಳಿತಕ್ಕೊಳಪಟ್ಟ ಸಮುದಾಯ ಎಚ್ಚರಗೊಳ್ಳದ ಹೊರತು ಶೋಷಕ ವ್ಯವಸ್ಥೆಯ ಬದಲಾವಣೆ ಅಸಾಧ್ಯ ಎಂಬುದು ನಾಟಕದ ನಿಲುವಾಗಿದೆ. ನಾಟಕದಲ್ಲಿ ಬರುವ ಹಯವದನರಾವ್, ಬ್ರಾಹ್ಮಣಶಾಹಿ-ಅಧಿಕಾರಸ್ಥ ಶೋಷಕ ಸಮುದಾಯದ ಪ್ರತೀಕವಾಗಿಯೂ ; ಸಂದರ್ಶನಕ್ಕೆ ಬರುವ ಐದು ಜನ ದಲಿತರನ್ನು ಶೋಷಿತ ಸಮಾಜದ ಪ್ರತಿನಿಧಿಗಳಾಗಿಯೂ ಚಿತ್ರಿಸಲಾಗಿದೆ. ನಾಟಕವು, ವಾಸ್ತವ ಸಮಸ್ಯೆಯನ್ನೇ ಹಾಸ್ಯ ಮತ್ತು ವ್ಯಂಗ್ಯಪೂರಿತ ಪರಿಭಾಷೆಯಲ್ಲಿ ಚರ್ಚೆಗೊಳಪಡಿಸುತ್ತಾ ಸಾಗುತ್ತದೆ. ಜೊತೆಗೆ, ಸ್ವಾತಂತ್ರ್ಯಾನಂತರದ ದಲಿತಪರ ಸರ್ಕಾರದ ಯೋಜನೆಗಳ ವೈಫಲ್ಯತೆಯನ್ನು ಗಂಭೀರವಾಗಿ ಚಿತ್ರಿಸಲಾಗಿದೆ.

ಸಮಾನತೆಯ ಸಮಾಜದ ಕನಸಿನ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಸಂವಿಧಾನಾತ್ಮಕವಾಗಿ ಕಲ್ಪಿಸಿರುವ ಮೀಸಲಾತಿ ಸೌಲಭ್ಯದ ಉದ್ದೇಶವನ್ನು ಸವರ್ಣೀಯರು ಕೆಲವು ಮನಸ್ಸುಗಳು ಅರ್ಥ ಮಾಡಿಕೊಳ್ಳದೆ ಹೋದದ್ದು ದುರಂತ. ಅದನ್ನು ನಾಟಕಕಾರರು ಹಯವದನರಾವ್ ಪಾತ್ರದ ಮುಖೇನ : "ಕುಡುಕ್ ನನ್ ಮಕ್ಳು – ಬಂದ್ಬಿಟ್ಟಿವೆ, ನಮ್ಮ ತಲೆ ತಿನ್‌ತವೆ ಸಾರ್, ಏನೋ ರಿಜರ್‌ವೇಷನ್ ಕನ್ಸೆಷನ್ ಅಂತಾ ಡಿಗ್ರಿ ಮಾಡ್ಬಿಟ್ಟಿವೆ. ತಲೇಲಿ ಏನೂ ಇರಲ್ಲಾ.. ಅನ್‌ಕಲ್ಚರ್ಡ್ ಜನಗಳು, ಕೊಳಕು ಜನಗಳು, ಛೀ...... ಆಫೀಸ್‌ನಲ್ಲಿ ಹೆಂಗ್ ನಡ್ಕೋಬೇಕು ಅನ್ನೊ ಕಾಮನ್ ಸೆನ್ಸ್ ಇಲ್ಲಾ, ಶೂದ್ರು ಮುಂಡೇವು, ಚಂಡಾಲ್‌ರ್ರು (ಪ್ರೇಕ್ಷಕರನ್ನು ಉದ್ದೇಶಿಸಿ) ಕರೀ ನಾಯೀನ ಬಿಳಿ ನಾಯ್ ಮಾಡೋಕಾಗುತ್ತೇನ್ರಿ, ಐದ್ ಬೆರಳೂ ಒಂದೇ ಸಮಾ ಇರೋಕಾಗುತ್ತೇನ್ರೀ, ಏನೋ? ಈ ಹಾಳ್ ಸರ್ಕಾರ ನಮ್ ಹೆಣ ತೆಗೆಯುತ್ತೆ ನೋಡಿ ಈ ಹೊಲೆಮಾದಿಗರು ತಂಗಲ್ ತಿಂದು ಬಂದ್ ಬಿಟ್ಟಿವೆ. ಮ್ಯಾನರ್ಸ್ ಗೊತ್ತಿಲ್ಲ, ಎಷ್ಟ್ ಡಿಗ್ರೀ ಮಾಡಿದ್ರೇನು ಚಂಡಾಲ್ರು ಚಂಡಾಲ್ರೇ." ಎಂಬುದಾಗಿ ಮಾತನಾಡಿಸಿದ್ದಾರೆ. ಎಂದರೆ, ದಲಿತನೊಬ್ಬಬೌದ್ಧಿಕ ಪರಿಶ್ರಮದಿಂದ ಗಳಿಸಿದ ವಿದ್ವತ್ತು ಸವರ್ಣೀಯರ ದೃಷ್ಟಿಯಲ್ಲಿ ಮೀಸಲಾತಿಯಿಂದ ಪಡೆದ ವಿದ್ವತ್ ಆಗಿರುತ್ತದೆ. ಜೊತೆಗೆ, ಭಾರತೀಯ ಜಾತಿವ್ಯವಸ್ಥೆಯಲ್ಲಿ ದಲಿತರ ಸ್ಥಿತಿ, ಶ್ರೇಣೀಕೃತ ಪದ್ಧತಿಯನ್ನು ಸ್ಥಿರವಾಗಿಸುವ ಮೂಲಭೂತವಾದಿಗಳ

ಹುನ್ನಾರ ಹಾಗೂ ದಲಿತರ ಬಗೆಗೆ ಸವರ್ಣೀಯರಿಗಿರಬಹುದಾದ ಸಿಟ್ಟು, ಅಸೂಯೆಯನ್ನು ಮೇಲಿನಮಾತುಗಳು ವಿವರಿಸುತ್ತವೆ.

ಜಾತಿಯ ಕಾರಣಕ್ಕಾಗಿ ದಲಿತರನ್ನು ತುಚ್ಛೀಕರಿಸುವ ಮೇಲ್ವರ್ಗದವರು, ಅದೇ ದಲಿತ ಹೆಣ್ಣು ಮಕ್ಕಳ ವಿಷಯದಲ್ಲಿ ತಮ್ಮ ಜಾತಿಯ ಶ್ರೇಷ್ಠತೆಯನ್ನು ಮರೆತು ಕಾಮಪಿ ಪಾಸುಗಳಾಗಿ ವರ್ತಿಸುತ್ತಾರೆ. ಇದನ್ನು ನಾಟಕಕಾರರು ಹಯವದನರಾವ್ ಪುಟ್ಟಲಕ್ಕಮ್ಮಳೊಟ್ಟಿಗೆ ನಡೆದುಕೊಳ್ಳುವ ರೀತಿಯಲ್ಲಿ ಸೂಕ್ಷ್ಮವಾಗಿ ಬಿಂಬಿಸಿದ್ದಾರೆ. ಹಯವದನರಾವ್, ಪುಟ್ಟಲಕ್ಕಮ್ಮಳನ್ನು ನೀನು ಯಾವ ಶಾಲಾ-ಕಾಲೇಜಿನಲ್ಲಿ ಓದಿದ್ದು ಎಂಬುದಾಗಿ ಪ್ರಶ್ನಿಸಿದಾಗ ಆಕೆ :'ಸಾಯಿಬಾಬಾ ಬಾಲಕ, ಬಾಲಕಿಯರ ಪ್ರಾಥಮಿಕ ಪಾಠಶಾಲೆ; ಮಾತೆ ಮಹಾದೇವಿ ಹೈಸ್ಕೂಲ್ ; ಗುರುಬಾಲ ಲೀಲ ಕಾಲೇಜು ಎಂಬುದಾಗಿ ಉತ್ತರಿಸುತ್ತಾಳೆ. ಈ ಮಾತುಗಳು, ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ಸಂಪ್ರದಾಯಸ್ಥರ, ಮಠಮಾನ್ಯಗಳ ಹಿಡಿತಕ್ಕೆ ಸಿಕ್ಕಿರುವುದನ್ನು ವ್ಯಂಗ್ಯವಾಗಿ ವಿಡಂಬಿಸುತ್ತವೆ. ಸರ್ಕಾರ ರೂಪಿಸುವ ಯೋಜನೆಗಳು ಯಶಸ್ವಿಯಾಗುತ್ತಿಲ್ಲ ; ಶೋಷಿತರ ಬದುಕನ್ನು ಕಟ್ಟಿಕೊಡುವಲ್ಲಿ ಅವುಗಳ ಪಾತ್ರ ಎಷ್ಟು ನಿಷ್ಪ್ರಯೋಜಕವಾದುದು ಎಂಬುದನ್ನು ಈ ನಾಟಕ ಬಿಂಬಿಸುತ್ತದೆ. ಒಟ್ಟಾರೆ ಸರ್ಕಾರದ ದಲಿತಪರ ಯೋಜನೆಗಳು ಒಂದು ರೀತಿಯಲ್ಲಿ ದಲಿತರ ಶೋಷಿತ ಬದುಕಿನ ಯಥಾಸ್ಥಿತಿಯನ್ನು ಜೀವಂತವಾಗಿಡುವ ಹುಸಿಮೌಲ್ಯಗಳಾಗಿವೆ. "ನೀವು ಜೀವಾನ ತೇದಿದ್ದೀರಿ. ಗಂಧ ತೇಯೋಹಂಗೆ ತೇದಿದ್ದೀರಿ. ನೀವು ತ್ಯಾಗ ಮಾಡೋಕೆ ಆಗ್ಲಿ, ಕಳ್ಕೋಳ್ಳೊಕೇ ಆಗ್ಲೀ ಈಗ ನಿಮ್ಹತ್ರ ಏನೂ ಇಲ್ಲ. ನೀವು ಬರಿದಾಗಿದ್ದೀರಿ" ಎಂಬ ಹಯವದನರಾವ್‌ನ ಮಾತುಗಳು ಇಡೀ ದಲಿತ ಸಮುದಾಯದ ಬದುಕಿನ ವಸ್ತುಸ್ಥಿತಿಯನ್ನು ಚೆನ್ನಾಗಿ ಪರಿಚಯಿಸುತ್ತವೆ.

ಎರಡನೇ ಅಭ್ಯರ್ಥಿಯಾಗಿ ಸಂದರ್ಶನಕ್ಕೆ ಬರುವ ಶೇಷಾದ್ರಿ ಆಫೀಸಿನ ಒಳಗಡೆ ಅಧಿಕಾರಿಯ ಮೇಜು, ಹರಿಜನೋದ್ಧಾರ ಮಂಡಲಿಯ ಬೋರ್ಡು, ಗಾಂಧಿ ಫೋಟೋಗಳನ್ನು ನೋಡಿ ಭಾವಾವೇಶಕ್ಕೆ ಒಳಗಾಗುತ್ತಾನೆ. ಬೋರ್ಡಿನಲ್ಲಿ ತನ್ನ ಸಮುದಾಯದ ಹೆಸರಿರುವುದು ಮತ್ತು ಅಧಿಕಾರಿ ತನ್ನನ್ನು ಕುರ್ಚಿಯಲ್ಲಿ ಕೂರಲು ಹೇಳಿದ್ದೇ ಶೇಷಾದ್ರಿಗೆ ದೊಡ್ಡದೆನಿಸುತ್ತದೆ. ಆ ಕ್ಷಣಕ್ಕೆ ತನ್ನೆಲ್ಲ ಮೂಲಭೂತ ಸಮಸ್ಯೆಗಳನ್ನು ಮರೆಯುತ್ತಾನೆ. ಅಂದರೆ ದಲಿತ ವಿದ್ಯಾವಂತ ಯುವಕರು ಅಲ್ಪತೃಪ್ತಿಗೆ ಬಲಿಯಾಗಿ, ಭಾವುಕ ಸ್ಥಿತಿಯಲ್ಲಿ ಹೇಗೆ ತಮ್ಮ ಜವಾಬ್ದಾರಿಯ ಬಹುಮುಖ್ಯ ಆಶಯವನ್ನು ಮರೆಯುತ್ತಾರೆ ಎಂಬುದನ್ನು ನಾಟಕಕಾರರು ಬೊಟ್ಟು ಮಾಡಿ ತೋರಿಸುತ್ತಾರೆ. ಜೊತೆಗೆ, ಶೋಷಕ

ವ್ಯವಸ್ಥೆ ಕ್ಷಣಿಕ ಆಮಿಷಗಳನ್ನು ಒಡ್ಡಿ ಹೇಗೆ ಇಡೀ ಶೋಷಿತ ಸಮುದಾಯವನ್ನು ಅನಾದಿಕಾಲದಿಂದ ತನ್ನ ಕಪಿಮುಷ್ಟಿಯಲ್ಲಿ ಬಂಧಿಸಿದೆ ಎಂಬ ಸತ್ಯವನ್ನು ಇದರಿಂದ ಮನಗಾಣಬಹುದು. ಈ ಬಗೆಯ ದೋಷಗಳನ್ನು ಹೇಳುತ್ತಲೇ ಶೋಷಿತ ಸಮುದಾಯ ಇಂತಹ ಭಾವುಕ ನೆಲೆಯಿಂದ ಹೊರ ಬರಬೇಕೆಂಬುದು ನಾಟಕಕಾರರ ಆಶಯವಾಗಿದೆ.

ಪ್ರಜ್ಞಾವಂತ ದಲಿತ ಸಮುದಾಯ, ಬ್ರಾಹ್ಮಣೀಕರಣಗೊಳ್ಳುತ್ತಲೇ ತಮ್ಮ ಮೂಲನೆಲೆಗೆ ತಾವೇ ಶತ್ರುಗಳಾಗಿ ಪರಿವರ್ತನೆಗೊಳ್ಳುತ್ತಿರುವುದರ ಬಗೆಗೆ ಹಾಗೂ ಸಮುದಾಯದೊಟ್ಟಿಗಿನ ಭಾವನಾತ್ಮಕ ಸಂಬಂಧವನ್ನು ಕಡಿದುಕೊಳ್ಳಲು ಪ್ರಯತ್ನಿಸುತ್ತಿರುವುದರ ಬಗೆಗೆ ನಾಟಕಕಾರರಿಗೆ ತಣ್ಣನೆಯ ವಿಷಾದವಿದೆ. ತಂದೆ ತಾಯಿಗಳ ಹೆಸರನ್ನು ಹೇಳಿಕೊಳ್ಳಲು ಅಸಹ್ಯಪಡುವಷ್ಟರಮಟ್ಟಿಗೆ ದಲಿತ ವಿದ್ಯಾವಂತ ಯುವಕರು ದಾರಿ ತಪ್ಪುತ್ತಿರುವುದು ವಾಸ್ತವ ಸತ್ಯವಾಗಿದೆ. ಪ್ರಸ್ತುತದಲ್ಲಿಯೂ ದಲಿತ ಯುವಕರು ತಮ್ಮ ಮೂಲ ಹೆಸರುಗಳನ್ನು ಬದಲಾಯಿಸಿಕೊಂಡು ನವಬ್ರಾಹ್ಮಣರಾಗಿ ತಲೆದೂಗುತ್ತಿರುವುದು ದುರಂತವೇ ಸರಿ. ಈ ನಾಟಕದಲ್ಲಿ ಬರುವ ಶೇಷಾದ್ರಿಯು, ತಮ್ಮ ತಂದೆ – ತಾಯಿ ಇಟ್ಟಿದ್ದ 'ಚಿಕ್ಕವೆಂಕಟ' ಎನ್ನುವ ಹೆಸರನ್ನು ಬದಲಾಯಿಸಿ 'ಶೇಷಾದ್ರಿ ಎಚ್' ಎಂಬುದಾಗಿ ಇಟ್ಟುಕೊಂಡಿರುತ್ತಾನೆ. ತನಗೆ ಹೆಸರಿಟ್ಟ ತನ್ನ ತಂದೆ–ತಾಯಿಗಳನ್ನೇ 'ನಾಯಿಗಳು, ಅನಾಗರಿಕರು' ಎಂದು ನಿಂದಿಸುತ್ತಾನೆ. ತಾನು ಬ್ರಾಹ್ಮಣೀಕರಣಗೊಂಡಿರುವ ಸಂಗತಿಯನ್ನು ಹಯವದನರಾವ್‌ಗೆ : "ನನ್ನ ದೇಹ ಸಾ. (ಷರಟು ಮತ್ತು ಬನೀನಿನ ಒಳಗಿರುವ ಜನಿವಾರವನ್ನು ಆತುರದಿಂದ ತಡಕಿ ನೋಡಿಕೊಂಡು ಅಧಿಕಾರಿಗೆ ಕಾಣುವಂತೆ ಎಳೆದು ಒಳಕ್ಕೆ ಬಿಡುತ್ತಾನೆ) ದಾರ ಕಾಣ್‌ತಾ ಇಲ್ವ, ಸಾ. ನಾವು ಒಂದಲ್ಲ ಒಂದಿನ ನಿಮ್ ಥರಾ ಆಯ್ತೀವಿ ಸಾ. ನಾನು ವಿದ್ಯಾವಂತ ಅಂತಾ ನನಗೆ ಗೊತ್ತಾದ್ ತಕ್ಷಣ ನಮ್ಮ ಮನೇಲಿದ್ದ ಮುಳುಕಟ್ಟಮ್ಮನ ಪೋಟಾನಾ ತಿಪ್ಪೇಗಾಕಿಬುಟ್ಟೆ, ಸಾ. ಈಗ (ದನಿ ಏರಿಸಿ) ನಮ್ಮ ಮನೆ ದೇವ್ರು ಶ್ರೀ ಶ್ರೀ ಶ್ರೀ ರಾಘವೇಂದ್ರ ಸ್ವಾಮಿ ಸಾ" ಎಂದು ಹೇಳುತ್ತಾನೆ. ನಾಟಕಕಾರರು ಶೇಷಾದ್ರಿಯ ಪಾತ್ರದ ಮುಖೇನ, ವಿದ್ಯಾವಂತ ದಲಿತ ಯುವಕರು ಹುಸಿ ಬ್ರಾಹ್ಮಣೀಕರಣಕ್ಕೆ ಬಲಿಯಾಗುತ್ತಲೇ ತಮ್ಮ ಇಡೀ ವ್ಯಕ್ತಿತ್ವ, ಸಮುದಾಯ ಹಾಗೂ ಸಂಸ್ಕೃತಿಯನ್ನು ಮರೆಯುತ್ತಿರುವ ದುರಂತವನ್ನು ಚಿತ್ರಿಸಿದ್ದಾರೆ.

ದಲಿತರು ಸೂಕ್ತ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳದೆ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ರಾಜಕಾರಣದಲ್ಲಿ ಗುಲಾಮರಾಗಿ ಬದುಕುತ್ತಿರುವುದು ವಾಸ್ತವ ಸಂಗತಿ. ಕುತಂತ್ರದ

ರಾಜಕೀಯ ಶಕ್ತಿಗಳು ತೋರುವ ಆಸೆ-ಆಮಿಷಗಳಿಗೆ ಮರುಳಾದ ದಲಿತರು ತಮ್ಮ ಓಟಿನ ಹಕ್ಕನ್ನೆ ಮಾರಿಕೊಂಡು ಬದುಕುತ್ತಿರುವುದನ್ನು ನಾಟಕಕಾರರು ಗಾಂಧಿದಾಸ್ ಮತ್ತು ಹಯವದನರಾವ್ ನಡುವಿನ ಸಂಭಾಷಣೆಯ ಮೂಲಕ ಹೀಗೆ ಅಭಿವ್ಯಕ್ತಿಸಿದ್ದಾರೆ.

ಹಯವದನರಾವ್ : ...... ಯಾವಾಗಾದ್ರು ಓಟ್‌ಗೆ ನಿಂತಿದ್ರೇನ್ರಿ?

ಗಾಂಧಿದಾಸ್ : ಛೇ...... ಛೇ...... ಛೇ...... ನನ್ ಲೈಫ್‌ನಲ್ಲಿ ಕ್ಯಾನ್ವಾಸ್ ಮಾಡಿದ್ದೇನೇವರ್‍ರೂ ನಾನೇ ಕಂಟೆಸ್ಟ್ ಮಾಡಿಲ್ಲ. ಸಾರ್. ನೋಡಿ ಸಾರ್ ನಮ್ಮ ಜನಾಂಗ ಬಡವರಾಗಿರೋದ್ರಿಂದ ಗಂಡಸ್ರುಗಾದ್ರೆ ಪಂಚೆ ಕೊಡಬೇಕು ಹೆಂಗ ಸಾದ್ರೆ ಸೀರೆ ಕೊಡಬೇಕು. ಇದರಿಂದ ನಮ್ ಬಟ್ಟೆ ಸಮಸ್ಯೆ ಬಗೆಹರೀತು. ಮನ್ ಮನೆಗೂ ಒಂದೊಂದು ಬಾಟಲ್‌ಹೆಂಡಕೊಟ್ರೆ ನಮ್ ಹೊಟ್ಟೆ ಸಮಸ್ಯೇನೂ ಬಗೆಹರಿತು. ಇದರಿಂದ ಶತಮಾನಗಳ ನೋವನ್ನು ಮರೆತು ಸೊಲ್ಪ ಹೊತ್ತಾದ್ರು ಕುಣೀಬೋದು

ಹಯವದನರಾವ್ : ಫೆಂಟಾಸ್ಟಿಕ್ ! ದಲಿತ ಪ್ರಜ್ಞೆ ಅಂದ್ರೆ ಇದು ರೀ !

ಗಾಂಧಿದಾಸ್ : ಸೆಂಟ್ ಪರ್ಸಂಟ್ ಕರೆಕ್ಟ್ ಸಾರ್, ಇದನ್ನೆಲ್ಲಾ ಸಪ್ಲಯ್ ಮಾಡೋಕೆ ನಾನೆ ಸಾರ್ ಏಜೆಂಟು. ಏನೋ ಸಾರ್, ಶೋಷಿತ ಜನಕ್ಕೆ ನಂದೂ ಒಂದು ಅಳಿಲು ಸೇವೆ ಆಗ್ತಾ ಇದೆ ಸಾರ್.

ಹಯವದನರಾವ್ : ನೀವು ಗ್ರಾಜುಯೇಟ್ ಆಗಿದ್ದಕ್ಕೂ ಸಾರ್ಥಕ ಆಯ್ತು ರೀ, ನಿಮ್ದು ಪಂಚೆ ಮತ್ತು ಸೀರೆ ಪಾರ್ಟಿ, ಇದೇ ದಲಿತ್ ಪಾರ್ಟಿ ಆಹಾ ! ಹೆ ! (ಜೋರಾಗಿ ನಗುವನು)"

ಹಯವದನರಾವ್ ಹಾಗೂ ಗಾಂಧಿದಾಸ್ ನಡುವೆ ನಡೆಯುವ ಮೇಲಿನ ಸಂಭಾಷಣೆಯಲ್ಲಿ ಒಟ್ಟು ಶೋಷಿತ ಸಮುದಾಯ ಚಿಂತಿಸಬೇಕಾದ ಬಹುಮುಖ್ಯ ಅಂಶವಿದೆ. ಶಕ್ತಿ ರಾಜಕಾರಣ ಹೇಗೆ ದಲಿತರನ್ನ ಹಲವು ವರ್ಷಗಳಿಂದ ಗುಲಾಮರನ್ನಾಗಿಯೆ ಉಳಿಸಿಕೊಂಡು ಬಂದಿದೆ ಎಂಬುದನ್ನು ಇದು ತಿಳಿಸುತ್ತದೆ. ಪ್ರತಿಗಾಮಿ ರಾಜಕೀಯ ಶಕ್ತಿಗಳು ಹಣ, ಹೆಂಡ, ಬಟ್ಟೆಗಳನ್ನ ಮುಂದುಮಾಡಿ ಬಡವರ ಓಟನ್ನು ಖರೀದಿಸಿ ಅಧಿಕಾರದ ಗದ್ದುಗೆ ಏರಿ ಬಡವರನ್ನೆ ಶೋಷಿಸುತ್ತಿದ್ದಾರೆ ಎಂಬುದನ್ನು ಇದರಿಂದ ತಿಳಿಯಬಹುದು. ಪ್ರಸ್ತುತ ಭಾರತೀಯ ರಾಜಕಾರಣದ ಕುತಂತ್ರ ಇದಕ್ಕಿಂತ ಭಿನ್ನವಾದದ್ದಲ್ಲ. ದಲಿತರಲ್ಲಿ ಇರುವ ಗಾಂಧಿದಾಸ್‌ನಂತಹ ಕೆಲವು ಪ್ರಜ್ಞಾವಂತ ದಲಿತರು ಹೇಗೆ

ಇಡೀ ಶೋಷಿತ ಸಮುದಾಯವನ್ನು ಜನವಿರೋಧಿ ರಾಜಕೀಯ ಶಕ್ತಿಗೆ ಬಲಕೊಡುತ್ತಿದ್ದಾರೆ : ಹಾಗೂ ಪ್ರತಿಗಾಮಿ ರಾಜಕಾರಣಿಗಳು ಗಾಂಧಿದಾಸ್‌ನಂತಹ ದಲಿತರನ್ನು ಉಪಯೋಗಿಸಿಕೊಂಡು ಹೇಗೆ ಇಡೀ ದಲಿತ ಸಮುದಾಯವನ್ನು ಶೋಷಿಸುತ್ತಿದ್ದಾರೆ ಮತ್ತು ಅವರು ರಾಜಕೀಯ ಅಧಿಕಾರವನ್ನು ಪಡೆಯದ ಹಾಗೆ ಹೇಗೆ ನಿಯಂತ್ರಿಸಲಾಗುತ್ತಿದೆ ಎಂಬುದನ್ನು ಮೇಲಿನ ಮಾತುಗಳು ಧ್ವನಿಸುತ್ತವೆ. ಒಟ್ಟಾರೆ, ದಲಿತರು ಯಾವುದೇ ಆಮಿಷಗಳಿಗೆ ಬಲಿಯಾಗದೆ ರಾಜಕೀಯ ಪ್ರಜ್ಞೆಯ ಅವಶ್ಯಕತೆ ಹಾಗೂ ಜವಾಬ್ದಾರಿಯನ್ನು ಅರಿತುಕೊಂಡು ರಾಜಕೀಯ ಅಧಿಕಾರ ಪಡೆಯಬೇಕು. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಅರಿವು ಹಾಗೂ ರಾಜಕಾರಣದ ಮಹತ್ವವನ್ನು ಕುರಿತು ಗಂಭೀರ ಆಲೋಚನೆ ದಲಿತ ಸಮೂಹಕ್ಕೆ ಬಂದಾಗ ಮಾತ್ರ ಇಡೀ ಶೋಷಿತರ ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿಕ್ಕೆ ಸಾಧ್ಯ ಎಂಬುದು ನಾಟಕಕಾರರ ಧೋರಣೆಯಾಗಿದೆ.

ನಾಲ್ಕನೆಯ ಅಭ್ಯರ್ಥಿಯಾಗಿ ಸಂದರ್ಶನಕ್ಕೆ ಬರುವ 'ಪಾಪಣ್ಣ', ಹಯವದನರಾವ್ ಜೊತೆ ನಡೆಸುವ ಸಂಭಾಷಣೆ ಮೂಲಕ, ಈ ಸಮಾಜದಲ್ಲಿ ಜಾತಿ ಸಮಸ್ಯೆಯಷ್ಟೇ ವರ್ಗತಾರತಮ್ಯದ ಸಮಸ್ಯೆಯೂ ಕೂಡ ಗಟ್ಟಿಯಾಗಿರುವುದನ್ನು ನಾಟಕಕಾರರು ಬಿಂಬಿಸಿದ್ದಾರೆ. ಮೇಲ್ವರ್ಗದ ಅಧಿಕಾರಶಾಹಿ ಸಮುದಾಯ ಶೋಷಿತರನ್ನ ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಅಭಿವ್ಯಕ್ತಿಸಿದ್ದಾರೆ.

ಹಯವದನರಾವ್ : _........ ನೋಡಯ್ಯ ಇದು ನಾವು ಬಡ
ಜನಗಳಿಗೆ ತಕ್ಕಂತೆ ಕಟ್ಟಿಸ್‌ಕೊಟ್ಟ ಇರೋ ಲೋ
ಕಾಸ್ಟ್ ಹೌಸ್, ಲೋಕ್ಲಾಸ್ ಜನಕ್ಕೆ ಲೋಕಾಸ್ಟ್
ಹೌಸಸ್ ಹ್ಹಾ..... ಹ್ಹಾ .... ಹ್ಹಾ...... ನೋಡು
ಇದಿದೇ ನೋಡು ಇದು ಹೇಗಿದೆ? ಇದು ನಮ್
ಅಧಿಕಾರಿಗಳಿಗೆ ತಕ್ಕಂತೆ ಮಲ್ಟಿ ಸ್ಟೋರ್ ಬಿಲ್ಡಿಂಗ್
ಹೇಗಿದೆಯಯ್ಯಾ? (ಅಣಕಿಸುವ ರೀತಿಯಲ್ಲಿ ಕೇಳುತ್ತಾನೆ)

ಪಾಪಣ್ಣ : ಇಂಥಾ ಮಹಡಿ ಕಟ್‌ವಾಗ್ಲೆ ಸಾರ್ ನಮ್ಮಪ್ಪ
ಮೇಲಿಂದ ಬಿದ್ದು ತಲೆ ಹೊಡ್ದು ಸತ್ತಿದ್ದು.
(ದುಃಖಿಸುತ್ತಾನೆ)

ಹಯವದನರಾವ್ : ಏನ್ಮಾಡಕ್ಕಾಗುತ್ತಯ್ಯ, ನಿಮ್ಮಪ್ಪ ಮಹಡಿ
ಕಟ್ಟೋಕೋಗಿ ತಲೆ ಹೊಡ್ಕೊಂಡ್ ಸತ್ತ. ಇಲ್ಲಿ

ನನ್ಗೆ ಪ್ರಮೋಷನ್ ಸಿಗ್ತು, ಇದೆಲ್ಲ ದೇವರು ಇಚ್ಛೆ

ಕಣಯ್ಯ ಹ್ಹಾ......... (ನಗು).....

ಮೇಲಿನ ಸಂಭಾಷಣೆಯಲ್ಲಿ ನಾಟಕಕಾರರು ಬಡವ ಶ್ರೀಮಂತರ ನಡುವಿನ ವರ್ಗತಾರತಮ್ಯವನ್ನು ಚಿತ್ರಿಸುತ್ತಲೇ, ಶ್ರೀಮಂತರು, ಬಡವರ ಬದುಕನ್ನು ಬಲಿತೆಗೆದುಕೊಂಡು ತಮ್ಮ ಸುಖಸೌಧಗಳನ್ನು ಹೇಗೆ ನಿರ್ಮಿಸಿಕೊಳ್ಳುತ್ತಾರೆ ಎಂಬುದನ್ನು ಸಾಂಕೇತಿಕವಾಗಿ ಹಿಡಿದಿಟ್ಟಿದ್ದಾರೆ.

ಅಸಮಾನತೆಯ ಶೋಷಕ ವ್ಯವಸ್ಥೆಯನ್ನು ಕ್ರಾಂತಿಯಿಂದ ಮಾತ್ರ ಅಮೂಲಾಗ್ರವಾಗಿ ಬದಲಿಸಲು ಸಾಧ್ಯ ಎಂಬ ಧೋರಣೆಯನ್ನು ನಾಟಕಕಾರರು 'ಪಂಚಮ' ಪಾತ್ರದ ಮುಖೇನ ಅಭಿವ್ಯಕ್ತಿಸಿದ್ದಾರೆ. ನಾಟಕಕಾರರು ಸ್ವತಃ ಕ್ರಾಂತಿಕಾರಿಗಳು, ಹೋರಾಟಗಾರರು, ಹಲವು ಚಳವಳಿಗಳಲ್ಲಿ ನೇರವಾಗಿ ಭಾಗವಹಿಸಿದ್ದವರು. ಮಾರ್ಕ್ಸ್‌ನ ವರ್ಗ ಹೋರಾಟದ ಸಿದ್ಧಾಂತದಿಂದ ಪ್ರಭಾವಿತರಾಗಿದ್ದ ಕಾರಣ ಈ ಬಗೆಯ ಆಶಯ ಮೂಡಿಬಂದಿದೆ. ನಾಟಕಕಾರರ ಮನದಾಳದಲ್ಲಿ ಇರುವ ಸ್ಥಾಪಿತ ಮೌಲ್ಯಗಳ ಬಗೆಗಿನ ತಿರಸ್ಕಾರ, ಶೋಷಕ ವ್ಯವಸ್ಥೆಯ ವಿರುದ್ಧದ ಪ್ರತಿಭಟನಾತ್ಮಕ ಧೋರಣೆಗಳು 'ಪಂಚಮ' ಪಾತ್ರದಲ್ಲಿ ಮೂರ್ತರೂಪ ಪಡೆದಿದೆ. ನಾಟಕಕಾರರು ಐದನೆ ಅಭ್ಯರ್ಥಿಯಾದ 'ಪಂಚಮ' ಪಾತ್ರದ ಸ್ವರೂಪದ ಬಗೆಗೆ ಹೇಳುತ್ತಲೇ ಎಪ್ಪತ್ತರ ದಶಕದ ಹೋರಾಟಗಾರರ ಸ್ವರೂಪ ಎಂತಹುದು ಹಾಗೂ ಅವರಲ್ಲಿದ್ದ ದಿಟ್ಟತನ, ಸ್ವಾಭಿಮಾನದ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಹಯವದನರಾವ್ ಹಾಗೂ ಪಂಚಮನ ನಡುವೆ ನಡೆಯುವ ಸಂಭಾಷಣೆಯಲ್ಲಿ, ಪಂಚಮನು ಕೊಡುವ ಒಂದೊಂದು ಉತ್ತರವೂ ಕೂಡ, ಇಡೀ ಶೋಷಕ ವ್ಯವಸ್ಥೆಯ ಮುಖಕ್ಕೆ ರಾಚುವಂತೆ ಇವೆ. ಶತಮಾನಗಳಿಂದ ಶೋಷಣೆಯ ನೋವುಂಡ ಶೋಷಿತನೊಬ್ಬ ಪ್ರಜ್ಞಾವಂತನಾದಾಗ ಶೋಷಕ ವ್ಯವಸ್ಥೆಯನ್ನು ಮುಖಾಮುಖಿಯಾಗಿಸಿಕೊಳ್ಳುವ ಪರಿ ಪಂಚಮ ಪಾತ್ರದಲ್ಲಿ ನಿರೂಪಿತಗೊಂಡಿದೆ.

ಈ ನಾಟಕದ ನಾಯಕ ಪಂಚಮ ವಿದ್ಯಾವಂತ ಯುವಕ, ತನ್ನವರ ಮೇಲೆ ನಡೆಯುವ ಶೋಷಣೆಯನ್ನು ಸೂಕ್ಷ್ಮಮತಿಯಿಂದ ಗುರುತಿಸುವ ಮತಿವುಳ್ಳವನು. ಶತಶತಮಾನಗಳಿಂದ ಮೇಲ್ಜಾತಿಯ ಅಧಿಕಾರಿಗಳು ನಡೆಸಿಕೊಂಡು ಬರುತ್ತಿರುವ ಶೋಷಣೆಯನ್ನು ವಿರೋಧಿಸುತ್ತಾನೆ. ಜಾಗೃತನಾಗಿರುವ ಪಂಚಮ ಸ್ವಾಭಿಮಾನಿ. ವೈದಿಕ ವ್ಯವಸ್ಥೆಯ ಮೇಲೆ ಆಕ್ರೋಶವನ್ನು ಅಭಿವ್ಯಕ್ತಿಸುತ್ತಾನೆ. ಈ ಪಂಚಮನ ಪಾತ್ರದ ಮೂಲ ಸಿದ್ಧಲಿಂಗಯ್ಯನವರು ದಲಿತ ಯುವಕರಿಗೆ ಮಾರ್ಗದರ್ಶನ ನೀಡಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಪಂಚಮನಂತೆ ಜಾಗೃತನಾಗಿ

ಅಸಮಾನತೆಯನ್ನು ನಾಶಪಡಿಸಿ ಸಮಾನತೆಯನ್ನು ರೂಪಿಸಬೇಕು. ಆಗ ಮಾತ್ರ ಪ್ರಬುದ್ಧ ಸಮಾಜ ನಿರ್ಮಾಣ ಸಾಧ್ಯ.

ಒಟ್ಟಾರೆ ಹೇಳುವುದಾದರೆ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ಓದು ಮತ್ತೆ ಮತ್ತೆ ಸಮಾಜವನ್ನು ಜಾಗೃತಗೊಳಿಸುತ್ತದೆ. ಸಮಕಾಲೀನ ಸಂದರ್ಭದಲ್ಲಿ ರೂಪಿಸಲು ಅಗತ್ಯವಾಗಿರುವ ಸಮಾನತೆ, ಸ್ವಾತಂತ್ರ್ಯ, ಸಹೋದರತೆ, ಜಾತಿವಿನಾಶ ಮುಂತಾದ ವಿಷಯಗಳನ್ನು ಸಿದ್ಧಲಿಂಗಯ್ಯನವರ ಕಾವ್ಯ ಸದಾ ಮಾತನಾಡುತ್ತದೆ.

ಅಧ್ಯಾಯ – ೫

ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ಮೇಲೆ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಪ್ರಭಾವ

ಮನುವಾದಿ ಪ್ರಣೀತ ವೈದಿಕ ನೆಲೆಯ ಹಿಂದೂ ಜಾತಿ ವ್ಯವಸ್ಥೆಯು ಭಾರತೀಯ ಸಮಾಜವನ್ನು ಆರುಸಾವಿರ ಜಾತಿಗಳನ್ನಾಗಿ ವಿಂಗಡಿಸಿ. ಈ ದೇಶದ ಬಹುಜನರನ್ನು ವಿದ್ಯೆ, ಆಸ್ತಿ ಮತ್ತು ಅಧಿಕಾರದಿಂದ ವಂಚಿಸಿತು. ಅನೇಕ ಮನುವಾದಿ ಸಾಹಿತ್ಯಗಳ ಪೈಕಿ ಋಗ್ವೇದದಲ್ಲಿನ ಪುರುಷ ಸೂಕ್ತವು ಬಹಳ ಮುಖ್ಯವಾದುದು. ಪುರುಷ ಸೂಕ್ತದ ೧೦ನೇ ವ್ಯಾಖ್ಯಾನದ ಪ್ರಕಾರ ದೇವರು ಮಾನವರನ್ನು ನಾಲ್ಕು ವರ್ಣಗಳಾಗಿ ಸೃಷ್ಟಿಸಿ ಅವರಿಗೆ ಕರ್ತವ್ಯಗಳನ್ನು ನಿಗಧಿಪಡಿಸಿದ್ದಾನೆ. ಬ್ರಾಹ್ಮಣನು ವಿದ್ಯೆಗಳಿಗೆ ಮತ್ತು ಪೌರೋಹಿತ್ಯ ಮಾಡಬೇಕು, ಕ್ಷತ್ರಿಯನು ರಾಜ್ಯಭಾರಮಾಡಬೇಕು. ವೈಶ್ಯನು ವ್ಯಾಪಾರ, ವ್ಯವಸಾಯ ಮಾಡಬೇಕು. ಶೂದ್ರನು ಮೇಲಿನ ಮೂರು ವರ್ಣಗಳ ಸೇವೆ ಮಾಡಬೇಕು ಎಂದು ನಿಗದಿಪಡಿಸಿ, ಇದು ದೈವ ನಿಯಮವಾಗಿರುವುದರಿಂದ ಇದನ್ನು ಯಾರು ವಿರೋಧಿಸಬಾರದೆಂದು ಮುಗ್ಧ ಜನತೆಯನ್ನು ನಂಬಿಸಿದರು. ಮೂಲ ನಿವಾಸಿ ಬಹುಜನರನ್ನು ಶೂದ್ರರೆಂದು ಪರಿಗಣಿಸಿ ಅವರನ್ನು ಗುಲಾಮಗಿರಿಗೆ ತಳ್ಳಿ ಇಡೀ ಸಮಾಜವನ್ನು ವಿನಾಶದ ಅಂಚಿಗೆ ಕೊಂಡೊಯ್ದರು. ಯಜ್ಞಯಾಗಗಳನ್ನು ನಡೆಸಿ ಪ್ರಾಣಿ ಸಂಕುಲವನ್ನು ನಾಶಮಾಡಿದರು. ಆರ್ಯರು ಭಯಂಕರ ಸುರಪಾನ, ಜೂಜು, ವ್ಯಭಿಚಾರ ಮುಂತಾದ ಅನೈತಿಕ ಅಕೃತ್ಯಗಳಲ್ಲಿ ತೊಡಗಿ ಸಮಾಜದಲ್ಲಿ ಅಶಾಂತಿ ಅಧರ್ಮಗಳನ್ನು ಸೃಷ್ಟಿ ಮಾಡಿದರು.

ಈ ಮನುವಾದಿ ಸಂಪ್ರದಾಯದ ವಿರುದ್ಧ ಬುದ್ಧ, ಬಸವ, ಫುಲೆ, ಪೆರಿಯಾರ್, ಅಂಬೇಡ್ಕರ್ ಮುಂತಾದ ದಾರ್ಶನಿಕರು ಹೋರಾಟ ಮಾಡಿದರು. ಅನಾದಿ ಕಾಲದಿಂದಲೂ ವಿದ್ಯೆ ಮತ್ತು ಜ್ಞಾನಾರ್ಜನೆಯನ್ನು ವೈದಿಕರಿಗೆ ಮಾತ್ರ ಮೀಸಲು ಎಂದು ಪರಿಗಣಿಸಿದ್ದ ಅನೀತಿಯುತ ಸಿದ್ಧಾಂತವು ಬ್ರಿಟೀಷರ ಆಗಮನದೊಂದಿಗೆ ಸಡಿಲಗೊಂಡಿತು. ಆಂಗ್ಲರ ಆಡಳಿತದಲ್ಲಿ ಲಾರ್ಡ್ ಮೆಕಾಲೆಯವರ ಪ್ರಸಿದ್ಧ ಶಿಕ್ಷಣ ನೀತಿಯ ಪ್ರಕಾರ ಶಿಕ್ಷಣ ಮತ್ತು ಆಡಳಿತ ಮಾಧ್ಯಮವಾಗಿ ಇಂಗ್ಲೀಷ್ ಭಾಷೆಯನ್ನು ಜಾರಿಗೊಳಿಸಲು ನಿರ್ಧರಿಸಲಾಯಿತು. ಅಲ್ಲದೆ ಜಾತಿ–ಧರ್ಮ–ಭೇದವಿಲ್ಲದೆ ಎಲ್ಲಾ ವರ್ಗಗಳಿಗೂ ಸಮಾನವಾಗಿ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಯಾಯಿತು. ಇದರ ಪರಿಣಾಮವಾಗಿ ಶಿಕ್ಷಣದಿಂದ

ವಂಚಿತವಾಗಿದ್ದ ಬಹುಸಂಖ್ಯಾತ ಸಮುದಾಯಗಳಲ್ಲಿ ಕಲಿಕೆಯ ಮೂಲಕ ಸ್ವಾತಂತ್ರ್ಯ ಸಮಾನತೆ ಮುಂತಾದ ಪ್ರಗತಿಪರ ಚಿಂತನೆ ಬೆಳೆಯತೊಡಗಿದವು.

ಪ್ರಗತಿಪರ ದಾರ್ಶನಿಕರ ಪ್ರಭಾವ ಮತ್ತು ಇಂಗ್ಲೀಷ್‌ರ ಶಿಕ್ಷಣದ ಪ್ರಭಾವವು ಹೊಸ ತಲೆಮಾರಿನ ಶೋಷಿತ ವಿದ್ಯಾವಂತರಲ್ಲಿ ಹೊಸ ಒಳನೋಟವನ್ನು ಮತ್ತು ಸಮಾಜವನ್ನು ಬೇರೆಯದೇ ರೀತಿಯಲ್ಲಿ ನೋಡುವ ಕ್ರಮವನ್ನು ಕಲಿಸಿತು. ಕರ್ನಾಟಕದಲ್ಲಿ ಶೋಷಿತ ನೆಲೆಯಿಂದ ಬಂದ ವಿದ್ಯಾವಂತರಾದ ದೇವನೂರು ಮಹಾದೇವ, ಇಂಥೂದಳ, ಎಲ್. ಹನುಮಂತಯ್ಯ, ಗೋವಿಂದಯ್ಯ, ಮುನಿವೆಂಕಟಪ್ಪ, ದೇವಯ್ಯ ಹರವೆ ಮುಂತಾದ ವ್ಯಕ್ತಿಗಳು ತಮ್ಮ ಸಾಹಿತ್ಯದಲ್ಲಿ ಬುದ್ಧ, ಬಸವ, ಫುಲೆ, ಪೆರಿಯಾರ್, ಅಂಬೇಡ್ಕರ್ ಮುಂತಾದ ಚಿಂತಕರ ಚಿಂತನೆಗಳನ್ನು ತಮ್ಮ ಸಾಹಿತ್ಯ ಮತ್ತು ಚಳುವಳಿಯಲ್ಲಿ ಬಳಸಿಕೊಂಡು ಸಮಾಜದಲ್ಲಿ ವೈಚಾರಿಕ ನೆಲೆಗಟ್ಟನ್ನು ರೂಪಿಸಲು ಪ್ರಯತ್ನಿಸಿದರು. ಸಿದ್ಧಲಿಂಗಯ್ಯನವರೂ ಕೂಡ ಮಹಾಮಾನವತಾವಾದಿಗಳ ಚಳುವಳಿ ಮತ್ತು ಬರಹಗಳಿಂದ ಪ್ರಭಾವಿತರಾಗಿದ್ದಾರೆ. ಅವರ ಬರಹಗಳಲ್ಲಿ ಈ ಮಹನೀಯರ ಪ್ರಖರ ಪ್ರಭಾವವನ್ನು ಗುರುತಿಸಬಹುದಾಗಿದೆ.

ಮಹಾತ್ಮ ಜ್ಯೋತಿಬಾ ಫುಲೆ

ಮಹಾತ್ಮ ಜ್ಯೋತಿಬಾ ಫುಲೆರವರು ಕ್ರಿ.ಶ. ೧೮೨೭ ಫೆಬ್ರವರಿ ೨೦ ರಂದು ಮಹಾರಾಷ್ಟ್ರದ ಸತಾರ ಜಿಲ್ಲೆಯ ಕುಟುಗುನ ಎಂಬ ಗ್ರಾಮದಲ್ಲಿ ಹಿಂದುಳಿದ ಮಾಲಿ ಜಾತಿಯ ಗೋವಿಂದರಾವ್ ಮತ್ತು ಚಿಮಣಾಬಾಯಿ ಇವರ ಮಗನಾಗಿ ಜನಿಸಿದರು.

ಜ್ಯೋತಿಬಾ ಫುಲೆಯವರು ೧೧ ವರ್ಷದವರಿದ್ದಾಗ ಗೋವಿಂದರಾವ್‌ರವರ ಅಂಗಡಿಯಲ್ಲಿ ಗುಮಾಸ್ತನಾಗಿದ್ದ ಬ್ರಾಹ್ಮಣನೊಬ್ಬನ ಪಿತೂರಿಯಿಂದಾಗಿ, ಜ್ಯೋತಿಬಾರವರನ್ನು ಶಾಲೆಯಿಂದ ಬಿಡಿಸಲಾಯಿತು. ೧೩ನೇ ವಯಸ್ಸಿನಲ್ಲಿ ೮ ವರ್ಷದ ಬಾಲಕಿ ಸಾವಿತ್ರಿ ಬಾಯಿಯೊಂದಿಗೆ ವಿವಾಹವಾಯಿತು. ಶಾಲೆ ಬಿಟ್ಟು ತಮ್ಮ ಕುಲಕಸುಬಿನಲ್ಲಿ ಮುಂದುವರೆದರೂ ಫುಲೆಯವರಿಗೆ ವಿದ್ಯೆಯಲ್ಲಿ ಆಸಕ್ತಿ ಕುಂದಲಿಲ್ಲ, ಇವರ ಆಸಕ್ತಿಯನ್ನು ಕಂಡು, ಗಫೂರ್ ಬೇಗ್ ಮುನ್ಷಿ ಎಂಬ ಉರ್ದು-ಪಾರ್ಸಿ ಟೀಚರ್ ಹಾಗೂ ಲೆಗಿಟ್ ಎಂಬ ಕ್ರೈಸ್ತ ಪಾದ್ರಿಯು ಗೋವಿಂದರಾವ್‌ರವರಿಗೆ ತಮ್ಮ ಮಗನನ್ನು ಮತ್ತೆ ಶಾಲೆಗೆ ಸೇರಿಸುವಂತೆ ಒತ್ತಾಯಿಸಿದರು. ೧೮೪೧ರಲ್ಲಿ ಜ್ಯೋತಿಬಾ ಫುಲೆಯವರು ಪುನಃ ಶಾಲೆಗೆ ಸೇರಿದರು ೧೮೪೭ರಲ್ಲಿ ಇಂಗ್ಲೀಷ್ ಶಿಕ್ಷಣವು ಪೂರ್ಣಗೊಂಡಿತು.

ಅಂದಿನ ದಿನಗಳಲ್ಲಿ ಬ್ರಾಹ್ಮಣರ ಚಿತಾವಣೆ ಮೇರೆಗೆ ನಡೆದ ಭಾರತೀಯರ ಬಂಡಾಯವು ತರುಣ ಜ್ಯೋತಿಬಾ ಮೇಲೆ ಆಳವಾದ ಪ್ರಭಾವ ಬೀರಿತು. ಆದಕಾರಣ ಬ್ರಿಟೀಷರನ್ನು ಭಾರತದಿಂದ ತೊಲಗಿಸುವುದು ತನ್ನ ಪವಿತ್ರ ಕರ್ತವ್ಯವೆಂದು ಅವರು ತಿಳಿದಿದ್ದರು. ಆದರೆ ೧೮೪೮ರಲ್ಲಿ ನಡೆದ ಘಟನೆಯು ಅವರ ಜೀವನದ ದಿಕ್ಕನ್ನೇ ಬದಲಿಸಿತು. ಒಬ್ಬ ಬ್ರಾಹ್ಮಣ ಮಿತ್ರನ ಮದುವೆಯ ಮೆರವಣಿಗೆಯಲ್ಲಿ ಭಾಗವಹಿಸಿದ ತಪ್ಪಿಗಾಗಿ ಕೆಲವು ಹಿರಿಯ ಬ್ರಾಹ್ಮಣರೆಲ್ಲರೂ ಸೇರಿ ಅವರನ್ನು ಅಪಮಾನಿಸಿ, ಮೆರವಣಿಗೆಯಿಂದ ಹೊರಕಳಿಸಿದರು. ಈ ಘಟನೆಯ ಪರಿಣಾಮವಾಗಿ ಶೂದ್ರಾತಿಶೂದ್ರರಿಗೆ ಶಿಕ್ಷಣ ನೀಡುವ ಚಳುವಳಿಗೆ ಫುಲೆಯವರು ನಾಂದಿ ಹಾಡಿದರು. ನಂತರ ಇದೇ ಫುಲೆಯವರು "ನಾವು ಬ್ರಿಟಿಷರಿಗೆ ಚಿರ ಋಣಿಗಳಾಗಿರಬೇಕು. ಅವರ ಅನುಕಂಪವನ್ನು ನಾವು ಮರೆಯುವಂತೆಯೇ ಇಲ್ಲ ಶತಮಾನಗಳ ಕಾಲದ ಬ್ರಾಹ್ಮಣವಾದಿ ಶೋಷಣೆಯಿಂದ ನಮ್ಮನ್ನು ಬಿಡುಗಡೆಗೊಳಿಸಿ, ನಮ್ಮ ಮಕ್ಕಳಿಗೆ ಭರವಸೆಯ ಭವಿಷ್ಯವನ್ನು ನೀಡಿದವರು ಬ್ರಿಟೀಷರು. ಈ ನಾಡಿಗೆ ಬ್ರಿಟೀಷರು ದೊರೆಗಳಾಗಿ ಬಾರದೆ ಇದ್ದಲ್ಲಿ, ಭಟ್ಟರು (ಬ್ರಾಹ್ಮಣರು) ನಮ್ಮನ್ನು ಸರ್ವನಾಶ ಮಾಡಿರುತ್ತಿದ್ದರು ಎಂದರು."

ಅವರು 'ಕನ್ಯಾ ಪಾಠಶಾಲೆ' ಆರಂಭಿಸುವ ಸಮಯದಲ್ಲಿ ಮಾಡಿದ ಭಾಷಣ ಅವರ ಸಾಮಾಜಿಕ ಕ್ರಾಂತಿಯ ಸ್ಪಷ್ಟ ದಿಕ್ಕನ್ನು ಸೂಚಿಸಿದೆ. ಅವರು ಹೇಳಿದ "ನಮ್ಮ ಜನಾಂಗದ ಮಹಾರ, ಮಾಂಗ, ಚಮ್ಮಾರ ಮುಂತಾದ ಜಾತಿಯ ಸೋದರ ಸೋದರಿಯರನ್ನು ದುಃಖದ ಕಗ್ಗತ್ತಲೆ ಆವರಿಸಿದೆ ಅವರನ್ನು ಸುಧಾರಿಸುವ ಸ್ಫೂರ್ತಿ ನನ್ನಲ್ಲಿ ಅಂಕುರಿತವಾಗಿದೆ. ಮೊತ್ತ ಮೊದಲು ಕನ್ಯಾ ಪಾಠಶಾಲೆಯನ್ನು ಪ್ರಾರಂಭ ಮಾಡುವ ಬಯಕೆ ನನ್ನಲ್ಲಿ ಉಂಟಾಯಿತು. ಗಂಭೀರವಾಗಿ ವಿಚಾರ ಮಾಡಿದಾಗ ನನಗೆ ಗಂಡು ಮಕ್ಕಳ ಶಾಲೆಗಿಂತ ಹೆಣ್ಣು ಮಕ್ಕಳ ಶಾಲೆ ಅಗತ್ಯವೆನಿಸಿತು. ಅಲ್ಲದೆ ಇದು ನನ್ನ ಜೀವನದ ಧ್ಯೇಯವೆಂದು ಬಗೆದು ಈ ದಾರಿಯಲ್ಲಿ ಮುಂದುವರೆಯುವೆ. ಇದಕ್ಕೆ ಹೆಣ್ಣು ಮಕ್ಕಳ ತಂದೆ ತಾಯಿಯರು ಸಹಕಾರ ನೀಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು" ಎಂದು ಕೇಳಿಕೊಂಡರು.

೧೮೪೮-೪೯ರಲ್ಲಿ ಫುಲೆಯವರು ಶೂದ್ರಾತಿಶೂದ್ರ ಹೆಣ್ಣುಮಕ್ಕಳ ಶಾಲೆಯನ್ನು ತೆರೆದರು. ಆದರೆ ಬ್ರಾಹ್ಮಣವಾದಿಗಳು ಗೋವಿಂದರಾವ್‌ರ ಮೇಲೆ ಒತ್ತಡ ಹೇರಿ ಫುಲೆಯವರನ್ನು ಪತ್ನಿ ಸಮೇತ ಮನೆಯಿಂದ ಹೊರಕಳಿಸಿದರು. ಶಾಲೆ ಬಂದ್ ಆಯಿತು. ಫುಲೆಯವರು ಜೀವನ ನಿರ್ವಹಣೆಗಾಗಿ ವ್ಯಾಪಾರಕ್ಕಿಳಿದರು. ಪುನಃ ಜುಲೈ ೩, ೧೮೫೧ರಂದು ಮತ್ತೊಂದು ಶಾಲೆಯನ್ನು ತೆರೆದರು. ಈ

ಶಾಲೆಯಲ್ಲಿ ಆರಂಭಕ್ಕೆ ೮ ಹುಡುಗಿಯರಿದ್ದು ಬಲು ಬೇಗ ಆ ಸಂಖ್ಯೆಯು ೪೮ಕ್ಕೇರಿತು. ಈ ಶಾಲೆಗೆ ಮಾತೆ ಸಾವಿತ್ರಿ ಬಾಯಿಯವರು ಮುಖ್ಯಶಿಕ್ಷಕಿಯಾದರು. ನಂತರ ೧೮೫೨ರೊಳಗೆ, ಅವರು ಮತ್ತೆರಡು ಶಾಲೆಗಳನ್ನು ತೆರೆದರು. ೧೮೮೨ರಲ್ಲಿ ಸರ್ ವಿಲಿಯಂ ಹಂಟರ್‌ರವರ ಅಧ್ಯಕ್ಷತೆಯಲ್ಲಿ ಭಾರತಕ್ಕೆ ಭೇಟಿ ನೀಡಿದ 'ಶಿಕ್ಷಣ ಆಯೋಗಕ್ಕೆ' ಮಹಾತ್ಮ ಫುಲೆಯವರು ಒಂದು ಮನವಿ ಸಲ್ಲಿಸಿದರು.

ಶಿಕ್ಷಣ ಇಲಾಖೆಯ ಆಡಳಿತಕ್ಕೆ ಸಂಬಂಧಿಸಿದಂತೆ ಫುಲೆಯವರ ವಿಚಾರಗಳು :

೧) ತನ್ನ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಖರ್ಚುವೆಚ್ಚಗಳನ್ನು ಮುನಿಸಿಪಾಲಿಟಿಗಳೇ ವಹಿಸಿಕೊಂಡರೂ, ಶಿಕ್ಷಣದ ಸಂಪೂರ್ಣ ಉಸ್ತುವಾರಿಯು ಪ್ರತ್ಯೇಕ ಶಿಕ್ಷಣ ಇಲಾಖೆಗೆ ಸೇರಿರಬೇಕು.

೨) ಮುನಿಸಿಪಾಲಿಟಿಗಳು ಖಾಸಗಿ ಇಂಗ್ಲಿಷ್ ಶಾಲೆಗಳಿಗೆ ಗ್ರ್ಯಾಂಟ್ ನೀಡಬೇಕು. ಈ ನಿಟ್ಟಿನಲ್ಲಿ ಕಾಯಿದೆಯಾಗಬೇಕು.

೩) ಶಿಕ್ಷಣಕ್ಕೆ ನಿಗಧಿಯಾದ ಹಣವು ದುರುಪಯೋಗವಾಗದಿರಲು ಕಲೆಕ್ಟರ್‌ರವರು ನೇತೃತ್ವದಲ್ಲಿ ಒಂದು ಬುದ್ಧಿಜೀವಿಗಳ ಮಂಡಳಿಯಿರಬೇಕು.

೪) ಪ್ರತಿ ಮೂರು ತಿಂಗಳಿಗೊಮ್ಮೆ ಉನ್ನತ ಅಧಿಕಾರಿಗಳಿಂದ ಶಾಲೆಗಳ ಇನ್ಸ್‌ಪೆಕ್ಷನ್ ನಡೆಯಬೇಕು.

೫) ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಬಹುಮಾನಗಳನ್ನು ನೀಡುವುದರ ಜೊತೆಗೆ ಶಿಕ್ಷಕರಿಗೂ ಉತ್ತೇಜನ ನೀಡಬೇಕು.

೬) ನಿರುದ್ಯೋಗಿ ಪದವೀಧರರು ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಬೇಕು.

೭) ಉನ್ನತ ಶಿಕ್ಷಣವನ್ನು ಅಗ್ಗಗೊಳಿಸಿ ಎಲ್ಲರ ಕೈಗೆಟುಕುವಂತೆ ಮಾಡಬೇಕು.

೮) ಮೆಟ್ರಿಕ್ಯುಲೇಷನ್ನಿನ ಪಠ್ಯಪುಸ್ತಕಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕು.

ಫುಲೆಯವರ ಸ್ಥಾಪಿಸಿದ ಸತ್ಯಶೋಧಕ ಸಮಾಜ ಚಳುವಳಿ

ಶೂದ್ರಾತಿಶೂದ್ರರಲ್ಲಿ ಶಿಕ್ಷಣವನ್ನು ಹರಡುವುದರ ಜೊತೆಗೆ, ಸಾಮಾಜಿಕ ಪರಿವರ್ತನೆಗಾಗಿ ಸತ್ಯಶೋಧಕ ಸಮಾಜ ಸಂಸ್ಥೆಯನ್ನು ೧೮೭೩ರಲ್ಲಿ ಸ್ಥಾಪಿಸಿದರು. ಇದರ ಉದ್ದೇಶಗಳು : ೧) ಚಾತುರ್ವರ್ಣ ವ್ಯವಸ್ಥೆಯನ್ನು ಧಿಕ್ಕರಿಸುವುದು. ೨) ಮೂರ್ತಿಪೂಜೆ ವಿರೋಧ ೩) ಬ್ರಾಹ್ಮಣ ಪೌರೋಹಿತ್ಯ ವಿಲ್ಲದ ಮದುವೆ ಮತ್ತಿತರ ಕಾರ್ಯಗಳು ೩) ಕುಲಗಳನ್ನು ಆಧರಿಸಿದ ಕಸುಬುಗಳನ್ನು

ಮಾಡುವುದಕ್ಕೆ ವಿರೋಧ ೫) ವಿಧವಾ ವಿವಾಹಕ್ಕೆ ಪ್ರೋತ್ಸಾಹ ಮತ್ತು ಬಾಲ್ಯ ವಿವಾಹಕ್ಕೆ ವಿರೋಧ ೬) ಸಾರ್ವಜನಿಕಶಿಕ್ಷಣ ೭) ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಸಮಾನ ಹಕ್ಕುಗಳು ೮) ಶೂದ್ರಾತಿಶೂದ್ರರು ಭಟ್‌ಜೀ-ಶೇಟ್‌ಜಿಗಳ ಸರ್ವಾಧಿಕಾರದ ವಿರುದ್ಧ ಹೋರಾಡಬೇಕು ಮತ್ತು ವೇದಗಳ ಪರಮಾಧಿಕಾರವನ್ನು ಧಿಕ್ಕರಿಸುವುದು.

ಕಾರ್ಯಕ್ರಮಗಳು :

೧. ಬ್ರಾಹ್ಮಣರಿಲ್ಲದ ವಿವಾಹ ನಡೆಸಿದ್ದು (೨೮-೯-೧೮೭೩)

೨. ಮನುಸ್ಮೃತಿ ಮತ್ತಿತರ ಧಾರ್ಮಿಕ ಗ್ರಂಥಗಳನ್ನು ವಿರೋಧಿಸಿದರು.

೩. ಮುಂಬೈ ಗಿರಣಿ ಕಾರ್ಯಕರ್ತರ ಮುಷ್ಕರವನ್ನು ಸಂಘಟಿಸಿ ಕಾರ್ಯಕರ್ತರು ತಮ್ಮ ಹಕ್ಕುಗಳಿಗೆ ಹೋರಾಡುವಂತೆ ಮಾಡಿದರು.

೪. ವಿಧವೆಯರಿಗೆ ಹಾಗೂ ಅವರಿಗೆ ಹುಟ್ಟುವ ಮಕ್ಕಳಿಗೆ ಆಶ್ರಯ ಕಲ್ಪಿಸಿದರು. ಒಬ್ಬ ಬ್ರಾಹ್ಮಣ ವಿಧವೆಗೆ ಹುಟ್ಟಿದ ಮಗುವನ್ನೇ ತಮ್ಮ ಮಗನಾಗಿ ದತ್ತುಸ್ವೀಕರಿಸಿದರು. ಆ ಮಗನೆ ಯಶವಂತ. ಫುಲೆಯವರು ಕಾಲವಾದ ನಂತರ ಇವರ ಚಳುವಳಿಯನ್ನು ಯಶವಂತ ಮುಂದುವರಿಸುತ್ತಾನೆ.

೫. ತಮ್ಮ ಮನೆಯಲ್ಲಿದ್ದ ಬಾವಿಯನ್ನು ಅಸ್ಪೃಶ್ಯರಿಗೆ ಬಳಸಲು ಬಿಟ್ಟರು.

೬. ೧೮೭೬ರಲ್ಲಿ ಪೂನಾ ನಗರದ ಮುನಿಸಿಪಾಲಿಟಿ ಸದಸ್ಯರಾಗಿ ನೇಮಕಗೊಂಡರು.

೭. ಕೃಷಿ ಕಾರ್ಮಿಕರಿಗಾಗಿ ಹಾಗೂ ಭೂ ರಹಿತ ರೈತರಿಗಾಗಿ ಹೋರಾಡಿದರು. ೨-೩-೧೮೮೮ರಂದು ರಾಣಿ ವಿಕ್ಟೋರಿಯಾಳ ಮೊಮ್ಮಗನಿಗೆ ಈ ರೈತರ ಬವಣೆಯನ್ನು ತಿಳಿಸಿ ಮನವಿ ಅರ್ಪಿಸಿದರು. ನೀರಾವರಿ ಸೌಲಭ್ಯ, ಬಡ್ಡಿ ರಹಿತ ಸಾಲ, ಮತ್ತು ಸಹಕಾರ ಸಂಘಗಳನ್ನು ಸ್ಥಾಪಿಸಲು ಕೋರಿದರು. ಹಾಗೂ ಭೂರಹಿತರಿಗೆ ಭೂಮಿ ನೀಡಲು ಸರ್ಕಾರವನ್ನು ಒತ್ತಾಯಿಸಿದರು.

೮. ಬ್ರಾಹ್ಮಣ ವಿಧವೆಯರಿಗೆ ತಲೆ ಬೋಳಿಸದಿರುವಂತೆ ಕ್ಷೌರಿಕರಿಗೆ ತಿಳುವಳಿಕೆ ನೀಡಿ, ಅವರಿಂದ ಆ ಕೆಲಸವನ್ನು ನಿಲ್ಲಿಸಿದರು. ಇದರಿಂದಾಗಿ ಸ್ವತಹ ಬ್ರಾಹ್ಮಣರೇ ಆ ಕೆಲಸವನ್ನು ಮಾಡುಬೇಕಾಯಿತು.

೯. ೧೮೭೭ರಲ್ಲಿ 'ದೀನಬಂಧು' ವಾರಪತ್ರಿಕೆಯನ್ನು ಆರಂಭಿಸಿದರು. ಇದು ಸತ್ಯಶೋಧಕ ಸಮಾಜ ಸಂಸ್ಥೆಯ ಮುಖವಾಣಿಯಾಗಿತ್ತು,

೧೦. ಕಾಂಗ್ರೆಸ್ ಪಾರ್ಟಿಯನ್ನು 'ಬ್ರಾಹ್ಮಣರ್ ಪಾರ್ಟಿ' ಎಂದು ಜರಿದರು. ಅಲ್ಲದೆ ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ ಮತ್ತು ಸಾರ್ವಜನಿಕ ಸಭಾಗಳನ್ನು ಬ್ರಾಹ್ಮಣರ ಸಂಘಟನೆಗಳೆಂದು ಜರಿದರು.

೧೧. ಜಸ್ಟೀಸ್ ರಾನಡೆಯವರು ಸತ್ಯಶೋಧಕ ಸಮಾಜ ಚಳವಳಿಗೆ ತಮ್ಮನ್ನೂ ಸೇರಿಸಿಕೊಳ್ಳುವಂತೆ ಮಹಾತ್ಮ ಫುಲೆಯವರಲ್ಲಿ ವಿನಂತಿಸಿದಾಗ 'ಸಮಾನತಾವಾದದ ಚಿಂತನೆಯಿಲ್ಲದ ಬದ್ಧಾಶಿ ಉದ್ದೇಶಗಳನ್ನು ಹೊಂದಿರುವ ಜನರಿಗೆ ಇಲ್ಲಿ ಅವಕಾಶವಿಲ್ಲ ನೀವು ಪ್ರಗತಿಪರರೇ ಆಗಿದ್ದಲ್ಲಿ ನಿಮ್ಮ ಬ್ರಾಹ್ಮಣ ಜನರ ನಡುವೆ ಕೆಲಸ ಮಾಡಿ, ಅವರನ್ನು ಪ್ರಗತಿಪರರನ್ನಾಗಿ ಮಾಡಿ' ಎಂದರು.

"ವಿದ್ಯೆಯಿಲ್ಲದೆ ಬುದ್ಧಿಯಿಲ್ಲ –
ಬುದ್ಧಿಯಿಲ್ಲದೆ ಕ್ರಿಯಾಶೀಲಯತೆ ಇಲ್ಲ
ಕ್ರಿಯಾಶೀಲತೆ ಇಲ್ಲದೆ ಅಭಿವೃದ್ಧಿ ಇಲ್ಲ
ಅಭಿವೃದ್ಧಿ ಇಲ್ಲದ ಜೀವನ ವ್ಯರ್ಥ"[೫] ಎಂದು ಫುಲೆ ಹೇಳಿದರು.

ಜ್ಯೋತಿಬಾ ಅವರ ಸಾಹಿತ್ಯ ಕೃತಿಗಳು :

೧) 'ತೃತೀಯ ರತ್ನ' ನಾಟಕ

೨) 'ಜಾತಿ ಭೇದ ವಿವೇಕ ಸಾರ' ಪ್ರಸ್ತಾವನೆ

೩) ಛತ್ರಪತಿ ಶಿವಾಜಿ ಅವರ ಪವ್ವಾಡಾ

೪) ಬ್ರಾಹ್ಮಣರ ಕುಯುಕ್ತಿ

೫) ದಾಸ್ಯ

೬) ಸತ್ಯ ಶೋಧಕ ಸಮಾಜ ರೀತ್ಯಾ ಮಂತ್ರಾದಿ ಸರ್ವ ಪೂಜಾವಿಧಿ

೭) ಸಾರ್ವಜನಿಕ ಸತ್ಯ ಧರ್ಮ

ನಿರಂತರ ಹೋರಾಟಗಳ ನಡುವೆ ಜೀವನ ನಡೆಸುತ್ತಿದ್ದ ಮಹಾತ್ಮಜ್ಯೋತಿಬಾರವರ ಆರೋಗ್ಯ ಹದಗೆಡುತ್ತದೆ. ತಮ್ಮ ಅನುಯಾಯಿಗಳನ್ನು ಕರೆದು 'ಸತ್ಯಶೋಧಕ ಸಮಾಜ'ವನ್ನು ಕ್ರಿಯಾಶೀಲರಾಗಿ ಮುನ್ನಡೆಸಬೇಕೆಂದು ಹೇಳಿದರು. ಶೂದ್ರಾತಿಶೂದ್ರರ ಉದ್ಧಾರಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ಮಹಾಚೇತನ ಫುಲೆರವರು ದಿನಾಂಕ ೨೮–೧೧–೧೮೯೦ರಂದು ಪ್ರಕೃತಿಯಲ್ಲಿ ಐಕ್ಯರಾಗುತ್ತಾರೆ. ಜ್ಯೋತಿಬಾ ಫುಲೆಯವರನ್ನು ಅಂಬೇಡ್ಕರ್‌ರವರು ನನ್ನ ಗುರುಗಳು ಎಂದು ಕರೆದಿದ್ದಾರೆ. ಫುಲೆಯವರ ತಾತ್ವಿಕ ಚಿಂತನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಅಂಬೇಡ್ಕರ್‌ರವರು,

---

[5] ಬಿ. ಗೋಪಾಲ್, ಮಹಾತ್ಮ ಜ್ಯೋತಿಬಾ ಫುಲೆ, ಸರ್ವಜನ ಪ್ರಕಾಶನ, ಪುಟ – ೨೦.

ಸಂವಿಧಾನದಲ್ಲಿ ಫುಲೆಯವರ ಶೈಕ್ಷಣಿಕ, ಸಾಮಾಜಿಕ ನಿಲುವುಗಳನ್ನು ಸೇರಿಸಿದ್ದಾರೆ. ಸಿದ್ಧಲಿಂಗಯ್ಯನವರು ಫುಲೆಯವರ ಚಿಂತನೆಗಳಿಂದ ಪ್ರಭಾವಿತರಾಗಿ ಚಳುವಳಿ ಮತ್ತು ಸಾಹಿತ್ಯವನ್ನು ರೂಪಿಸಿದರು.

ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕದ ಮೇಲೆ ಜ್ಯೋತಿಬಾ ಫುಲೆ ಚಿಂತನೆಗಳ ಪ್ರಭಾವ

ಸಿದ್ಧಲಿಂಗಯ್ಯನವರು ತಮ್ಮ ಸಾಹಿತ್ಯದಲ್ಲಿ ಜ್ಯೋತಿಬಾ ಫುಲೆರವರ ಚಿಂತನೆಗಳನ್ನು ಅಳವಡಿಸಿಕೊಂಡಿದ್ದಾರೆ. ಅವರೇ ಹೇಳುವಂತೆ ಸಿದ್ಧಲಿಂಗಯ್ಯನವರು ಫುಲೆಯವರ ಮನೆ ಮತ್ತು ಅವರು ಕೆಲಸಮಾಡುತ್ತಿದ್ದ ಪ್ರದೇಶಗಳಿಗೆ ಭೇಟಿ ನೀಡಿ ಸ್ವ-ಅನುಭವ ಪಡೆದಿದ್ದಾರೆ. ಸಿದ್ಧಲಿಂಗಯ್ಯನವರು ಚಿಕ್ಕ ವಯಸ್ಸಿನಲ್ಲಿಯೆ ಫುಲೆ ಚಿಂತನೆಯ ಪ್ರಭಾವಕ್ಕೆ ಒಳಗಾದವರು. ಫುಲೆಯವರ ಬ್ರಾಹ್ಮಣೇತರ ಚಳುವಳಿ, ಶೋಷಿತರಿಗೆ ವಿದ್ಯಾಭ್ಯಾಸದಂತಹ ಗಂಭೀರವಾದ ಚಿಂತನೆಗಳು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ತಾನಾಗಿಯೇ ಮೂಡಿದೆ.

ಸಿದ್ಧಲಿಂಗಯ್ಯನವರ ಸಾಹಿತ್ಯದ ಮೇಲೆ ಅಲ್ಲಲ್ಲಿ ಫುಲೆ ಚಿಂತನೆಗಳು ಪ್ರಭಾವ ಬೀರಿವೆ. ಆದರೆ 'ಏಕಲವ್ಯ' ನಾಟಕದ ಮೇಲೆ ಅವರ ಚಿಂತನೆಗಳು ಗಂಭೀರವಾಗಿ ಪ್ರಭಾವ ಬೀರಿವೆ. ಫುಲೆಯವರು ಪ್ರಥಮಬಾರಿಗೆ ಶೋಷಿತರಿಗೆ ವಿದ್ಯೆಯ ಅರಿವನ್ನು ಮೂಡಿಸಿದರು. ವಿದ್ಯೆ ಇಲ್ಲದ ವ್ಯಕ್ತಿ ಗುಲಾಮನಾಗುತ್ತಾನೆ ಎಂಬುದನ್ನು ಅರಿತ ಫುಲೆ ಶೋಷಿತರಿಗೆ ಶಾಲೆಗಳನ್ನು ತೆರೆದರು. ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕದಲ್ಲಿ ಏಕಲವ್ಯ ವಿದ್ಯೆ ಕಲಿಯುವ ಹಂಬಲದಿಂದ ದ್ರೋಣ ಚಾರ್ಯರಲ್ಲಿಗೆ ತೆರಳುತ್ತಾನೆ.

(ದ್ರೋಣ ಚಾರ್ಯರನ್ನು ಕುರಿತು)

ಏಕಲವ್ಯ : ತಮ್ಮ ಕೀರ್ತಿಯನ್ನು ಕೇಳಿ ತಮ್ಮಿಂದ ಬಿಲ್ಲುವಿದ್ಯೆ ಕಲಿಯಲು ಕಾತರದಿಂದ ಇಲ್ಲಿಗೆ ಬಂದಿರುವ ಕಾಡಿನ ಏಕಲವ್ಯ, ಕರುಣಿಸಿ ಗುರುದೇವ.

ಏಕಲವ್ಯನಿಗೆ ವಿದ್ಯೆ ಕಲಿಯುವ ಆಸಕ್ತಿ ಇದೆ. ಕಾಡನ್ನು ಕಾಪಾಡುವ, ಕಾಡಿನ ಜೀವ ಸಂಕುಲಕ್ಕೆ ಆಸರೆಯಾಗುವ ಬಯಕೆ ಇದೆ. ವಿದ್ಯೆ ಕಲಿತು ಶತಶತಮಾನಗಳ ಕಾಲದ ಗುಲಾಮಗಿರಿಗೆ ಮುಕ್ತಿ ಹೇಳುವ ಹೆಬ್ಬಯಕೆ ಇದೆ. ಆದರೆ ಅರ್ಜುನ, ಭೀಮ ಏಕಲವ್ಯನನ್ನು ಜಾತಿ ನಿಂದನೆ ಮಾಡುತ್ತಾರೆ. ವಿದ್ಯೆ ಕಲಿಯಲು ನೀನು ಅನರ್ಹನೆಂದು ಹೇಳುತ್ತಾರೆ.

ಏಕಲವ್ಯ : ಕಲಿಯಲು ಆಸೆಯೇ ಮೂಲ ಹುಟ್ಟಲ್ಲ ಅಣ್ಣಂದಿರೆ.

ದ್ರೋಣ : ಏಕಲವ್ಯ ನಿನ್ನ ಆಸಕ್ತಿ, ಶ್ರದ್ಧೆ ಮೆಚ್ಚತಕ್ಕದ್ದ, ಆದರೆ ಶಾಸ್ತ್ರ ಅಡ್ಡವಿದೆ.

ಈ ಮೇಲಿನ ದ್ರೋಣರ ಮಾತುಗಳು ಮನುಧರ್ಮಶಾಸ್ತ್ರವು ಶತಶತಮಾನಗಳ ಕಾಲದಿಂದಲೂ ಕೂಡ ಹೇಗೆ ಶೋಷಿತರನ್ನು ವಿದ್ಯೆಯಿಂದ ವಂಚಿಸುತ್ತಾ ಬಂದಿದೆ ಎಂಬುದನ್ನೂ ತಿಳಿಸುತ್ತದೆ. ಜ್ಯೋತಿಬಾ ಫುಲೆಯವರು ವಿದ್ಯೆಯನ್ನು ಶೋಷಣೆ ಮುಕ್ತಿಯ ಮಾರ್ಗವೆಂದು ತಿಳಿದಿದ್ದರು. 'ಶಿಕ್ಷಣವೇ ಬದುಕಿನ ಮಾರ್ಗ ಶಿಕ್ಷಣದಿಂದಲೇ ಮನುಷ್ಯನ ಮೂರ್ಖತನಕ್ಕೆ ಶಿಕ್ಷಣವೇ ಮದ್ದು'[6] ಎಂದು ಹೇಳಿದರು. 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ವಾಕ್ಯವನ್ನು ತನ್ನ ಜೀವನದಲ್ಲಿ ದಿವ್ಯ ಮಂತ್ರವನ್ನಾಗಿಸಿಕೊಂಡ ಫುಲೆಯವರು ಹೆಣ್ಣು ಮಕ್ಕಳಿಗೆ ಶಾಲೆಗಳನ್ನು ತೆರೆದರು. ಹೆಣ್ಣು ಮಗಳೊಬ್ಬಳು ವಿದ್ಯೆ ಕಲಿತರೇ ತನ್ನ ಇಡೀ ಕುಟುಂಬವೇ ವಿದ್ಯೆ ಕಲಿತು ಜಾಗೃತವಾಗುತ್ತದೆ ಎಂಬುವುದು ಫುಲೆಯವರ ನಂಬಿಕೆಯಾಗಿತ್ತು. ಅದೇ ರೀತಿಯಾಗಿ ಸಿದ್ಧಲಿಂಗಯ್ಯನವರ ಏಕಲವ್ಯನ ಆಲೋಚನೆ ಅದಕ್ಕೆ ಪೂರಕವಾಗಿದೆ. ಏಕಲವ್ಯ ವಿದ್ಯೆ ಕಲಿಯುತ್ತಿರುವುದು ಕಾಡಿನ ಪ್ರಾಣಿ, ಪಕ್ಷಿ, ನೆಲ, ಜಲ ಕಾಪಾಡಲು ಎಂಬುವುದು ಪ್ರಸ್ತುತವಾಗುತ್ತದೆ.

ಏಕಲವ್ಯ ಯಾವ ಸಂದರ್ಭದಲ್ಲಿಯೂ ಕೂಡ ವಿದ್ಯೆ ಕಲಿಯುವ ಹೆಜ್ಜೆಯಿಂದ ಹಿಂದೆ ಸರಿಯುವುದೇ ಇಲ್ಲ. ಜಾತಿ, ಧರ್ಮ, ಭಾಷೆ, ಪ್ರಾದೇಶಿಕವಾಗಿಯೂ ಅವಹೇಳನಕ್ಕೆ ಒಳಗಾದ ಏಕಲವ್ಯ ಕೊನೆಗೂ ವಿದ್ಯೆ ಕಲಿತು ಸಾಧಕನಾಗುತ್ತಾನೆ.

ಶೋಷಿತರು ಬಡತನದಿಂದ ನರಳುತ್ತಿದ್ದಾರೆ. ಈ ಬಡತನಕ್ಕೆ ಕಾರಣ ಜಾತಿ ವ್ಯವಸ್ಥೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂದಿನ ಯುವ ಜನತೆ ಬಡತನದ ಸಂದರ್ಭಕ್ಕೆ ಮತ್ತು ಬೇರೆ ಬೇರೆ ಕಾರಣಗಳಿಗೆ ಒಳಗಾಗಿ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿಕೊಳ್ಳುವುದಿಲ್ಲ. ಆದರೆ ಏಕಲವ್ಯ ದ್ರೋಣರಿಂದ ಬಲಗೈ ಹೆಬ್ಬೆರಳು ಕಳೆದುಕೊಂಡು ತನ್ನ ಸ್ವಾಭಿಮಾನದಿಂದ ಎಡಗೈ ಹೆಬ್ಬೆರಳಿನಲ್ಲಿ ವಿದ್ಯೆ ಕಲಿಯುತ್ತಾನೆ. ಯಾವುದೇ ನಿಂದನೆಗೆ ಒಳಗಾದರೂ ದೃಢ ಮನಸ್ಸಿನಿಂದ ತನ್ನ ಗುರಿಯನ್ನು ತಲುಪುತ್ತಾನೆ. ಈ ಏಕಲವ್ಯನ ಆದರ್ಶ ಇಂದಿನ ಯುವ ಜನತೆಗೆ ಮಾರ್ಗದರ್ಶನವಾಗಲಿದೆ.

---

[6] ಬಿ.ಗೋಪಾಲ್ ; ಮಹಾತ್ಮ ಜ್ಯೋತಿಬಾ ಫುಲೆ : ಸರ್ವಜನ ಪ್ರಕಾಶನ, ಪುಟ-೪೫.

ಪ್ರಜ್ಞಾವಂತ ವಿದ್ಯಾವಂತರಿಗೆ ಈ ಸಮಾಜದ ಕೊಳಕು ವ್ಯವಸ್ಥೆ ಸ್ಪಷ್ಟವಾಗಿಕಾಣಿಸುತ್ತದೆ. ತಮ್ಮ ನಿಲುವುಗಳನ್ನು ಹೇಗೆ ಸಾಕಾರಗೊಳಿಸಿಕೊಳ್ಳಬೇಕು ಎಂದು ತಿಳಿವಳಿಕೆ ಬರುತ್ತದೆ. ದೈಹಿಕ ಮತ್ತು ಮಾನಸಿಕ ಗುಲಾಮಗಿರಿಯನ್ನು ಹೋಗಲಾಡಿಸಿಕೊಳ್ಳುವುದು ಹೇಗೆ ಎಂಬುವುದು ವಿದ್ಯಾವಂತರಿಗೆ ಏಕಲವ್ಯ ನಾಟಕದಿಂದ ತಿಳಿಯುತ್ತದೆ. ವಿದ್ಯಾವಂತನಾದ ಏಕಲವ್ಯ ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ತೆಗೆದುಕೊಳ್ಳುವ ನಿರ್ಧಾರ ಪ್ರಜಾಪ್ರಭುತ್ವದ ಪರವಾಗಿದೆ. ಜ್ಯೋತಿಬಾ ಫುಲೆಯವರ ಚಿಂತನೆ ಸಾಕಾರಗೊಳ್ಳಬೇಕಾದರೆ ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕದ ಮರು ಓದು ಅತ್ಯಂತ ಅವಶ್ಯಕವಾಗಿದೆ. 'ಏಕಲವ್ಯ' ನಾಟಕವಲ್ಲದೆ ಅವರ ಕವಿತೆಗಳಲ್ಲೂ ಕೂಡ ಅಲ್ಲಲ್ಲಿ ಫುಲೆ ಚಿಂತನೆಗಳು ಕಂಡುಬರುತ್ತವೆ.

ಪೆರಿಯಾರ್ ರಾಮಸ್ವಾಮಿ ನಾಯ್ಕರ್

ವಿದ್ಯಾಭ್ಯಾಸ

ಬಾಲಕ ರಾಮಸ್ವಾಮಿ ಶಾಲೆಯಲ್ಲಿ ಉತ್ತಮ ವಿದ್ಯಾರ್ಥಿ. ಬಹಳ ಒರಟುಬುದ್ಧಿ. ಮನೆಯವರಿಗೆ ಪ್ರಶ್ನೆಗಳನ್ನು ಕೇಳಿಕೇಳಿ ಹುಚ್ಚು ಹಿಡಿಸುತ್ತಿದ್ದ ಇವರ ಅಸ್ಪೃಶ್ಯರ ಸಂಪರ್ಕ ಉಪಾಧ್ಯಾಯರಿಗೆ ಹಿಡಿಸದೆ ಛೆಡಿಯೇಟು ಕೊಡುವುದು ನಿತ್ಯಕರ್ಮವಾಗಿತ್ತು. ಅಪ್ಪ ಅಮ್ಮನಿಗೆ ಹೇಳುವುದು ಶಿಕ್ಷಕರಿಗೆ ಖಾಯಂ ಆಗಿತ್ತು. ಮನೆಯಲ್ಲಿ ರಾಮಸ್ವಾಮಿಗೆ ಚಿತ್ರ ಹಿಂಸೆ ತಪ್ಪಲಿಲ್ಲ, ಕೊನೆಗೆ ತಮ್ಮ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕೆ ಅಡ್ಡ ಬರುವ ಶಾಲೆಯಲ್ಲಿ ತಾನು ಕಲಿಯುವುದು ಇಷ್ಟವಿರಲಿಲ್ಲ. ಅವರು ಕೇಳುವ ಪ್ರಶ್ನೆಗಳಿಗೆ ಶಿಕ್ಷಕರು ಉತ್ತರ ಕೊಡಲಾಗದೆ ಕಕ್ಕಾಬಿಕ್ಕಿಯಾಗುತ್ತಿದ್ದರು. ಕೊನೆಗೆ ಅವನ ಅದಮ್ಯ ಶಕ್ತಿಯನ್ನಡಗಿಸುವ ತಾಕತ್ತು ತನ್ನ ಬೆತ್ತಕ್ಕೂ ಇಲ್ಲವೆಂದು ಅವರು ಬಹು ಬೇಗನೆ ಮನಗಂಡರು. ರಾಮಸ್ವಾಮಿಗಾದರೂ ಅಷ್ಟೇ, ತಾನಲ್ಲಿಯೇ ಮುಂದುವರಿದಿದ್ದಾದರೆ ತನ್ನ ಬದುಕು ವ್ಯರ್ಥವಾಗುತ್ತದೆಂದು, ವಿಶಾಲ ಪ್ರಪಂಚವೇ ತನ್ನ ಶಾಲೆಯೆಂದೂ, ಸಮಾಜವೇ ತನ್ನ ಪ್ರಯೋಗಶಾಲೆಯೆಂದೂ ತಿಳಿದು ನಾಲ್ಕನೆಯ ತರಗತಿಗೆ ತನ್ನ ವ್ಯಾಸಂಗವನ್ನು ಮುಕ್ತಾಯಗೊಳಿಸಿದರು.

ತಂದೆಯ ವೃತ್ತಿಗೆ ರಾಮಸ್ವಾಮಿ ನಾಯ್ಕರ್ :

ತಂದೆಯ ವ್ಯಾಪಾರ ವೃತ್ತಿಗೆ ಬಹಳ ಬೇಗ ಹೊಂದಿಕೊಂಡ ರಾಮಸ್ವಾಮಿ ಅಲ್ಪಕಾಲದಲ್ಲಿಯೇ ವ್ಯಾಪಾರದಲ್ಲಿ ನಿಸ್ಸೀಮನಾದನು. ಅವರ ಚಾಕಚಕ್ಯತೆ, ಕ್ರಿಯಾಶೀಲತೆ, ಸಾಮರ್ಥ್ಯವನ್ನು ಸುತ್ತಮುತ್ತಲಿನವರು ಪ್ರಶಂಸಿಸಲಾರಂಭಿಸಿದರು. ಎಂತಹ ಸಣ್ಣಕೆಲಸವನ್ನೂ ಹೀನವಾಗಿ ಭಾವಿಸದೇ ಮಾಡುತ್ತಿದ್ದನು. ಅವರ ವ್ಯಾಪಾರ ಏಕರೀತಿಯಾಗಿ ಇರುತ್ತಿರಲಿಲ್ಲ. ವಿರಾಮ ಸಿಕ್ಕಾಗಲೆಲ್ಲಾ ಅನೇಕ ಧರ್ಮಗಳ ಹಾಗೂ ಪೌರಾಣಿಕ ಗ್ರಂಥಗಳನ್ನು ಓದುತ್ತಿದ್ದರು. ಅವರ ಮನೆ ಮಾತು ಕನ್ನಡ ಅವರ ವ್ಯವಹಾರ ಮತ್ತು ಜ್ಞಾನದ ಭಾಷೆ ತಮಿಳು, ಕಾಲಕ್ರಮೇಣ ಅದೇ ಅವರ ಮಾತೃ ಭಾಷೆಯೆನ್ನುವ ಮಟ್ಟಕ್ಕೆ ತಲುಪಿತು. ಮನೆಗೆ ಬರುತ್ತಿದ್ದ ಪಂಡಿತರೊಡನೆ ಚರ್ಚಿಸುವಾಗ ಪುರಾಣಗಳ ಲೋಪಗಳನ್ನು ವಿರೋಧಾಭಾಸಗಳನ್ನು ಮೂಢನಂಬಿಕೆಗಳನ್ನು ನಿರ್ಭೀತಿಯಿಂದ ನಿಂದಿಸುತ್ತಿದ್ದರು.

ರಾಮಸ್ವಾಮಿ ನಾಯ್ಕರರ ಭಾರತ ಪ್ರವಾಸ

ಮನೆಯಿಂದ ಹೊರಬಿದ್ದ ರಾಮಸ್ವಾಮಿ ನಾಯ್ಕರರು ಎತ್ತಿನಗಾಡಿಯಲ್ಲಿ, ರೈಲು ಬಂಡಿಯಲ್ಲಿ ಕೆಲವೊಮ್ಮೆ ಕಾಲು ನಡಿಗೆಯಲ್ಲಿ ಊರೂರು ಸುತ್ತಿ ಕಲ್ಕತ್ತೆಯ ಮೂಲಕ ವಾರಣಾಸಿ ತಲುಪಿದರು. ಸಾಧು ಸಂತರೊಡನೆ ಚರ್ಚೆ, ತರ್ಕ ಅವರೊಡನೆ ನಿಲ್ಲದ ಪ್ರಶ್ನೆಗಳನ್ನು ಹಾಕುತ್ತಾ ಗಂಗಾ ನದಿಯ ದಡದ ಮೇಲೆ ಕುಳಿತು ಹೆಣದ ರಾಶಿಗಳನ್ನು ನೋಡಿದರು. ಚಿತೆಗಳನ್ನು ಕಂಡರು. ಪಿತೃಗಳನ್ನು ಸ್ವರ್ಗಕ್ಕೆ ಕಳುಹಿಸುತ್ತೇವೆಂದು ಹೇಳಿ ಹಣ ವಸೂಲಿ ಮಾಡುತ್ತಿದ್ದ ಭಂಡ ಬ್ರಾಹ್ಮಣರನ್ನು ಕಂಡು ದಿಗ್ಭ್ರಮೆಗೊಂಡರು. ಗಂಗಾನದಿಯ ಮೈಲಿಗೆಯನ್ನು ಕಂಡು ಹೇಸಿದರು. ವಿಧವೆಯರ ಕೇಶ ಮುಂಡನದ ಸಮಯದಲ್ಲಿ ನಡೆಯುತ್ತಿದ್ದ ಅನಾಚಾರಗಳನ್ನು ಕಂಡು ಕೆಂಡಾಮಂಡಲವಾದರು. ಕೊನೆಗೆ ಹಿಂದು ಧರ್ಮದಲ್ಲಿನ ದೋಷಗಳನ್ನು ಕಂಡು ಪರೀಕ್ಷೆಗೆ, ಪ್ರಯೋಗಕ್ಕೆ ತರ್ಕಕ್ಕೆ ನಿಲುಕದ್ದೆಲ್ಲ ಅಸತ್ಯವೆಂದು, ವಂಚನೆಯ ಜಾಲವೆಂದು ಇತ್ಯರ್ಥ ಮಾಡಿಕೊಂಡು ಮತ್ತೆ ಊರಿಗೆ ಹೊಸ ರಾಮಸ್ವಾಮಿಯಾಗಿ ಕಾಲಿಟ್ಟರು.

ಸಾಮಾಜಿಕ ಚಳುವಳಿಯತ್ತ ರಾಮಸ್ವಾಮಿ ನಾಯ್ಕರ್

ತಮ್ಮ ಆಪ್ತ ಬಂಧುವೊಬ್ಬರು ಎಳೆ ವಿಧವೆಯೆಂದು ತಿಳಿದು ಅವಳಿಗೆ ಪುನರ್ ವಿವಾಹ ಮಾಡಿ ಅವಳ ಬಾಳಿನಲ್ಲಿ ಧ್ರುವ ತಾರೆಯಾದರು. ಸಮಾಜದ ಗೊಡ್ಡು ಬೆದರಿಕೆಗಳಿಗೆ ಹೆದರದೆ

ಮುನ್ನಡೆಯುವುದೇ ತನ್ನ ಗುರಿ ಎಂದು ತಿಳಿದು ತಮ್ಮ ಸಾಮಾಜಿಕ ಚಳುವಳಿಯನ್ನು ತೀವ್ರ ವೇಗದೊಂದಿಗೆ ಆರಂಭಿಸಿದರು. ಬರುಬರುತ್ತಾ ತಮಿಳುನಾಡಿನಾದ್ಯಂತ ಜನಪ್ರಿಯ ವ್ಯಕ್ತಿಯಾಗಿ ರೂಪುಗೊಂಡರು. ಅವರು ತೋರುತ್ತಿದ್ದ ಸೂಕ್ಷ್ಮಮತಿ, ಸಾಹಸಗಳಿಂದಾಗಿ, ಕ್ರಿಯಾಶೀಲತೆ, ಕರ್ತವ್ಯಪರತೆ, ಹಸ್ತಶುದ್ಧಿಯಿಂದಾಗಿ ಜನಾನುರಾಗಿಯಾಗಿ ದಿನದಿನಕ್ಕೆ ಪ್ರಬಲ ಶಕ್ತಿಯಾಗಿ ಬೆಳೆದರು.

ರಾಮಸ್ವಾಮಿ ನಾಯ್ಕರರ ಸಾಮಾಜಿಕ ಚಳುವಳಿಗಳ ಮಹಾನ್ ಘಟನೆಗಳು

ಸಿಂಹದಂತೆ ಘರ್ಜಿಸುವ ಇವರ ಭಾಷಣವನ್ನು ಕೇಳಲಿಕ್ಕಾಗಿ ಲಕ್ಷಾಂತರ ಜನರು ಸೇರುತ್ತಿದ್ದರು. ಪಾನವಿರೋಧ ಚಳುವಳಿಯ ಸಾರಥ್ಯವನ್ನು ವಹಿಸಿಕೊಂಡಾಗಲಂತೂ ಅವರು ಮಾಡುತ್ತಿದ್ದ ಭಾಷಣವನ್ನು ಕೇಳಲು ಜನರೂ ಸಾಗರೋಪಾದಿಯಲ್ಲಿ ಸೇರುತ್ತಿದ್ದರು. ಪಾನವಿರೋಧ ಚಳುವಳಿ ಪ್ರಾರಂಭವಾದಾಗ ಅವರ ಬಳಿ ಒಂದು ಸಾವಿರ ತೆಂಗಿನ ಮರಗಳು ಇದ್ದವು. ಅವುಗಳಿಂದ ಕೈತುಂಬಾ ವರಮಾನ ಬರುತ್ತಿತ್ತು. ಹೆಂಡ ಇಳಿಸಲಿಕ್ಕಾಗಿ ಅವನ್ನು ಗುತ್ತಿಗೆ ಕೊಟ್ಟಾಗಲಂತೂ ಅವರ ಆದಾಯ ಬಹು ಹೆಚ್ಚಾಗಿತ್ತು. ಆದರೆ ಸಮಾಜಕ್ಕಾಗಿ ಅವರು ಈ ರೀತಿಯ ಆದಾಯವನ್ನು ಪಡೆದು ಸ್ವಸ್ಥ ಸಮಾಜಕ್ಕೆ ಅಮಲು ತರುವುದು ತನ್ನ ವಿಚಾರಧಾರೆಗೆ ವಿರುದ್ಧ ಎಂದು ತಿಳಿದ ತಕ್ಷಣ ಅದರಿಂದ ಹೊರಬರಲು ನಿರ್ಧರಿಸಿದರು. ಹೆಂಡ ಕುಡಿಸುವುದು ಸಂವಿಧಾನ ಬಾಹಿರ ಮತ್ತು ಅನೈತಿಕತೆ ಎಂದು ತಮ್ಮ ತಂದೆ ಮಕ್ಕಳಂತೆ ಸಾಕಿದ ಸಾವಿರ ತೆಂಗಿನ ಮರಗಳನ್ನು ನಿರ್ದಯೆಯಿಂದ ಕಡಿಸಿ ಹಾಕಿದರು. ವ್ಯಾಪಾರದ ಜೊತೆಗೆ ಲೇವಾದೇವಿ ನಡೆಸುತ್ತಿದ್ದ ತಮ್ಮ ಕುಟುಂಬದಲ್ಲಿ ರಾಮಸ್ವಾಮಿಯವರು ಅಗ್ನಿ ಪರೀಕ್ಷೆಗೆ ಒಂದು ಸಲ ಗುರಿಯಾದರು. ಅವರ ಹತ್ತಿರ ಗಡುವು ಮೀರುತ್ತಿದ್ದ ೫೦,೦೦೦ ಬೆಲೆಯ ಪತ್ರಗಳನ್ನು ಕೋರ್ಟಿಗೆ ಹಾಜರು ಪಡಿಸಬೇಕಾಗಿ ಬಂತು. ಆದರೆ ರಾಮಸ್ವಾಮಿಯವರು ಅದಕ್ಕೆ ಸೊಪ್ಪು ಹಾಕದೇ ಸಾಲಗಾರರನ್ನು ಕೋರ್ಟಿಗೆ ಎಳೆದು ಹಿಂಸೆಗೆ ಗುರಿಮಾಡುವುದು ತಮ್ಮಂಥವರಿಗೆ ತಕ್ಕುದಲ್ಲವೆಂದು ತಿಳಿದು ಆ ಪತ್ರಗಳನ್ನು ಹರಿದು ಬೆಂಕಿಗೆ ಬಿಸಾಕಿದರು.

ಸ್ವಾಭಿಮಾನ ಆಂದೋಲನದ ಉದಯ ೧೯೨೫ :

ಕಾಂಗ್ರೆಸ್ ತ್ಯಜಿಸಿದ ಕೂಡಲೆ ಅವರಲ್ಲಿ ಸುಪ್ತವಾಗಿದ್ದ ಆಕಾಂಕ್ಷೆಗಳು, ಗುರಿಗಳು ಹೆಡೆಯೆತ್ತಿದವು. ರಾಜಕೀಯ ಸಾಮಾಜಿಕ ಆರ್ಥಿಕ ಹಾಗೂ ಮತೀಯ ಕ್ಷೇತ್ರಗಳಲ್ಲಿ ಬ್ರಾಹ್ಮಣರ ಪ್ರಭಾವವನ್ನು ತಗ್ಗಿಸುವುದು ಅವರ ಆಂದೋಲನದ ಗುರಿಯಾಗಿತ್ತು. ಪ್ರಚಾರದ ಮೂಲಕ ಸಾಮಾನ್ಯ ಜನತೆಯ ಅಜ್ಞಾನ ಮೌಢ್ಯಗಳನ್ನು ಹೊಡೆದು ಹಾಕುವುದನ್ನು ಗುರಿಯಾಗಿಟ್ಟುಕೊಂಡು ೧೯೨೫ರಲ್ಲಿ

ಸ್ವಾಭಿಮಾನ ಆಂದೋಲನವನ್ನು ಪ್ರಾರಂಭಿಸಿದರು. ೧೯೨೯ರಲ್ಲಿ ಪ್ರಥಮ ಅಧಿವೇಶನ ಚಂಗಲ್ ಪೇಟೆಯಲ್ಲಿ ಜರುಗಿತ್ತು. ಆಗ ನಾಯ್ಕರರು "ಆರ್ಯರು ದ್ರಾವಿಡರನ್ನು ನಿರ್ನೆಲೆಗೊಳಿಸಿ, ಚದುರಿಸಿ ಅವರ ಹುಟ್ಟಡಗಿಸಲು ಬಂದ ಪರದೇಸಿಗಳೆಂದು ಹೇಳಿ, ದ್ರಾವಿಡರು ಎಂದು ಸ್ವಾಭಿಮಾನವನ್ನು ಮರೆತರೋ ಅಂದೇ ಅವರು ಸ್ವಂತಿಕೆಯನ್ನು, ಸ್ವಾತಂತ್ರ್ಯವನ್ನು ಕಳೆದುಕೊಂಡರು. ಅದನ್ನು ಮತ್ತೆ ಪಡೆಯಬೇಕೆಂಬುದೇ ಈ ಅಧಿವೇಶನದ ಗುರಿ ಎಂದು ಗುಡುಗಿದರು. ಬ್ರಾಹ್ಮಣರ ಆಚಾರ, ವಿಚಾರಗಳು, ಗೊಡ್ಡು ಸಂಪ್ರದಾಯಗಳು, ಅಸಹ್ಯಕರವಾದ ಆಚರಣೆಗಳು, ಹೆಣ್ಣಿಗೆ ಮಾಡುವ ಅವಮಾನಗಳಲ್ಲಿ ಎಲ್ಲವನ್ನೂ ತಮ್ಮ ಸಿಂಹಕಂಠದಿಂದ ಘರ್ಜಿಸಿ, ಅವರ ಆಟಗಳನ್ನು ಬಯಲು ಮಾಡುತ್ತಿದ್ದರು. ಅವರ ಸಾವಿರಾರು ಲೇಖನಗಳಲ್ಲಿ ಅವೆಲ್ಲವನ್ನೂ ದೀರ್ಘವಾಗಿ ಚರ್ಚಿಸಲಾಗಿದೆ. ದ್ರಾವಿಡರು ಆತ್ಮ ಗೌರವವನ್ನು ಪಡೆಯಬೇಕಾದರೆ ಶಿಕ್ಷಣ ಅತ್ಯಗತ್ಯ ಎಂದು ಒತ್ತಿ ಹೇಳಿದರು. ಅಸ್ಪೃಶ್ಯರ ದುಸ್ಥಿತಿಗೆ ಒಬ್ಬ ಬ್ರಾಹ್ಮಣರೇ ಕಾರಣ, ಎಂದು ಹೇಳಿ ಅವರನ್ನು ನಿರ್ಭಯವಾಗಿ ಬಯ್ಯುತ್ತಿದ್ದರು.

ಸ್ವಾಭಿಮಾನಿ ಆಂದೋಲನದ ನಿರ್ಣಯಗಳು

೧) ರಾಜಕೀಯ ಶಿಕ್ಷಣ ವ್ಯವಸ್ಥೆಯಾಗಬೇಕು.

೨) ದಾಸ್ಯ ಮುಕ್ತ ಸ್ವತಂತ್ರ ವಾತಾವರಣ ನಿರ್ಮಾಣವಾಗಬೇಕು.

೩) ಅನಾವಶ್ಯ ಸಂಪ್ರದಾಯಗಳ ಅರ್ಥಹೀನ ಆಚರಣೆಗಳನ್ನು ನಿರಾಕರಿಸಬೇಕು.

೪) ಸ್ತ್ರೀಯರಿಗೆ ಸಮಾನ ಹಕ್ಕುಗಳು ಸಿಗಬೇಕು.

೫) ಜಾತಿ ಮತ ವೃತ್ತಿವರ್ಗಗಳನ್ನಾಧರಿಸಿದ ಹಾಗೂ ಅಸಮಾನತೆಯನ್ನು ಪುರಸ್ಕರಿಸುವ ಸಾಮಾಜಿಕ ವ್ಯವಸ್ಥೆಯು ನಾಶವಾಗಬೇಕು.

೬) ಅಸ್ಪೃಶ್ಯತೆಯ ನಿರ್ಮೂಲನೆ ಹಾಗೂ ಭ್ರಾತೃತ್ವದ ಆಧಾರದ ಮೇಲೆ ಸುಭದ್ರ ಸಮಾಜ ಸ್ಥಾಪನೆಯಾಗಬೇಕು.

ರಾಮಸ್ವಾಮಿ ನಾಯ್ಕರ್ ಜೀವನದ ಮುಖ್ಯ ಘಟನೆಗಳು

೧) ೧೯೩೧ರಲ್ಲಿ ರಷ್ಯ, ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್, ಸ್ಪೇನ್ ದೇಶಗಳಿಗೆ ಭೇಟಿ ನೀಡಿದರು.

೨) ೧೯೩೮ರಲ್ಲಿ ಜಸ್ಟೀಸ್ ಪಕ್ಷದ ಅಧ್ಯಕ್ಷರಾದರು.

೩) ೧೯೪೦ರಲ್ಲಿ ಡಾ॥ ಅಂಬೇಡ್ಕರ್ ಅವರನ್ನು ಭೇಟಿ ಮಾಡಿದರು.

೪) ೧೯೫೧ರಲ್ಲಿ ಸುಪ್ರಿಂ ಕೋರ್ಟ್ ತೀರ್ಮಾನದ ವಿರುದ್ಧ, ಮೀಸಲಾತಿ ಪರ ಹೋರಾಟ ಪರಿಣಾಮವಾಗಿ ಸಂವಿಧಾನಕ್ಕೆ ಮೊದಲನೇ ತಿದ್ದುಪಡಿ ತಂದು ಅನುಚ್ಛೇದ ೧೬(೪) ನ್ನು ಸೇರಿಸಲಾಯಿತು.

೫) ೧೯೫೩ರಲ್ಲಿ ವಿನಾಯಕನ ವಿಗ್ರಹವನ್ನು ತೆಂಗಿನ ಕಾಯಿಗೆ ಹೊಡೆದು ಪ್ರತಿಭಟನೆ.

೬) ೧೯೫೫ರಲ್ಲಿ ರಾಮಸೀತೆಯರ ಚಿತ್ರಪಟಗಳನ್ನು ಸುಡಲಾಯಿತು.

ದ್ರಾವಿಡ ಕಳಂಗನ ಧ್ಯೇಯಗಳು

೧) ದೇವರು, ಧರ್ಮ ಮೂಢನಂಬಿಕೆಗಳಿಲ್ಲದ ಬದುಕು.

೨) ಮಾನಸಿಕ ಗುಲಾಮಗಿರಿಯಿಲ್ಲದ ಸ್ವಾಭಿಮಾನದ ಬದುಕು.

೩) ಜಾತಿಯಾಧಾರಿತ ಕಸುಬು, ಧರ್ಮ, ಜಾತಿಗಳನ್ನು ನಾಶಮಾಡುವುದು.

೪) ಎಲ್ಲರಿಗೂ ರಾಜಕೀಯ, ಸಾಮಾಜಿಕ, ಆರ್ಥಿಕ ಸಮಾನತೆಯಿರಬೇಕು.

೫) ಅಸ್ಪೃಶ್ಯತೆ ನಾಶಮಾಡಿ, ಸೋದರತ್ವ ಬೆಳೆಸುವುದು.

೬) ಮಹಿಳೆಯರಿಗೆ ಸಮಾನತೆ,

೭) ಬ್ರಾಹ್ಮಣವಾದಿ ವೇದ, ಶಾಸ್ತ್ರ, ಪುರಾಣಗಳನ್ನು ಧಿಕ್ಕರಿಸುವುದು.

೮) ವ್ಯವಸಾಯವನ್ನು ಆಧುನೀಕರಣಗೊಳಿಸಿ, ಲಾಭದಾಯಕ ಕಸುಬಾಗಿಸಬೇಕು.

೯) ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕು. ದೇವಾಲಯಗಳನ್ನು ಗುಡಿ ಕೈಗಾರಿಕೆಗಳನ್ನು ಪರಿವರ್ತಿಸುವುದು.

೧೦) ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.

೧೧) ಸ್ವಾಭಿಮಾನ ಚಳುವಳಿಯು ದೇವರು, ಧರ್ಮ, ಕಾಂಗ್ರೆಸ್, ಗಾಂಧಿ ಮತ್ತು ಬ್ರಾಹ್ಮಣ ವಿರೋಧಿ ಚಳುವಳಿ.

ಅವರ ಅಂತಿಮ ಯಾತ್ರೆ :

೯೫ನೆಯ ವಯಸ್ಸಿನಲ್ಲಿ ಜೇನಿನಂತೆ ಕಾರ್ಯಮಗ್ನರಾಗಿ ೧೯೭೩ರ ನವೆಂಬರ್ ೧೭ ರಿಂದ ಡಿಸೆಂಬರ್ ೩೦ರವರೆಗೆ ಬಿರುಗಾಳಿಯಂತೆ ತಮಿಳುನಾಡಿನಲ್ಲಿ ಸುತ್ತಿ ಮದ್ರಾಸಿಗೆ ಬಂದರು. ಅಲ್ಲಿಯೇ ತಂಗಿದ್ದು ತಮಿಳರ ಸಾಮಾಜಿಕ ಅನ್ಯಾಯ ನಿರ್ಮೂಲನೆಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದರು. ಎಡೆಬಿಡದ ಕಾರ್ಯಕ್ರಮಗಳಿಂದ ಪೆರಿಯಾರರ ಆರೋಗ್ಯ ಕೆಟ್ಟಿತು. ಗೆಳೆಯರ

ಒತ್ತಾಯದ ಮೇಲೆ ವೆಲ್ಲೂರು ಆಸ್ಪತ್ರೆ ಸೇರಿದರು. ಆದರೆ ಅವರನ್ನು ಉಳಿಸಿಕೊಳ್ಳಲು ಆಗಲಿಲ್ಲ. ೨೪-೧೨-೧೯೭೩ರಂದು ನಿಧನ ಹೊಂದಿದರು.

ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ಮೇಲೆ ಪೆರಿಯಾರ್ ಚಿಂತನೆಗಳ ಪ್ರಭಾವ

ಬಾಲ್ಯದಿಂದಲೇ ಶೋಷಣೆಗೆ ಒಳಗಾದ ಸಿದ್ಧಲಿಂಗಯ್ಯನವರು ಸಹಜವಾಗಿಯೇ ಹಲವು ವಿಚಾರಧಾರೆಗಳಿಂದ ಪ್ರಭಾವಿತರಾದರು. ಪೆರಿಯಾರರೊಂದಿಗೆ ಸಿದ್ಧಲಿಂಗಯ್ಯ ಮಾತುಕತೆಯ ಮೂಲಕ ನೇರ ಅನುಭವವನ್ನು ಪಡೆದುಕೊಂಡಿದ್ದಾರೆ ಪೆರಿಯಾರ್‌ರವರನ್ನು ಬೆಂಗಳೂರಿಗೆ ಕರೆಸಿದ್ದಾಗ ಪೆರಿಯಾರ್‌ರವರ ಆರಂಭದ ಮಾತುಗಳು ಸಿದ್ಧಲಿಂಗಯ್ಯನವರ ಮೇಲೆ ಪ್ರಭಾವ ಬೀರಿವೆ.

'ದೇವರಿಲ್ಲ ದೇವರಿಲ್ಲ
ದೇವರಿಲ್ಲವೇ ಇಲ್ಲ
ದೇವರನ್ನು ಸೃಷ್ಟಿಸಿದನು
ಮುಠ್ಠಾಳ
ದೇವರನ್ನು ಪ್ರಚಾರ ಮಾಡುವವನು
ಅಯೋಗ್ಯ
ದೇವರಿಗೆ ನಮಸ್ಕರಿಸುವವನು
ಕಾಡುಮೃಗ[7]

ಈ ಮೇಲಿನ ದೇವರನ್ನು ಕುರಿತ ಮಾತುಗಳು ಪೆರಿಯಾರ್‌ರವರ ಬಾಯಿಂದ ಹೊರಬರುತ್ತಿದ್ದಂತೆಯೇ ಸಭೆಯ ಜನರೆಲ್ಲ ನಿಶಬ್ಧವಾಗಿ ಕುಳಿತಿರುತ್ತಿದ್ದರು. ಸಿದ್ಧಲಿಂಗಯ್ಯನವರು ಪೆರಿಯಾರ್‌ರವರ ಈ ವೈಚಾರಿಕ ನೆಲೆಯ ಮಾತುಗಳಿಗೆ ಪ್ರಭಾವಿತರಾದರು. ತಮ್ಮ ಕಾವ್ಯ ಮತ್ತು ನಾಟಕಗಳಲ್ಲಿ ಪೆರಿಯಾರ್‌ರವರ ಚಿಂತನೆಗಳನ್ನು ಅಳವಡಿಸಿಕೊಂಡರು. ಸ್ವಾಭಿಮಾನಿ ಚಳುವಳಿಯ ನೇತೃತ್ವವಹಿಸಿದ ಪೆರಿಯಾರ್ ಬಣ್ಣ, ಭಾಷೆ ಆಹಾರದಲ್ಲಿ ಆತ್ಮಗೌರವವನ್ನು ತೋರಿಸಿಕೊಟ್ಟರು. ಸಿದ್ಧಲಿಂಗಯ್ಯನವರು ಪೆರಿಯಾರ್‌ರವರ ಸಾಂಸ್ಕೃತಿಕ ನೆಲೆಗಳನ್ನು ತಮ್ಮ ಸಾಹಿತ್ಯದಲ್ಲಿ ರೂಪಿಸಿದ್ದಾರೆ.

ಪೆರಿಯಾರ್‌ರವರು 'ಪ್ರಾರ್ಥನೆಗಿಂತಲೂ ದೇವರ ಭಕ್ತಿಯೆಂಬುದು ಬಹು ಅನಾಗರೀಕವಾಗಿ ಇರುತ್ತದೆ. 'ಭಕ್ತಿಯೂ ಕೂಡ ಒಂದಲ್ಲ ಒಂದು ವಿಧದಲ್ಲಿ ವ್ಯಾಪಾರದಂತೇಯೇ'[8] ಇದೆ ಎಂದು ಅಭಿಪ್ರಾಯ ಪಡುತ್ತಾರೆ. ದೇವರು ಸುಳ್ಳು, ಶಾಸ್ತ್ರ-ಪುರಾಣ ಪೊಳ್ಳು ಎಂದು ಹೇಳುವ

---

[7] **ಸಂ. ಹೆಚ್. ದಂಡಪ್ಪ : ಬಡವರ ನಗುವಿನ ಶಕ್ತಿ : ಅಂಕಿತ ಪ್ರಕಾಶನ, ಪುಟ-೨೨.**

[8] **ಸಂ. ಡಾ॥ ವಿರೂಪಾಕ್ಷಿ ಪೂಜಾರಹಳ್ಳಿ : ಪೆರಿಯಾರರ ವಿಚಾರಧಾರೆ, ಪ್ರಸಾರಾಂಗ ಕ.ವಿ.ವಿ.ಹಂಪಿ, ಪುಟ-೧೧೫.**

ಪೆರಿಯಾರ್‌ರವರು ದೇವಸ್ಥಾನಗಳು ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಅಲ್ಲಿ ದೇವದಾಸಿ ಸೃಷ್ಟಿಯಾಗುತ್ತಾಳೆ ಎಂದು ಹೇಳುತ್ತಿದ್ದರು. ಈ ಮಾತುಗಳನ್ನು ಸಿದ್ಧಲಿಂಗಯ್ಯ ತಮ್ಮ ಕವಿತೆಯಲ್ಲಿ ಹೇಳಿದ್ದಾರೆ.

ದೇವರೆದುರಲಿ ದೇಹ ದಾಹವನು ಇಂಗಿಸಿದ
ದೇವದಾಸಿಯ ಮಕ್ಕಳೇನಾದರೂ
ದೇವರನು ಧಿಕ್ಕರಿಸಿ ಮಾನವತೆಯ ನಂಬಿ
ಉಳ್ಳವರ ಎದೆಗವರು ಮುಳ್ಳಾದರು
(ಪುರುಷಾರ್ಥ)

ಈ ದೇಶದಲ್ಲಿ ಮಾನವನ ಮಾತುಗಳಿಗೆ ಬೆಲೆ ಇಲ್ಲ. ಎಲ್ಲಾ ನಿರ್ಧಾರಗಳು ದೇವರಿಗೆ ಸೇರಿರುತ್ತವೆ. ದೇವರ ಹೆಸರಿನಲ್ಲಿ ದೇವದಾಸಿಯರು ತಮ್ಮ ಶೀಲವನ್ನು ಮುಡುಪಿಟ್ಟು ಬದುಕಬೇಕು. ಮೇಲ್ಜಾತಿಯ ಮನುವಾದಿಗಳು ಈ ದೇವದಾಸಿಗಳನ್ನು ಇಚ್ಛೆಗೆ ಅನುಸಾರವಾಗಿ ಬಳಸಿಕೊಂಡು ಇದು ದೇವರ ಅವತಾರವೆಂದು ನಂಬಿಸುತ್ತಾರೆ. ಡಾ. ಸಿದ್ಧಲಿಂಗಯ್ಯನವರು ದೇವದಾಸಿಯರ ಮಕ್ಕಳು ವೈಚಾರಿಕತೆಯನ್ನು ಮೈಗೂಡಿಸಿಕೊಂಡು ಮಾನವತೆಯ ಸ್ವಾಭಿಮಾನದ ಪ್ರತಿಬಿಂಬವಾಗಬೇಕು, ಹಣವಂತರ, ಶಾಸ್ತ್ರವಾದಿಗಳ ವಿರೋಧಿಸಿ ಸ್ವಾಭಿಮಾನವ ಕಟ್ಟಬೇಕು ಎಂದು ಹೇಳುತ್ತಾರೆ.

ದೇವಸ್ಥಾನಗಳ ಚರಿತ್ರೆ-ಅವುಗಳನ್ನು ನಿರ್ಮಿಸಿದವರುಗಳ ಉದ್ದೇಶ ಮುಂತಾದವುಗಳನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಿದರೆ ಅಲ್ಲಿನ ಅನೀತಿಯುತ ಕಂದಾಚಾರಗಳು ಗೋಚರಿಸುತ್ತವೆ. ಪಟ್ಟಭದ್ರಹಿತಾಸಕ್ತಿಗಳವರ ಧೋರಣೆಗಳು, ಶಾಸ್ತ್ರಪುರಾಣಗಳ ಮೂಲಕ ಸಾಮಾನ್ಯ ಜನರನ್ನು ಕಟ್ಟಿಹಾಕಲಾಗುತ್ತದೆ ಎಂಬು ದು ಪೆರಿಯಾರ್‌ರವರ ಮಾತಾಗಿತ್ತು. ಸಿದ್ಧಲಿಂಗಯ್ಯನವರು ತಮ್ಮ ಭೂಮಿಗುಂಡಗಿದೆ ಎಂಬ ಕವಿತೆಯಲ್ಲಿ ಹೇಳುತ್ತಾರೆ:

ದೇವರು ಆತ್ಮ ಕಂಡವರಿಲ್ಲ
ಶಾಸ್ತ್ರ ಪುರಾಣ ಸುಳ್ಳಿನ ಕಂತೆ
ಅರಮನೆ ಗುರುಮನೆ ಮೋಸದ ಜಾಲ
ಮುಗಿಯಲಿ ಶೋಷಣೆ ಮಾಡುವ ಕಾಲ
(ಭೂಮಿ ಗುಂಡಗಿದೆ)

ಈ ಮೇಲಿನ ಸಾಲುಗಳು ಪೆರಿಯಾರ್ ರವರ ದೇವ್ರು-ದಿಂಡ್ರು ಸುಳ್ಳು, ಶಾಸ್ತ್ರ ಪುರಾಣ ಪೊಳ್ಳು ಎಂಬ ಮಾತುಗಳು ನೆನಪಿಗೆ ತರಿಸುತ್ತವೆ. ನಮ್ಮ ಸುತ್ತಲಿನ ಮಠಮಾನ್ಯಗಳು ದೇವರ ಹೆಸರಿನಲ್ಲಿ ನಡೆಸುತ್ತಿರುವ ಅಧಿಕಾರ, ಶೋಷಣೆ, ಆಳುವ ಸರ್ಕಾರದ ಮೇಲೆ ಒತ್ತಡ ತಂದು ವೈದಿಕ

ಸಂಸ್ಕೃತಿಯನ್ನು ಬಿತ್ತುವ ಪ್ರಯತ್ನ ಸಮಾಜಕ್ಕೆ ಮಾರಕವಾಗಿದೆ. ಸಿದ್ಧಲಿಂಗಯ್ಯನವರು ಅರಮನೆ, ಮಠಮಾನ್ಯಗಳು ಜಾತಿಯ ಸೃಷ್ಟಿಮಾಡುವ ಮೋಸದ ಮನೆಗಳು ಎಂದು ಹೇಳುತ್ತಾರೆ.

ದೇವರನ್ನು ಪ್ರಶ್ನೆ ಮಾಡದೆ ನಂಬುವ ವಿದ್ಯಾವಂತರ ಜೀವ ನಿರ್ಜೀವ ಎಂದು ಹೇಳಬಹುದು. ಆದರೆ ನಮ್ಮ ಭಾರತ ದೇಶದ ದೊಡ್ಡ ದುರಂತವೆಂದರೆ ಯಾರು ದೇವರನ್ನು ವಿರೊಧಿಸುತ್ತಾರೆಯೋ ಅವರನ್ನೇ ನಮ್ಮ ಜನ ದೇವರನ್ನಾಗಿಸಿಬಿಡುತ್ತಾರೆ (ಉದಾ : ಬುದ್ಧ, ಬಸವ, ಅಂಬೇಡ್ಕರ್)

ದೇವರು ಇಲ್ಲ ಎಂದವನನ್ನು
ದೇವರು ಮಾಡಿ ಬಿಟ್ಟರು
ಹತ್ತವತಾರ ಸುಳ್ಳೆಂದವನ
ಹನ್ನೊಂದಕ್ಕೆ ಏರಿಸಿದರು (ಮಾತಿಗೆ ಮಾತು ಕೊಟ್ಟವನ)

ಅಂಬೇಡ್ಕರ್‌ರವರು ‘ಭಗವಾನ್ ಬುದ್ಧ ಮಹಾವಿಷ್ಣುವಿನ ಅವತಾರ ಎಂಬುವುದನ್ನು ನಾನು ನಂಬುವುದಿಲ್ಲ. ಹಾಗೆ ಪ್ರಸಾರ ಮಾಡುವುದು ಉಲ್ಬಣತಮ ಅಪರಾಧವೆಂದು ನಾನು ಮನಸಾರೆ ನಂಬುತ್ತೇನೆ’[೯] ಎಂದರು. ಅದೇ ರೀತಿಯಾಗಿ ಪೆರಿಯಾರ್‌ರವರು ಅವತಾರಗಳು ಮಹಾಸುಳ್ಳುಗಳು. ಅವು ಹಾರುವರ ಕಪಟ ಕತೆಯ ಸ್ವಾರಸ್ಯಗಳು ಎಂದು ಹೇಳುತ್ತಾರೆ. ನಮ್ಮ ಜನ ಅವತಾರ ವಿರೋಧಿಸಿದ ಅಂಬೇಡ್ಕರ್‌ರವರನ್ನು ದೇವರು ಮಾಡಿ ಪೂಜಿಸುತ್ತಿದ್ದಾರೆ. ಇದು ಆಧುನಿಕ ಯುಗದಲ್ಲಿಯೂ ನಡೆಯುತ್ತಿರುವುದು ದೊಡ್ಡ ದುರಂತವಾಗಿದೆ.

ಸಮಕಾಲೀನ ಸಂದರ್ಭದಲ್ಲಿ ದೇವರಿಗೆ ಸಂಬಂಧಿಸಿದಂತೆ ಸರ್ಕಾರಗಳು ನಡೆಯುತ್ತಿವೆ/ ಜನಪ್ರತಿನಿಧಿಗಳು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಿಂದ ಹಿಡಿದು ಆಳ್ವಿಕೆ ನಡೆಸುವವರೆಗೂ ದೇವರೇ ಕಾರಣ ಎಂದು ಹೇಳುತ್ತಾರೆ. ಸರ್ಕಾರದ ಹಣದಲ್ಲಿ ಹೋಮ-ಹವನ ಮಾಡಿಸುತ್ತಾರೆ. ಹೆಜ್ಜೆ ಹೆಜ್ಜೆಗೂ ದೇವಾಲಯಗಳನ್ನು ನಿರ್ಮಿಸುತ್ತಿದ್ದಾರೆ. ಸ್ಲಂಜನಾಂಗದವರು ಮೂಲಭೂತ ಸೌಕರ್ಯ ವಂಚಿತರಾಗಿ ಬದುಕುತ್ತಿದ್ದರೂ ನಮ್ಮನ್ನಾಳುವ ಸರ್ಕಾರ ಅವರ ಕಡೆ ಗಮನ ನೀಡದೆ ಮಠಮಾನ್ಯಗಳಿಗೆ, ದೇವಾಲಯಗಳಿಗೆ ಬಜೆಟಿನ ಹಣವನ್ನೆಲ್ಲ ಧಾರೆ ಎರೆಯುತ್ತಿದ್ದಾರೆ.

[೯] ಡಾ.ವಿರೂಪಾಕ್ಷಿ ಪೂಜಾರಹಳ್ಳಿ : ಪೆರಿಯಾರರ ವಿಚಾರಧಾರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-೩೬.

ದೇವ್ರು ಒಬ್ನೆ ಅಂತಾರೆ
ಒಣಿಗೊಂದೊಂದ್ ತಾರಾ ಗುಡಿ ಕಟ್ಟವ್ರೆ
ಎಲ್ಲಾರು ದೇವ್ರ ಮಕ್ಳು ಅಂತ್‌ರೆ
ಹೊಲೆರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ (ಒಂದು ಪದ)

ಈ ಮೇಲಿನ ಸಾಲುಗಳು ಪ್ರಸ್ತುವಾಗುತ್ತವೆ. ದಲಿತರು ಮನೆಗಳು ಇಲ್ಲದೆ ಪರಿತಪಿಸುತ್ತಿದ್ದಾರೆ. ಆದರೆ ಆಳುವ ಪ್ರಭುಗಳು ತಮ್ಮ ಕೆಲಸ ದೇವಾಲಯ ನಿರ್ಮಿಸುವುದು ಎಂಬಂತೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದಲಿತರನ್ನು ಹರಿಜನ ಎಂದು ಕರೆದು ಅವರನ್ನು ಅವಹೇಳನ ಮಾಡುವ ಪರಿಸ್ಥಿತಿ ಇಂದಿಗೂ ಜೀವಂತವಾಗಿದೆ. ದೇವರು ಇಂದು ಬಂಡವಾಳದ ವಸ್ತುವಾಗಿದೆ. ಶ್ರಮವಿಲ್ಲದೆ ಹಣ ಸಂಪಾದಿಸುವ ಕೆಲಸ ದೇವರ ಪರಿಕಲ್ಪನೆ ಯಿಂದ ಮಾತ್ರ ಸಾಧ್ಯವೆಂದು ಮನುವಾದಿಗಳಿಗೆ ತಿಳಿದಿದೆ. ಆದುದರಿಂದ ಅವರು ದೇವರ ಹೆಸರಿನಲ್ಲಿ ಕಪಟ ಕಥೆಗಳನ್ನು ಸೃಷ್ಟಿಮಾಡಿ ಜನರನ್ನು ವಂಚಿಸುತ್ತಿದ್ದಾರೆ ಎನ್ನುವುದು ಪೆರಿಯಾರ್‌ರವರ ಅಭಿಪ್ರಾಯ ವಾಗಿತ್ತು.

ಪೆರಿಯಾರ್‌ರವರ ಪ್ರಕಾರ "ದರೋಡೆಕೋರರಾಗಿದ್ದವರೇ ರಾಜರುಗಳಾಗಿದ್ದಾರೆ. ಕ್ರೂರಿಗಳಾಗಿದ್ದವರೇ ಪ್ರಭುಗಳಾಗಿದ್ದಾರೆ. ಅಯೋಗ್ಯರುಗಳಾಗಿದ್ದವರೇ ಮೇಲ್ಜಾತಿಯವರಾಗಿದ್ದಾರೆ. ಹಾದರದ ಕಥೆಗಳೇ ಪವಿತ್ರ ಪುರಾಣಗಳಾಗಿ ಬಿಟ್ಟಿದೆ" ಈ ಮಾತುಗಳು ಸಿದ್ಧಲಿಂಗಯ್ಯನವರ ಮೇಲೆ ಪ್ರಭಾವ ಬೀರಿವೆ.

ದಡ್ಡ ಭಕ್ತರಿಗೆ ಚಿನ್ನ ಕೊಟ್ಟೋನು
ದಡ್ಡ ಭಕ್ತರಿಗೆ ಬೂದಿ
ಇವನು ಮಾಡುವನು ಬಿದ್ದೋರ ಉದ್ದಾರ
ಕಾಯಿರಪ್ಪ ಕಾಯ್ರಿ (ಮಹಾವ್ಯಕ್ತಿ ಹಬ್ಬ)

ಈ ಮೇಲಿನ ಮಾತುಗಳು ದೇವಾಲಯಗಳಲ್ಲಿ ಕಂಡು ಬರುವ ಸನ್ನಿವೇಶವಾಗಿದೆ. ಪೂಜೆ ಮಾಡುವ ಪುರೋಹಿತರು ಭಕ್ತರ ಮುಖನೋಡಿಕೊಂಡು ಪೂಜೆಯ ಪರಿಯನ್ನು ಪ್ರಾರಂಭಿಸುತ್ತಾರೆ. ಹಣವನ್ನು ಹೆಚ್ಚು ಹಾಕುವ ಭಕ್ತರಿಗೆ ವಿಶೇಷ ಆತಿಧ್ಯವಾಗಿರುತ್ತದೆ. ಬಡತನದಿಂದ ಮಾಸಲು ಬಟ್ಟೆಯಿಂದ ಬರುವ ಭಕ್ತರಿಗೆ ಸಿಡುಕುಮೂತಿಯಿಂದ ಸ್ವಾಗತವಾಗಿರುತ್ತದೆ. ಆದರೂ ಬಡವರು ಮಾತ್ರ ದೇವರ ಮೇಲೆ ಹೆಚ್ಚು ಭಕ್ತಿಗೆ ಒಳಗಾಗಿರುತ್ತಾರೆ.

ಪೆರಿಯಾರ್‌ರವರು ದೇವರನ್ನು, ದೇವರನ್ನು ಗೌರವಿಸುವವರನ್ನೂ ಮೂರ್ಖರೆಂದು ಕರೆಯುತ್ತಿದ್ದರು. ಇದನ್ನು ಸಿದ್ಧಲಿಂಗಯ್ಯ ತಮ್ಮ ಕಾವ್ಯದಲ್ಲಿ ಹೀಗೆ ಹೇಳಿದ್ದಾರೆ.

ದೇವರು ಗುರುಗಳ ತಿಪ್ಪೆಗೆ ತಳ್ಳಿ

ಮಂತ್ರಿ ಶಾಸಕರ ಮೋರಿಗೆ ನೂಕಿ

ತಾವೇ ಕಂಡ ಹೊಸ ದಾರಿಯಲಿ

ಹೊಂಟರು ದಲಿತರು ಮೆರವಣಿಗೆ (ದಲಿತರು ಬರುವರು)

ಸಿದ್ಧಲಿಂಗಯ್ಯನವರ ಕಾವ್ಯದ ಆಶಯ ಹೊಸದಾರಿಯದಾಗಿದೆ. ಪೆರಿಯಾರ್‌ರವರ ಚಿಂತನೆಯಂತೆ ದೇವರು ಗುರುಗಳ ತಿಪ್ಪೆಗೆ ತಳ್ಳಿ ಅನೀತಿವಂತ ಮಂತ್ರಿ ಶಾಸಕರನ್ನು ಹೊರದಬ್ಬಿ ಮಾನವೀಯತೆಯ ಹೊಸ ಸಮಾಜವನ್ನು ಕಟ್ಟಬೇಕಾಗಿದೆ. ಪೆರಿಯಾರ್‌ರವರು ಕ್ರಾಂತಿಕಾರಿ ಭಾಷಣಕ್ಕೆ ಹೆಸರಾದವರು, ತಮ್ಮ ಭಾಷಣದಲ್ಲಿ ವೈಚಾರಿಕತೆ ಮತ್ತು ವಾಸ್ತವತೆಯನ್ನು ಸಾರುತ್ತಿದ್ದರು.

ಧರ್ಮಗುರುವ ಚರ್ಮ ಸುಲಿದು

ಸೀರೆ ಕುಬಸ ಹೊಲಿಸುವೆ

ಮೋಸಗಾರ್ರ ಕೊರಳ ಕಡಿದು

ತಲೆಯ ಹಾರ ಹಾಕುವೆ (ನನ್ನವಳಿಗೆ)

ಈ ಸಾಲುಗಳು ಕ್ರಾಂತಿಕಾರಕ ಮನೋಭಾವನೆಯನ್ನು ಸೂಚಿಸುವುದರ ಮೂಲಕ ಪೆರಿಯಾರ್ ಭಾಷಣ ಶೈಲಿಯನ್ನು ಮನಸ್ಸಿಗೆ ತಂದುಕೊಡುತ್ತವೆ. ನಮ್ಮನಿಂದು ಆಳುತ್ತಿರುವುದು ಪ್ರಜಾಪ್ರಭುತ್ವವಲ್ಲ, ಬದಲಾಗಿ ಧರ್ಮಾಂಧತೆಯ ಪ್ರಭುತ್ವ ಅದನ್ನು ಮನಗಂಡ ಸಿದ್ಧಲಿಂಗಯ್ಯ ಅಂದಿನ ದಿನಗಳಲ್ಲೆ ಧರ್ಮಗುರುವ ಚರ್ಮ ಸುಲಿದು ಎಂಬ ಕವಿತೆಯ ಸಾಲುಗಳನ್ನು ರಚಿಸಿದ್ದಾರೆ.

ಪೆರಿಯಾರ್ ಚಿಂತನೆಗಳು ಸಿದ್ಧಲಿಂಗಯ್ಯನವರ ನಾಟಕಗಳ ಮೇಲೂ ಕೂಡ ಪ್ರಭಾವ ಬೀರಿವೆ. ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕವು ಸಮಕಾಲೀನ ಚಿಂತನೆಗಳನ್ನು ಹೇಳುತ್ತದೆ. ಹೇಗೆ ಪ್ರಸ್ತುತ ಸಂದರ್ಭದಲ್ಲಿ ವಿದ್ಯೆ ಉಳ್ಳವರ ಮತ್ತು ಮೇಲ್ಜಾತಿಯವರಸ್ವತ್ತಾಗಿದೆ ಎಂಬುದನ್ನು ಹೇಳುತ್ತದೆ. ಪೆರಿಯಾರ್‌ರವರ ಸ್ವಾಭಿಮಾನದ ನೆಲೆಗಳು ಏಕಲವ್ಯ ನೊಳಗೆ ಕಾಣುತ್ತವೆ. ಏಕಲವ್ಯ ದ್ರೋಣರ ಶಾಸ್ತ್ರದ ಪರಿಕಲ್ಪನೆಗೆ ಒಳಗಾಗಿ ತನ್ನ ಬಲಗೈ ಹೆಬ್ಬೆರಳನ್ನು ಕಳೆದುಕೊಳ್ಳುತ್ತಾನೆ. ಆದರೆ ಸ್ವಾಭಿಮಾನಿಯಾದ ಏಕಲವ್ಯ ತನ್ನ ಎಡಗೈಯಿಂದ ವಿದ್ಯೆ ಕಲಿತು ಲೋಕಪ್ರಸಿದ್ಧಿಯಾಗುತ್ತಾನೆ.

ಏಕಲವ್ಯ : ಪೂಜ್ಯರೆ....... ಕೀಳು ಕುಲದಲ್ಲಿ ಹುಟ್ಟಿದ ತಪ್ಪಿಗೆ ಜೀವನ ಪೂರ್ತಿ ನಾನು ಈ ವಿದ್ಯೆಯಿಂದ ದೂರವಾಗಬೇಕೇ?

ಈ ಏಕಲವ್ಯನ ಈ ಪ್ರಶ್ನೆ ಇಡೀ ಶೋಷಿತ ಸಮುದಾಯದ ಪ್ರಶ್ನೆಯಾಗಿದೆ. ಈ ದೇಶದ ಧರ್ಮ, ಶಾಸ್ತ್ರ, ಪುರಾಣಗಳು ಹೇಗೆ ಬಹು ಸಂಖ್ಯಾತ ಮೂಲನಿವಾಸಿಗಳನ್ನು ವಿದ್ಯೆಯಿಂದ ವಂಚಿಸಿವೆ ಎಂಬುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದು. ಮಾನವನ ಸಂಕುಲಕ್ಕೆ ಜ್ಞಾನವು ಅನ್ನದಷ್ಟೆ ಮಹತ್ವದ್ದು ಪುರೋಹಿತಶಾಹಿ ವ್ಯವಸ್ಥೆ ವರ್ಣಕಲ್ಪನೆಯ ಜೊತೆಗೆ ಶೂದ್ರ ಹಾಗು ಶೋಷಿತರಿಗೆ ಅಕ್ಷರವನ್ನು ನಿರಾಕರಿಸಿ ಅಂಧಕಾರದತ್ತ ನೂಕಿದ್ದು ಕುಟಿಲ ನೀತಿಯಾಗಿದೆ. ಪೆರಿಯಾರ್ ರವರು ಮನುಧರ್ಮಶಾಸ್ತ್ರವು ಬ್ರಾಹ್ಮಣರಿಂದ ಸೃಷ್ಟಿಯಾದ ಮೋಸದ ಕಥೆ ಎಂದು ಹೇಳುತ್ತಾರೆ.

ಪಂಚಮ ನಾಟಕವು ವಾಸ್ತವ ಸಮಸ್ಯೆಯನ್ನು ಹಾಸ್ಯ ಮತ್ತು ವ್ಯಂಗ್ಯಪೂರಿತ ಪರಿಭಾಷೆಯಲ್ಲಿ ಚರ್ಚೆಗೊಳಪಡಿಸುತ್ತಾ ಸಾಗುತ್ತದೆ. ಪಂಚಮ ನಾಟಕದಲ್ಲಿ ಪಂಚಮ ನಾಟಕದ ನಾಯಕ ಏಕಲವ್ಯನಂತೆ ಇವನು ಕೂಡ ಸ್ವಾಭಿಮಾನಿ

ಹಯವದನರಾವ್ : ನಿಮ್ ಹೆಸರೇನ್ರೀ

ಪಂಚಮ : ನನ್ನ ಹೆಸರು ಹೊಲೆಮಾದಿಗ

ಹಯವದನರಾವ್ : ನಿಮ್ಮನ್ನ ನೀವೆ ಯಾಕೆ ಹಿಂಗೆ ಅವಮಾನ ಮಾಡ್ಕೊತ್ತೀರಾ?

ಪಂಚಮ : ಹೊಲೆಮಾದಿಗ ಅಂದ್ರೆ ನಿಮಗೆ ಸಂತೋಷ ಆಗ್ತದೆ ಅಂತ ನನಗೆ ಗೊತ್ತು. ಅದಕ್ಕೇನೆ ನನ್ನ ಹೆಸರು ಹೊಲೆಮಾದಿಗ.

ಹಯವದನರಾವ್ : ಹರಿಜನ ಅಂತಾ ಗಾಂಧೀಜಿಯವರು ನಿಮ್ಮನ್ನ ಕರೆದದ್ದು

ಏನಾಗಬೇಕು? ಯಾಕಿಷ್ಟು ದುಗುಡ?

ನೀವು ಖಂಡಿತಾವಾಗಿಯೂ ದೇವರ ಮಕ್ಕಳು

ಪಂಚಮ : ನಾವು ಖಂಡಿತವಾಗಲೂ ದೇವರ ಮಕ್ಕಳಲ್ಲ.

ನಾವು ನಮ್ ತಂದೆ ತಾಯಿ ಮಕ್ಕಳು ಆದ್ದರಿಂದ

ನಾವು ಹರಿಜನರಲ್ಲ. ಹರಿಜನ ಅನ್ನೋ

ಹೆಸರನ್ನು ನೀವು ನಮಗೆ ಇಟ್ಟೀರ. ಆದರೆ

ಇವತ್ತು ನಮ್ಮ ಜನರಪರವಾಗಿ ಹರಿಜನ ಅನ್ನೋ

ಹೆಸರನ್ನ ನಿಮಗೇ ವಾಪಸ್ ಕೊಟ್ಟೇನಿ ನೀವೇ

ಇಟ್ಕೊಳ್ಳಿ

ಪಂಚಮ ನಾಕಟದ ಈ ಮೇಲಿನ ಸಾಲುಗಳು ಪ್ರಸ್ತುತ ಸಂದರ್ಭದಲ್ಲಿ ತಳಸಮುದಾಯದ ಜನ ತಮ್ಮ ಭಾಷೆ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುವುದನ್ನು ತಿಳಿಸುತ್ತದೆ. ಪಂಚಮ ತನ್ನ ಹೆಸರು 'ಹೊಲೆಮಾದಿಗ' ಎಂದು ಹೇಳುವಲ್ಲಿ ಸ್ವಾಭಿಮಾನವಿದೆ.

ದಲಿತ ಚಳುವಳಿ ಉಂಟುಮಾಡಿದ ಜಾಗೃತಿಯಿಂದಾಗಿ, ಅವಮಾನದ ಕಾರಣ ಜಾತಿಯನ್ನು ಬಹಿರಂಗವಾಗಿ ಹೇಳಿಕೊಳ್ಳಲು ಕೀಳರಿಮೆಯಿಂದ ನರಳುತ್ತಿದ್ದ ದಲಿತರು, ಅನಂತರದಲ್ಲಿ ತಮ್ಮ ಹೆಸರಿನ ಜೊತೆ ಜಾತಿ ಸೂಚಕ ಪದಗಳನ್ನು ಧೈರ್ಯವಾಗಿ ಬಳಸತೊಡಗಿದರು. ಈ ಹಿಂದೆ ಜಾತಿಯನ್ನು ಹೇಳಿಕೊಳ್ಳುವುದು ಕೀಳು ಎಂದು ಬಾವಿಸಿದ್ದ ದಲಿತರು, ಎಪ್ಪತ್ತರ ದಶಕದ ನಂತರ ಜಾತಿಯನ್ನು ಬಹಿರಂಗವಾಗಿ ಹೇಳಿಕೊಳ್ಳುವುದನ್ನು ಹೆಮ್ಮೆಯ, ಸ್ವಾಭಿಮಾನದ ಸಂಕೇತವಾಗಿ ಪರಿಗಣಿಸಲಾರಂಭಿಸಿದರು. ಈ ಬಗೆಯ ಆತ್ಮಾಭಿಮಾನ, ಆತ್ಮಗೌರವ ಪೆರಿಯಾರ್ ಚಿಂತನೆಯಿಂದ ಮೂಡಿ ಬಂದಿದೆ.

ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಪೆರಿಯಾರ್ ಚಿಂತನೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ದೇವರು ಎಂಬ ಪರಿಕಲ್ಪನೆ ವಾಸ್ತವ ಸತ್ಯಕ್ಕೆ ದೂರವಾದ ಮಾತು. ಆದರೆ ಇಂದು ಮಠಗಳ ಹೆಸರಿನಲ್ಲಿ ದೇವರು ನಮ್ಮನ್ನು ಆಳುತ್ತಿದೆ. ಇದು ಪ್ರಜಾಪ್ರಭುತ್ವ ಮಾದರಿಯ ಸಂವಿಧಾನವನ್ನು ಒಪ್ಪಿಕೊಂಡಿರುವ ಭಾರತೀಯರ ದುರಂತವಾಗಿದೆ. ಆದುದರಿಂದ ಪ್ರಜಾಪ್ರಭುತ್ವ ನಿರ್ಮಾಣ ಮಾಡಬೇಕಾದರೆ ಪೆರಿಯಾರ್ ಚಿಂತನೆಗಳ ಅವಶ್ಯಕತೆಯಿದೆ. ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಅಡಗಿರುವ ಪೆರಿಯಾರ್ ಚಿಂತನೆಗಳ ಮರು ಓದು ಮತ್ತೆ ಮತ್ತೆ ಬೇಕಾಗಿದೆ.

ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್

ಶೋಷಿತ ಸಮುದಾಯದ ದಿವ್ಯಚೇತನ ಡಾ. ಅಂಬೇಡ್ಕರ್‌ರವರು ೧೮೯೧ರ ಏಪ್ರಿಲ್ ೧೪ರಂದು ರಾಮಾಜೀ ಸಕ್ಪಾಲ್ ಮತ್ತು ಭೀಮಾಬಾಯಿರವರ ಮಗನಾಗಿ ಮಧ್ಯಪ್ರದೇಶದ ಮೌನ್ವ ಎಂಬ ಊರಿನಲ್ಲಿ ಜನಿಸಿದರು. ದೇಶ ವಿದೇಶಗಳಲ್ಲಿ ಸಕಲ ವಿದ್ಯೆ ಕಲಿತು ಮಾನವೀಯತೆಯ ಪ್ರಬುದ್ಧ ಸಮಾಜ ನಿರ್ಮಿಸಲು ಪ್ರಯತ್ನಿಸಿದರು.

ಜುಲೈ ೨೦, ೧೯೨೪ರಲ್ಲಿ "ಬಹಿಷ್ಕೃತ – ಹಿತಕಾರಿಣಿ ಸಭಾ' ಪ್ರಾರಂಭಿಸಿದ ಡಾ. ಅಂಬೇಡ್ಕರ್ "ಇದೊಂದು ಶೋಷಿತ ವರ್ಗಗಳ, ಶೋಷಿತವರ್ಗಗಳಿಂದ ಮತ್ತು

ಶೋಷಿತವರ್ಗಗಳಿಗಾಗಿ ರಚನೆಯಾಗಿರುವ ಸಂಸ್ಥೆ. ಇದರ ಗುರಿಯು ಭಾರತದ ಶೋಷಿತವರ್ಗಗಳನ್ನು ಅವರ ಇಂದಿನ ಶೋಷಣೆಯ ಸ್ಥಿತಿಯಿಂದ ವಿಮುಕ್ತಿಗೊಳಿಸಿ ಸಾಮಾಜಿಕ ಮತ್ತು ರಾಜಕೀಯ ಸಮಾನತೆಯನ್ನು ಗಳಿಸುವ ಮೂಲಕ ಅವರ ಆರ್ಥಿಕ ಸುಧಾರಣೆಗೆ ಉತ್ತೇಜನ ನೀಡುವುದಾಗಿದೆ." ಎಂದು ಘೋಷಣೆ ಮಾಡಿದರು. ಇದು ಬಾಬಾ ಸಾಹೇಬರ ಮೊದಲ ಸಂಘಟಿತ ಸಂಸ್ಥೆ. ಈ ಸಂಘಟನೆಯ ಮೂಲಕ ಮಾರ್ಚ್ ೨೦, ೧೯೨೭ರಲ್ಲಿ ಅಸ್ಪೃಶ್ಯರಿಗೆ ನಿಷೇಧಿಸಲಾಗಿದ್ದ ಚೌಡರ್ ಕರೆಯಿಂದ ನೀರು ತೆಗೆಯುವ ಚಳುವಳಿ ನಡೆಸಿದರು. ಈ ಚಳುವಳಿಯಲ್ಲಿ ಸವರ್ಣೀಯ ಹಿಂದುಗಳು ಅಸ್ಪೃಶ್ಯರ ಮೇಲೆ ಹಲ್ಲೆ ನಡೆಸಿದರು. ಆ ಸಂದರ್ಭದಲ್ಲಿ ಬಾಬಾ ಸಾಹೇಬರ ಮೇಲೂ ಹಲ್ಲೆ ನಡೆಸಿದರು. ಈ ಘಟನೆಯ ಮೂಲಕ ಬಾಬಾ ಸಾಹೇಬರು ಅಸ್ಪೃಶ್ಯರು ಹಿಂದುಗಳಲ್ಲ ಎಂಬ ಅಂಶವನ್ನು ಬ್ರಿಟೀಷರಿಗೆ ಮನವರಿಕೆ ಮಾಡಿಕೊಟ್ಟರು.

ಏಪ್ರಿಲ್ ೩, ೧೯೨೭ರಲ್ಲಿ ಬಹಿಷ್ಕೃತ ಭಾರತ ಪತ್ರಿಕೆಯನ್ನು ಪ್ರಾರಂಭಿಸಿದರು. ಡಿಸೆಂಬರ್, ೨೦, ೧೯೨೭ರಲ್ಲಿ ಜೀವವಿರೋಧಿ "ಮನುಸ್ಮೃತಿಯನ್ನು ಸುಟ್ಟರು. "ಭಾರತದ ಅಸ್ಪೃಶ್ಯರು ಹಿಂದುಗಳಲ್ಲ. ಮುಸ್ಲಿಮರು ಮತ್ತು ಕ್ರೈಸ್ತರಂತೆ ಅವರೊಂದು ಪ್ರತ್ಯೇಕ ಜನಾಂಗ. ಆದ್ದರಿಂದ ೧೯೦೯ರ ಕಾಯಿದೆಯಲ್ಲಿ ಮುಸ್ಲಿಮರಿಗೆ ನೀಡಿರುವಂತೆ ಅಸ್ಪೃಶ್ಯರಿಗೂ ಪ್ರತ್ಯೇಕ ಚುನಾಯಕಗಳನ್ನು ನೀಡಬೇಕು" ಎಂದು ಮೇ ೧೯೨೮ ರಂದು ಸೈಮನ್ ಆಯೋಗದ ಮುಂದೆ ವಾದಿಸಿದರು. ಮಾರ್ಚ್, ೧೯೩೦ರಲ್ಲಿ ನಾಸಿಕ್‌ನಲ್ಲಿರುವ ಕಾಲಾರಾಂ ದೇವಸ್ಥಾನ ಪ್ರವೇಶ ಚಳುವಳಿ ನಡೆಸಿದರು. ಇದೇ ಸಂದರ್ಭದಲ್ಲಿ ಬಾಬಾಸಾಹೇಬರು 'ಜನತಾ' ಪತ್ರಿಕೆಯನ್ನು ಪ್ರಾರಂಭಿಸಿದರು.

೧೯೩೦-೩೧ರಲ್ಲಿ ಲಂಡನ್‌ನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ ಡಾ. ಅಂಬೇಡ್ಕರ್, ಅಸ್ಪೃಶ್ಯರ ಮತ್ತು ಹಿಂದುಳಿದ ಜಾತಿಗಳ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ವಾದ ಮಾಡಿದರು. ಅಸ್ಪೃಶ್ಯ ಮತ್ತು ಹಿಂದುಳಿದ ಜಾತಿಗಳಿಗೆ ಪ್ರತ್ಯೇಕ ಚುನಾಯಕಗಳನ್ನು ನೀಡಬೇಕೆಂಬ ಬಾಬಾ ಸಾಹೇಬರ ಒತ್ತಾಯವನ್ನು ಗಾಂಧೀ ವಿರೋಧಿಸಿದರು. ಇವರಿಗೆ ಪ್ರತ್ಯೇಕ ಚುನಾಯಕಗಳನ್ನು ನೀಡಿದರೆ ಹಿಂದೂ ಸಮಾಜ ಒಡೆದು ಹೋಗುತ್ತದೆಂದು ವಾದ ಮಾಡಿದರು. ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಗಳು ಎಲ್ಲಾ ರೀತಿಯಿಂದಲೂ ಹಿಂದೂಗಳಿಂದ ಪ್ರತ್ಯೇಕವಾಗಿಯೇ ಬದುಕುತ್ತಿರುವುದರಿಂದ ಹಿಂದೂ ಧರ್ಮ ಒಡೆದು ಹೋಗುತ್ತದೆಂಬವಾದ ಅರ್ಥವಿಲ್ಲದ್ದು ಎಂಬುದಾಗಿ ಬಾಬಾಸಾಹೇಬರು ವಾದ ಮಾಡುತ್ತಾರೆ. ಹಿಂದುಳಿದ ಜಾತಿಗಳ ನಾಯಕರು

ಇಲ್ಲದಿರುವುದರಿಂದ ಅವರ ಪರವಾಗಿ ಅಂಬೇಡ್ಕರ್ ವಾದಿಸುವುದನ್ನು ತಡೆದ ಗಾಂಧಿ, ಅಂಬೇಡ್ಕರರನ್ನು ಅಸ್ಪೃಶ್ಯರಿಗೆ ಮಾತ್ರ ಸೀಮಿತಗೊಳ್ಳುವಂತೆ ಮಾಡಿ, ಕಡೆಗೆ ಹಿಂದುಳಿದ ಜಾತಿಗಳಿಗೆ ಯಾವುದೇ ಹಕ್ಕು ಸಿಗದಂತೆ ಮಾಡಿದರು. ಬಾಬಾ ಸಾಹೇಬರ ವಾದವನ್ನು ಗೌರವಿಸಿ ಬ್ರಿಟಿಷ್ ಸರ್ಕಾರವು, ಆಗಸ್ಟ್ ೧೭, ೧೯೩೨ರಂದು ಒಂದು ಆದೇಶ ಹೊರಡಿಸಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಕಗಳ ಬದಲು ವಿಶೇಷ ಚುನಾಯಕಗಳನ್ನು ನೀಡಿದರು.

ವಿಶೇಷ ಚುನಾಯಕಗಳ ಪ್ರಕಾರ ಅಸ್ಪೃಶ್ಯರಿಗೆ ಎರಡು ಓಟುಗಳು. ಒಂದು ಪ್ರತ್ಯೇಕ ಚುನಾಯಕಗಳ ಮೂಲಕ ತಮ್ಮ ಪ್ರತಿನಿಧಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುವುದು ಮತ್ತೊಂದನ್ನು ಸಾಮಾನ್ಯ ಕ್ಷೇತ್ರದಲ್ಲಿ ಬರುವ ಸಾಮಾನ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಚಲಾಯಿಸುವುದು, ಗಾಂಧಿ ಮತ್ತು ಡಾ. ಅಂಬೇಡ್ಕರ್ ಇಬ್ಬರ ಆಸೆಗಳನ್ನು ಪೂರೈಸುವುದು ಬ್ರಿಟೀಷರ ಉದ್ದೇಶವಾಗಿತ್ತು. ಆದರೆ ಇದನ್ನು ವಿರೋಧಿಸಿ ಸೆಪ್ಟೆಂಬರ್ ೨೦, ೧೯೩೨ ರಂದು ಎಂ.ಕೆ. ಗಾಂಧಿಯವರ ಅಸ್ಪೃಶ್ಯರ ವಿಶೇಷ ಚುನಾಯಕಗಳ ವಿರುದ್ಧ ಯರವಾಡ ಜೈಲಿನಲ್ಲಿ ಅಮರಣಾಂತ ಉಪವಾಸ ಆರಂಭಿಸಿದರು. ಆ ಸಂದರ್ಭದಲ್ಲಿ ಬಾಬಾ ಸಾಹೇಬರ ವಿರುದ್ಧ ಬಂದಂತಹ ವಿಚಿತ್ರ ಸನ್ನಿವೇಶ ಹಾಗೂ ಅಸಮಾನ್ಯ ಒತ್ತಡಗಳಿಂದಾಗಿ ಸೆಪ್ಟೆಂಬರ್ ೨೪, ೧೯೩೨ರಂದು ಗಾಂಧಿ ಮತ್ತು ಬಾಬಾ ಸಾಹೇಬರ ನಡುವೆ ಒಂದು ಒಡಂಬಡಿಕೆ ಆಯಿತು. ಅದುವೇ 'ಪೂನಾ ಒಡಂಬಡಿಕೆ'

ಪೂನಾ ಒಡಂಬಡಿಕೆಯಂತೆ ಅಸ್ಪೃಶ್ಯರಿಗೆ ಜಂಟಿ ಚುನಾಯಕಗಳು ಜಾರಿಯಾದವು. ೭೮ ಸ್ಥಾನಗಳ ಬದಲು ೧೫೧ ಮೀಸಲು ಕ್ಷೇತ್ರಗಳು ಜಾರಿಯಾದವು. ಅಸ್ಪೃಶ್ಯರಿಗೆ ಸ್ವತಂತ್ರ ರಾಜಕೀಯ ಶಕ್ತಿಯನ್ನು ಗಳಿಸಿಕೊಡಬೇಕೆಂದುಕೊಂಡಿದ್ದ ಬಾಬಾ ಸಾಹೇಬರ ಕನಸು ಗಾಂಧಿ ಮತ್ತು ಕಾಂಗ್ರೆಸ್ಸಿಗರ ಕುತಂತ್ರದಿಂದಾಗಿ ನುಚುನೂರಾಯಿತು. ಮನುವಾದಿ ಕತ್ತಲಯುಗದಿಂದ ಮಾನವತಾವಾದಿ ಬೆಳಕಿನ ಯುಗಕ್ಕೆ ಚಲಿಸುತ್ತಲಿದ್ದ ಸಾಮಾಜಿಕ ಪರಿವರ್ತನೆಯ ಚಳುವಳಿಯು ಪೂನಾ ಒಡಂಬಡಿಕೆಯಿಂದಾಗಿ ಚಮಚಾಯುಗಕ್ಕೆ ತಳ್ಳಲ್ಪಟ್ಟಿತು. ಇದರಿಂದ ಫುಲೆ-ಅಂಬೇಡ್ಕರ್‌ವಾದಿ ಚಳುವಳಿಗೆ ಭಾರಿ ಹಿನ್ನಡೆ ಉಂಟಾಯಿತು. ಅಸ್ಪೃಶ್ಯಸಮುದಾಯಗಳ ನಡುವೆ ಹುಟ್ಟಿಕೊಂಡ ಗಣ್ಯ ಹಾಗೂ ಬುದ್ಧಿವಂತರನ್ನು ಸಾಮಾನ್ಯ ಜನತೆಯಿಂದ ದೂರಮಾಡಲಾಯಿತು.

೧೯೩೫ರ ಭಾರತದ ಕಾಯಿದೆಯಲ್ಲಿ ಅಸ್ಪೃಶ್ಯರಿಗೆ ವಯಸ್ಕ ಮತದಾನ, ಜಂಟಿ ಚುನಾಯಕಗಳ ಮೀಸಲು ಕ್ಷೇತ್ರಗಳು, ಸರ್ಕಾರಿ ನೌಕರಿಯಲ್ಲಿ ಮೀಸಲಾತಿ, ಅಸ್ಪೃಶ್ಯತಾ ನಿಷೇದ

ಕಾಯಿದೆ, ಸಾಮಾಜಿಕ ಬಹಿಷ್ಕಾರ ನಿಷೇಧ ಮುಂತಾದ ಕಾಯಿದೆಗಳು ಜಾರಿಯಾದವು. ವಯಸ್ಕ ಮತದಾನ ಪದ್ಧತಿ ಜಾರಿಗೆಯಾದದ್ದರಿಂದ ಶೂದ್ರ ಅತಿಶೂದ್ರರನ್ನು ಕಾಂಗ್ರೆಸ್‌ಗೆ ಪರ್ಯಾಯವಾದ ಒಂದು ರಾಜಕೀಯ ಶಕ್ತಿಯಾಗಿ ಸಂಘಟಿಸಲು ಉದ್ದೇಶದಿಂದ ಸ್ವತಂತ್ರಕಾರ್ಮಿಕ ಪಕ್ಷಸ್ಥಾಪಿಸಿದರು. ಸಾರ್ವತ್ರಿಕ ಚುನಾವಣೆಯಲ್ಲಿ ಬಾಬಾಸಾಹೇಬರ ಸ್ವತಂತ್ರ ಕಾರ್ಮಿಕ ಪಕ್ಷವು ೧೫೧ ಮೀಸಲು ಕ್ಷೇತ್ರಗಳಲ್ಲಿ ಬಾಂಬೆ ಪ್ರಾಂತ್ಯದಿಂದ ಕೇವಲ ೧೭ ಸ್ಥಾನಗಳಿಗೆ ಸ್ಪರ್ಧಿಸಿ ೧೫ ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ೭೮ ಕಡೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದರು. ಶಾಸನ ಸಭೆಯಲ್ಲಿ ಬಾಬಾಸಾಹೇಬರು ಮಂಡಿಸಿದ ಎಲ್ಲಾ ಮಸೂದೆಗಳನ್ನು ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಚಮಚಾಗಳು ವಿರೋಧಿಸುತ್ತಿದ್ದರು. ಇದನ್ನೆಲ್ಲ ಕಂಡ ಬಾಬಾಸಾಹೇಬರು "ಅಸ್ಪೃಶ್ಯ ನಾಯಕರೆಲ್ಲರೂ ಮೂಗುದಾರ ಹಾಕಿದ ಎತ್ತುಗಳ ಹಾಗೆ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ಶಾಸನ ಸಭೆಗಳಲ್ಲಿ ಅಸ್ಪೃಶ್ಯರಿಗೆ ಸ್ಥಾನ ಬೇಕೆಂದು ಹೋರಾಡಿದ ಮುಖ್ಯ ಉದ್ದೇಶವೇನೆಂದರೆ ಅಸ್ಪೃಶ್ಯರಿಗೆ ಆಗುತ್ತಿರುವ ಅನ್ಯಾಯಗಳನ್ನು ಶಾಸನ ಸಭೆಗಳಲ್ಲಿ ಪ್ರತಿಭಟಿಸಿ ಪರಿಹಾರ ಪಡೆಯುವುದಾಗಿತ್ತು. ಇಂತಹ ಮಹತ್ತರ ಉದ್ದೇಶವನ್ನು ಗಾಂಧಿ ಮತ್ತು ಕಾಂಗ್ರೆಸ್‌ನವರು ವಿಫಲಗೊಳಿಸಿದರು" ಎಂದು ಕೊರಗಿದರು. ಪ್ರತ್ಯೇಕ ಚುನಾಯಕಗಳನ್ನು ಕಳೆದುಕೊಂಡ ಬಾಬಾಸಾಹೇಬರು ಅಸ್ಪೃಶ್ಯರನ್ನು ಸವರ್ಣೀಯರ ದಬ್ಬಾಳಿಕೆಯಿಂದ ಬಿಡುಗಡೆಗೊಳಿಸಲು ೧೯೪೨ರಲ್ಲಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಹಳ್ಳಿಗಳನ್ನು ನಿರ್ಮಾಣ ಮಾಡಲು ಬ್ರಿಟೀಷರಿಗೆ ಒತ್ತಾಯಿಸಿದರು. ಆದರೆ ಬ್ರಿಟೀಷರು ಭಾರತ ಬಿಟ್ಟು ಹೋಗುವ ತೀರ್ಮಾನಕ್ಕೆ ಬಂದಿದ್ದರಿಂದ ಈ ಆಸೆಯೂ ಸಹ ಕೈಗೂಡಲಿಲ್ಲ. ಪರಿಶಿಷ್ಟ ಜಾತಿಗಳನ್ನು ಒಂದು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಲು ೧೯೪೨ರಲ್ಲಿ" ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ" ಎಂಬ ರಾಜಕೀಯ ಪಕ್ಷವನ್ನು ಸ್ಥಾಪನೆ ಮಾಡಿದರು. ಕಾಂಗ್ರೆಸ್ ಮತ್ತು ಗಾಂಧಿಯ ಡೋಂಗಿತನವನ್ನು ಬಯಲು ಮಾಡಲು ೧೯೪೪ರ ಜೂನ್‌ನಲ್ಲಿ "ಅಸ್ಪೃಶ್ಯರಿಗೆ ಗಾಂಧಿ ಮತ್ತು ಕಾಂಗ್ರೆಸ್ ಏನು ಮಾಡಿದೆ? ಎಂಬ ಪುಸ್ತಕವನ್ನು ಪ್ರಕಟಿಸಿದರು. ಆದರೂ ಅಸ್ಪೃಶ್ಯರು ಗಾಂಧಿ ಮತ್ತು ಕಾಂಗ್ರೆಸ್‌ನ ಕುತಂತ್ರಗಳನ್ನು ಅರ್ಥಮಾಡಿಕೊಳ್ಳಲೇ ಇಲ್ಲ.

ಎರಡನೇ ಜಾಗತಿಕ ಮಹಾಯುದ್ಧದಲ್ಲಿ ಸೋತಿದ್ದ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡುವ ತೀರ್ಮಾನ ಕೈಗೊಂಡು ೧೯೪೬ರಲ್ಲಿ ಸಂವಿಧಾನ ರಚನಾ ಸಮಿತಿಗೆ ಚುನಾವಣೆ ನಡೆಸಲು ನಿರ್ಧರಿಸಿದರು. ಡಾ. ಅಂಬೇಡ್ಕರ್ ಯಾವ ಕಾರಣಕ್ಕೂ ಸಂವಿಧಾನರಚನಾ ಸಮಿತಿಗೆ ಆಯ್ಕೆಯಾಗಬಾರದೆಂದು ಕಾಂಗ್ರೆಸ್ಸಿಗರು ತೀರ್ಮಾನಿಸಿ ಅನೇಕ ರೀತಿಯ ಷಡ್ಯಂತ್ರಗಳನ್ನು

ರೂಪಿಸಿದರು. ಕಾಂಗ್ರೆಸ್ ವಿರೋಧದ ನಡುವೆ ಪಶ್ಚಿಮ ಬಂಗಾಳದ ಚಂಡಾಲರು ಬಾಬಾಸಾಹೇಬರನ್ನು ಜೈಸೂರ್ ಮತ್ತು ಖುಲ್ನಾ ಕ್ಷೇತ್ರದಿಂದ ಆಯ್ಕೆಮಾಡಿ ಸಂವಿಧಾನ ರಚನಾ ಸಮಿತಿಗೆ ಕಳುಹಿಸಿದರು. ಇದರಿಂದ ಹತಾಶರಾದ ಕಾಂಗ್ರೆಸ್ಸಿಗರು ಭಾರತ – ಪಾಕಿಸ್ಥಾನ ವಿಭಜನೆಯ ಸಂದರ್ಭದಲ್ಲಿ ಬಾಬಾಸಾಹೇಬರು ಆಯ್ಕೆಯಾಗಿದ್ದ ಇಡೀ ಪ್ರದೇಶವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಟ್ಟರು. ಇದರ ಪರಿಣಾಮವಾಗಿ ಬಾಬಾಸಾಹೇಬರ ಸದಸ್ಯತ್ವ ರದ್ದಾಯಿತು. ಇದರಿಂದ ರೋಷಗೊಂಡ ಬಾಬಾಸಾಹೇಬರು ಲಂಡನ್‌ಗೆ ಪ್ರಯಾಣ ಬೆಳೆಸಿ ಬ್ರಿಟನ್ ಪ್ರಧಾನಿಗಳನ್ನು ಭೇಟಿಮಾಡಿ ೧೯೩೫ರ ಕಾಯಿದೆಯಲ್ಲಿ ಜಾರಿಯಾಗಿರುವ ಅಸ್ಪೃಶ್ಯರ ಸಾಮಾಜಿಕ–ರಾಜಕೀಯ ಹಕ್ಕುಗಳನ್ನು ಸಂರಕ್ಷಿಸಬೇಕಾದರೆ ನಾನು ಸಂವಿಧಾನ ರಚನಾ ಸಮಿತಿಗೆ ಆಯ್ಕೆಯಾಗಲೇಬೇಕು. ಇದಕ್ಕೆ ನೀವು ನನಗೆ ಸಹಾಯ ಮಾಡಲೇಬೇಕು ಎಂದು ಒತ್ತಾಯಿಸಿದರು. ಅಸ್ಪೃಶ್ಯರ ಸಮಸ್ಯೆ ಮತ್ತು ಬಾಬಾ ಸಾಹೇಬರ ಪ್ರತಿಭೆಯನ್ನು ಬಲ್ಲ ಬ್ರಿಟೀಷರು ಕಾಂಗ್ರೆಸ್ಸಿಗರ ಮೇಲೆ ತೀವ್ರತರವಾದ ಒತ್ತಡ ಹೇರಿದರು. ಇದರ ಪರಿಣಾಮವಾಗಿ ಕಾಂಗ್ರೆಸ್ಸಿಗರು ಅನಿವಾರ್ಯವಾಗಿ ಜೂಲೈ ೯, ೧೯೪೭ರಲ್ಲಿ ಕಾಂಗ್ರೆಸ್ ಪೂನಾ ಕ್ಷೇತ್ರವನ್ನು ತೆರವುಗೊಳಿಸಿ, ಬಾಬಾ ಸಾಹೇಬರು ಸಂವಿಧಾನ ರಚನಾ ಸಮಿತಿಗೆ ಆಯ್ಕೆಯಾದ ನಂತರ ಅವರನ್ನು ಸಂವಿಧಾನ ಕರಡು ಸಮಿತಿಗೆ ಅಧ್ಯಕ್ಷರಾಗಿ ಮಾಡುತ್ತಾರೆ. ಜುಲೈ ೧೦ ರಂದು ಬ್ರಿಟಿಷರು ಭಾರತವನ್ನು ತೊರೆಯುವ ನಿರ್ಧಾರವನ್ನು ಪ್ರಕಟಿಸಿದರು. ಒಲ್ಲದ ಮನಸ್ಸಿನಿಂದ ಬಾಬಾಸಾಹೇಬರು ಸ್ವತಂತ್ರ ಭಾರತದ ಪ್ರಥಮ ಕಾನೂನುಮಂತ್ರಿಯಾಗಿಯೂ ನೇಮಕಗೊಂಡರು.

೧೯೪೭ರಲ್ಲಿ ಬ್ರಿಟೀಷರು ಭಾರತ ಬಿಟ್ಟು ಹೋದ ಮೇಲೆ ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ಶಕ್ತಿಯನ್ನು ಸೃಷ್ಟಿ ಮಾಡುವ ದಿಕ್ಕಿನಲ್ಲಿ ಬಾಬಾಸಾಹೇಬರು ಆಲೋಚನೆ ಮಾಡಿದರು. ಏಪ್ರಿಲ್ ೨೫, ೧೯೪೮ರಂದು 'ಲಕ್ನೋದಲ್ಲಿ ನಡೆದ ಪರಿಶಿಷ್ಟಜಾತಿಗಳ ಒಕ್ಕೂಟದ ಸಮ್ಮೇಳನದಲ್ಲಿ "ಪರಿಶಿಷ್ಟಜಾತಿಗಳು ಮತ್ತು ಹಿಂದುಳಿದ ಜಾತಿಗಳು ಒಂದು ರಾಜಕೀಯ ಶಕ್ತಿಯಾದರೆ ಈ ದೇಶದ ಅಧಿಕಾರ ನಿಮ್ಮ ಕೈಗೆ ಬರುತ್ತದೆ" ಎಂದರು. ಜನವರಿ ೨೬, ೧೯೫೦ರಲ್ಲಿ ಎರಡು ಸಾವಿರ ವರ್ಷಗಳ ಮನುಧರ್ಮಶಾಸ್ತ್ರಕ್ಕೆ ತದ್ವಿರುದ್ಧವಾದ ಮಾನವತಾ ಸಂವಿಧಾನವನ್ನು ದೇಶಕ್ಕೆ ಅರ್ಪಿಸಿ "ನಮಗೆ ಇಂದಿನಿಂದ ರಾಜಕೀಯ ಸಮಾನತೆ ದೊರಕಿದೆ. ಆದರೆ ಸಾಮಾಜಿಕ–ಆರ್ಥಿಕ ಅಸಮಾನತೆ ಇನ್ನೂ ಇದೆ. ಆದಷ್ಟು ಬೇಗ ಅಸಮಾನತೆಯನ್ನು ಬಗೆಹರಿಸದಿದ್ದರೆ, ಅಸಮಾನತೆಗೆ ಒಳಗಾದ ಜನ ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಧ್ವಂಸ

ಮಾಡುತ್ತಾರೆ." ಎಂಬ ಎಚ್ಚರಿಕೆ ನೀಡಿದರು. ಆದರೆ ಈ ಎಚ್ಚರಿಕೆಯನ್ನು ಆಳುವ ವರ್ಗಗಳಾಗಲಿ ಅಥವಾ ಶೋಷಿತ ವರ್ಗಗಳಾಗಲಿ ಅರ್ಥ ಮಾಡಿಕೊಳ್ಳಲೇ ಇಲ್ಲ.

ಮಂತ್ರಿ ಪದವಿಗೆ ರಾಜಿನಾಮೆ

ನೆಹರೂ ಸರ್ಕಾರವು ಹಿಂದುಳಿದ ಜಾತಿಗಳ ಮೀಸಲಾತಿಗೆ ವಿರುದ್ಧವಾಗಿದೆ. ಕಾಶ್ಮೀರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರಕ್ಕೆ ಆಸಕ್ತಿ ಇಲ್ಲ ಮತ್ತು ನನಗೆ ಹಣಕಾಸು ಮತ್ತು ಯೋಜನಾ ಖಾತೆ ನೀಡಲು ನಿರಾಕರಿಸಿದೆ, ಮಹಿಳೆಯರಿಗೆ ಹಕ್ಕು ಬಾಧ್ಯತೆ ನೀಡುವ ಹಿಂದೂ ಕೋಡ್ ಮಸೂದೆಯನ್ನು ವಿರೋಧಿಸುತ್ತದೆ ಎಂದು ಪ್ರತಿಭಟಿಸಿ, ಬಾಬಾ ಸಾಹೇಬರು ಸೆಪ್ಟೆಂಬರ್ ೨೯, ೧೯೫೧ರಲ್ಲಿ ಕಾನೂನು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟರು. ೧೯೫೨ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ಮತ್ತು ೧೯೫೪ರಲ್ಲಿ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಬಾಬಸಾಹೇಬರ ವಿರುದ್ಧ ಸಾಧಾರಣಾ ಅಭ್ಯರ್ಥಿಗಳನ್ನು ನಿಲ್ಲಿಸಿ ಬಾಬಾ ಸಾಹೇಬರನ್ನು ಸೋಲಿಸಿತು. ಇದೇ ಚಮಚಾ ರಾಜಕಾರಣದ ಪರಿಣಾಮ. ಇಷ್ಟೆಲ್ಲಾ ಮಾನಸಿಕ ಆಘಾತಗಳ ನಡುವೆಯೂ ಪ್ರಬುದ್ಧ ಭಾರತದ ಕನಸು ಹೊತ್ತ ಬಾಬಾಸಾಹೇಬರು ೧೯೫೫ರಲ್ಲಿ ಪ್ರಬುದ್ಧ ಭಾರತ ಪತ್ರಿಕೆಯನ್ನು ಪ್ರಾರಂಭಿಸಿದರು. ೧೯೫೬ರಲ್ಲಿ ತಮ್ಮ ಐದು ಲಕ್ಷ ಅನುಯಾಯಿಗಳೊಡನೆ ಬಾಬಾಸಾಹೇಬರು ಬೌದ್ಧ ಧರ್ಮ ಸ್ವೀಕಾರ ಮಾಡಿದರು. ಡಿಸೆಂಬರ್ ೫ರ ರಾತ್ರಿ ಬುದ್ಧ ಮತ್ತು ಆತನ ಧರ್ಮ ಗ್ರಂಥವನ್ನು ಬಹುಜನ ಸಮಾಜಕ್ಕೆ ಕೊಡುಗೆ ನೀಡಿದರು. ನನ್ನ ಜನ ಈ ದೇಶದ ಆಳುವ ದೊರೆಗಳಾಗಬೇಕು ಎಂದ ಬಾಬಾ ಸಾಹೇಬರ ಪವಿತ್ರ ಚೇತನವು ಡಿಸೆಂಬರ್ ೬, ೧೯೫೬ರ ಮುಂಜಾನೆ ದೇಹಬಿಟ್ಟು ಅಗಲಿತ್ತು. ಬಹುಜನ ಸಮಾಜದ ಕೋಟಿ ಕೋಟಿ ಜನತೆ ಬಾಬಾಸಾಹೇಬರ ದೇಹದ ಮುಂದೆ ತಬ್ಬಲಿಯಾಗಿ ನಿಂತರು.

ಸಿದ್ಧಲಿಂಗಯ್ಯನವರ ಕಾವ್ಯ, ನಾಟಕಗಳ ಮೇಲೆ ಅಂಬೇಡ್ಕರ್‌ರ ಚಿಂತನೆಗಳ ಪ್ರಭಾವ

ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಮಹನೀಯರು ಹಮ್ಮಿಕೊಂಡ ಚಳುವಳಿಗೆ ಮೂಲ ಕಾರಣ ಅಸಮಾನತೆ. ಈ ಅಸಮಾನತೆಯನ್ನು ಬೇರು ಸಹಿತ ಕೀಳಬೇಕೆಂದು ಅಂಬೇಡ್ಕರ್ ಪ್ರಯತ್ನಿಸಿದರು. ಅಂಬೇಡ್ಕರ್ ರವರು ತಾವು ಸ್ವತಃ ಮತಾಂತರ ವಾಗುವ ಮೂಲಕ ಹಿಂದೂ ಧರ್ಮ ಎಂಬುವುದು ಉರಿಯುತ್ತಿರುವ ಮನೆಯಂತೆ ಅದರೊಳಗೆ ಹೆಚ್ಚು ಹೊತ್ತು ದಲಿತರು ಇದ್ದರೆ ಬೂದಿಯಾಗುತ್ತಾರೆ ಎಂದು ಹೇಳಿದರು. ಜಾತಿರಹಿತ ಸಮಾಜ ನಿರ್ಮಾಣ, ಸಮಾಜ ರಾಜ್ಯ,

ಶೋಷಿತರಿಗೆ ಅಧಿಕಾರ, ಸರ್ವರಿಗೂ ಸಂಪತ್ತಿನಲ್ಲಿ ಹಂಚಿಕೆ, ವಿದ್ಯೆವಂಚಿತರಿಗೆ ವಿದ್ಯಾಭ್ಯಾಸ ಇವುಗಳು ಅಂಬೇಡ್ಕರ್‌ರವರ ಚಿಂತನೆಗಳು

ಸಿದ್ಧಲಿಂಗಯ್ಯನವರು ಅಂಬೇಡ್ಕರ್‌ರವರ ಚಿಂತನೆಗಳನ್ನು ಚಿಕ್ಕವಯಸ್ಸಿನಲ್ಲಿಯೇ ಮೈಗೂಡಿಸಿಕೊಂಡರು. ಸಭೆ, ಸಮಾರಂಭಗಳಲ್ಲಿ ಅಂಬೇಡ್ಕರ್ ಕುರಿತು ಭಾಷಣಮಾಡುತ್ತಿದ್ದ ಸಿದ್ಧಲಿಂಗಯ್ಯನವರು ತಮ್ಮ ಸಾಹಿತ್ಯದಲ್ಲಿ ಅಂಬೇಡ್ಕರ್ ನಿಲುವುಗಳನ್ನು ಹೇಳಿದರು. ಪ್ರಸ್ತುತ ಸಂದರ್ಭದಲ್ಲಿ ಮತಾಂತರ ಬಹುದೊಡ್ಡ ಚರ್ಚೆಯ ವಿಷಯವಾಗಿದೆ. ಅಂಬೇಡ್ಕರ್ ಮತಾಂತರವನ್ನು ಶೋಷಣೆಯಿಂದ ಮುಕ್ತಿಗೊಳ್ಳಲು ಇರುವ ಅಸ್ತ್ರ ಎಂದು ಹೇಳುತ್ತಾರೆ.

ಜಾತಿ ಮತಗಳ ಮುಳ್ಳಿನ ಬೇಲಿಗೆ
ಮುಳ್ಳಾದರು ಇವರು
ತಮ್ಮನು ನುಂಗಿದ ಏಳು ಸಮುದ್ರಕೆ
ಮುಗಿಲಾದರು ಇವರು
ಹಿಂದೂ ಧರ್ಮಕ ಕೊರುದರು ದಲಿತರು
ಜಮೀನುದಾರರ ಬಿಡಲಿಲ್ಲ (ದಲಿತರು ಬರುವರು)

ಈ ಮೇಲಿನ ಸಾಲುಗಳು ಹಿಂದೂ ಧರ್ಮ ವೆಂಬುವುದು ಜಾತಿಮತಗಳ ಮುಳ್ಳಿನ ಮೆಳೆ. ಹಿಂದೂ ಧರ್ಮದಿಂದ ಮುಕ್ತರಾಗಿ ಸ್ವಾವಲಂಬನೆ ಮತ್ತು ಸ್ವಾಭಿಮಾನದಿಂದ ಬದುಕಬೇಕೆಂಬ ಆಶಯ ಮೂಡಿಬರುತ್ತದೆ. ಹಿಂದೂ ಧರ್ಮವು ಪುರೋಹಿತಶಾಹಿಯನ್ನು ಪ್ರೋತ್ಸಾಹಿಸುತ್ತದೆ. ಎಲ್ಲಾ ಸಾಧ್ಯತೆಗಳಿಗೂ ದೇವರೇ ಕಾರಣ ಎಂದು ಹೇಳುತ್ತದೆ. ಈ ದೇಶದ ಬಹುಸಂಖ್ಯಾತ ಸಮುದಾಯವು ಹಿಂದೂ ಧರ್ಮದ ಶೋಷಣೆ ಒಳಗಾಗಿದ್ದಾರೆ. ಆದುದರಿಂದ ಅಂಬೇಡ್ಕರ್‌ರವರು ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದರು.

ಅಂಬೇಡ್ಕರ್‌ರವರು ನನ್ನ ಜನರಾದ ಶೋಷಿತರು ಈ ದೇಶ ಆಳುವ ಜನರಾಗಬೇಕು ಎಂಬ ಆಸೆಯನ್ನು ಇಟ್ಟುಕೊಂಡಿದ್ದರು. ಈ ಮಾತುಗಳನ್ನು ಸಿದ್ಧಲಿಂಗಯ್ಯನವರು ತಮ್ಮ ಕವಿತೆಗಳಲ್ಲಿ ಹೇಳುತ್ತಾರೆ.

ದಲಿತರು ಬರುವರು ದಾರಿ ಬಿಡಿ
ದಲಿತರ ಕೈಗೆ ರಾಜ್ಯ ಕೊಡಿ(ದಲಿತರು ಬರುವರು)

ಇಪ್ಪತ್ತೊಂದನೇ ಶತಮಾನದಲ್ಲೂ ಕೂಡ ಅಂಬೇಡ್ಕರ್‌ರವರ ಶೋಷಿತರು ದೇಶ ಆಳುವ ಬಯಕೆ ಈಡೇರಲಿಲ್ಲ. ಮೇಲ್ಜಾತಿಯ ಪಕ್ಷಗಳಲ್ಲಿ ಶೋಷಿತರು ಗುಲಾಮರಾಗಿ ದುಡಿಯುತ್ತಾ ಅಂಬೇಡ್ಕರ್ ಚಿಂತನೆಗಳನ್ನು ಗಾಳಿಗೆ ತೂರಿದ್ದಾರೆ. ಈ ಮೇಲಿನ ಸಾಲುಗಳು ಅಂಬೇಡ್ಕರ್‌ರ ದೇಶ ಆಳುವ ಚಿಂತನಾ ಕ್ರಮವನ್ನು ರೂಪಿಸುತ್ತವೆ.

"ಅಂಬೇಡ್ಕರ್" ಎಂಬ ಕವಿತೆಯು ಅಂಬೇಡ್ಕರ್ ಬೆಳೆದು ಬಂದ ರೀತಿಯನ್ನು ಹೇಳುತ್ತದೆ. ಈ ದೇಶದ ದಲಿತರ ಬದುಕಿನ ಆಶಾ ಕಿರಣವಾದ ಅಂಬೇಡ್ಕರ್ ಅವರ ಹೋರಾಟ ಸಿದ್ಧಲಿಂಗಯ್ಯನವರಿಗೆ ಪ್ರೇರಣೆಯಾಗಿದೆ.

ಮಲಗಿದ್ದವರ ಕೂರಿಸಿದೆ
ನಿಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ? (ಅಂಬೇಡ್ಕರ್)

ಈ ಮೇಲಿನ ಸಾಲುಗಳು ಸಿದ್ಧಲಿಂಗಯ್ಯನವರಲ್ಲಿ ನಿರಾಶವಾದಿ ನೆಲೆಯನ್ನು ಹೇಳುತ್ತವೆ. ಮತ್ತೆ ಶೋಷಿತರಿಗೆ ಬದುಕು ನೀಡಲು ಹುಟ್ಟಿ ಬಾ ಎಂಬ ಪರಿಕಲ್ಪನೆಯನ್ನು ಮೂಡಿಸುತ್ತವೆ. ಈ ಕವಿತೆಯಲ್ಲಿ ಅಂಬೇಡ್ಕರ್ ಹಿಂದೂ ಧರ್ಮವೆಂಬ ಕಪ್ಪುಕ್ಕಿನ ಕೋಳಗಳನ್ನು ಕಡಿದು ಎಸೆದ ವಜ್ರವಾಗಿ ಮೂಡಿಬಂದಿದ್ದಾರೆ. ಬೌದ್ಧ ಧರ್ಮವೆಂಬುವುದು ಬಂಗಾರದ ಕೋಳ ಇದ್ದಂತೆ ಎಂದು ಹೇಳಿದ್ದಾರೆ. ಅಂಬೇಡ್ಕರ್ ಅವರು ಶ್ರೇಣಿಕೃತ ಮನುವಾದಿ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದುದು ಅರ್ಥಪೂರ್ಣವಾಗಿದೆ. ಅಂಬೇಡ್ಕರ್‌ರವರು ಬೌದ್ಧಧರ್ಮ ಸ್ವೀಕರಿಸಿ ದ್ದು ಪ್ರಸ್ತುತ ಸಂದರ್ಭದಲ್ಲಿ ಮುಖ್ಯವಾಗಿದೆ. ದಲಿತರು ಇವರನ್ನು ಅನುಸರಿಸಿ ಶೋಷಣೆಯಿಂದ ಮುಕ್ತಗೊಳಿಸುವತ್ತ ಸಾಗುತ್ತಿದ್ದಾರೆ.

ಅಂಬೇಡ್ಕರ್‌ರವರಿಗೆ ದೇಶ ಸ್ವಾತಂತ್ರ್ಯಕ್ಕಿಂತ ಮುಖ್ಯವಾಗಿ ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾಗಿತ್ತು. ವ್ಯಕ್ತಿ ಸ್ವಾತಂತ್ರ್ಯ ಪಡೆದರೆ, ದೇಶ ಸ್ವಾತಂತ್ರ್ಯವು ತಾನಾಗಿಯೆ ಬರುತ್ತದೆ ಎಂಬುವುದು ಅಂಬೇಡ್ಕರ್‌ರವರ ಚಿಂತನೆಯಾಗಿತ್ತು. ಬ್ರಿಟೀಷರಿಂದ ಪಡೆದ ಸ್ವಾತಂತ್ರ್ಯವು ಶೋಷಿತರಿಗೆ ಸಿಗುತ್ತದೆ ಎಂಬುವುದರಲ್ಲಿ ಅಂಬೇಡ್ಕರ್ ರವರಿಗೆ ನಂಬಿಕೆ ಇರಲಿಲ್ಲ. ಸಿದ್ಧಲಿಂಗಯ್ಯನವರ 'ನಲವತ್ತೇಳರ ಸ್ವಾತಂತ್ರ್ಯ' ಎಂಬ ಕವಿತೆಯು ಅಂಬೇಡ್ಕರ್‌ರವರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಪ್ರಸ್ತುತಗೊಳಿಸುತ್ತದೆ.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೇಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ (ನಲವತ್ತೇಳರ ಸ್ವಾತಂತ್ರ್ಯ)

ಈ ಮೇಲಿನ ಕವಿತೆ ಸ್ವಾತಂತ್ರ್ಯ ಎಂಬುವುದು ಬಂಡವಾಳಶಾಹಿಗಳ ಹಿಡಿತದಲ್ಲಿ ಪ್ರಕಾಶಿಸುತ್ತಿದೆ ಉಳ್ಳವರು ಶ್ರೀಮಂತರಾಗುತ್ತಾ ಮುಂದುವರೆಯುತ್ತಿದ್ದಾರೆ. ಸಾಮಾನ್ಯ ಜನ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಗುಲಾಮರಾಗಿ ಬದುಕುತ್ತಿದ್ದಾರೆ. ಸ್ವಾತಂತ್ರ್ಯವು ಸರಿಯಾದ ರೀತಿಯಲ್ಲಿ ಹಂಚಿಕೆಯಾಗದೆ ಅಸಮಾನತೆಯನ್ನು ಸೃಷ್ಟಿಸಿದೆ ಎಂಬುವುದನ್ನು ಹೇಳುತ್ತದೆ.

ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ (ನಲ್ವತ್ತೇಳರ ಸ್ವಾತಂತ್ರ್ಯ)

ಸರ್ವ ಸಮಾನತೆಯ ಸಮಾಜವನ್ನು ನಿರ್ಮಿಸುವುದು ಅಂಬೇಡ್ಕರ್‌ರವರ ಆಶಯವಾಗಿತ್ತು. ಆದರೆ ನಲ್ವತ್ತೇಳರ ಸ್ವಾತಂತ್ರ್ಯ ಶೋಷಿತರ ನಿಲುವುಗಳನ್ನು ಭದ್ರಪಡಿಸದೆ ಉಳ್ಳವರ ಪಾಲಿನ ಪಕ್ಷವಾಗಿದೆ. ಸಮಾನತೆಯ ಹೂವನ್ನು ಅರಳಿಸಬೇಕಾಗಿದ್ದ ಸ್ವಾತಂತ್ರ್ಯವೂ ಜಾತಿಗೋಡೆಗಳನ್ನು ನಿರ್ಮಾಣ ಮಾಡುತ್ತಿರುವುದು ದೊಡ್ಡ ದುರಂತವಾಗಿದೆ. ಸ್ವಾತಂತ್ರ್ಯದ ಸಂಪೂರ್ಣ ಲಾಭವನ್ನು ಪಡೆಯುತ್ತಿರುವ ಈ ದೇಶದ ಅಲ್ಪಸಂಖ್ಯಾತ ಮನುವಾದಿಗಳು ಶೋಷಿತರನ್ನು ನಿರ್ಲಕ್ಷಿಸಿರುವುದು ಈ ಕವಿತೆ ಯಿಂದ ತಿಳಿದು ಬರುತ್ತದೆ.

ಬಾಬಾ ಸಾಹೇಬರ ಜೀವನದ ಮಹತ್ವಾಕಾಂಕ್ಷೆಯೆಂದರೆ ದಲಿತರು ರಾಜಕೀಯ ಅಧಿಕಾರವನ್ನು ಪಡೆಯಬೇಕೆನ್ನುವುದು. ಅವರ ಎಲ್ಲ ಚಟುವಟಿಕೆಗಳ ಹಿಂದೆ ಶೋಷಿತರ ನಿಲುವುಗಳು ಸಾಕಾರವಾಗಬೇಕೆಂಬ ಆಸೆಯಿತ್ತು. ಆದರೆ ದಲಿತರು ಕೇವಲ ಅನಕ್ಷರಸ್ಥರಷ್ಟೆ ಆಗಿರಲಿಲ್ಲ. ಮೌಢ್ಯದ ಕಪಿಮುಷ್ಟಿಯಲ್ಲಿ ಸಿಕ್ಕಿ ನರಳುತ್ತಿದ್ದರು. ಅಷ್ಟೇ ಅಲ್ಲ, ದಲಿತ ನಮ್ಮ ಈ ಸ್ಥಿತಿಗೆ ನಾವೇ ಕಾರಣ ನಾವು

ಹಿಂದಿನ ಜನ್ಮದಲ್ಲಿ ಮಾಡಿದ ತಪ್ಪಿಗೆ ಈ ಜನ್ಮದಲ್ಲಿ ಶೋಷಿತರಾಗಿ ಜನಿಸಿದ್ದೇವೆ ಎಂಬ ಮೌಢ್ಯ ಬೇರೂರಿದೆ. ಸ್ವಾಭಿಮಾನ, ಆತ್ಮಗೌರವ, ಸಮಾನತೆ ಇಂಥ ವಿಷಯಗಳಾವುವೂ ಅವರ ಹತ್ತಿರ ಸುಳಿಯುತ್ತಿರಲಿಲ್ಲ. ಅಂಥ ಜನರಿಗೆ ರಾಜಕೀಯ ಅಧಿಕಾರ ದಕ್ಕಿಸುವುದು ಕನಸಿನ ಮಾತಾಗಿತ್ತು. ಆದರೂ ಅಂಬೇಡ್ಕರ್ ಅದರ ಬಗ್ಗೆ ಕನಸು ಕಟ್ಟಿಕೊಂಡಿದ್ದರು. ಡಾ. ಸಿದ್ಧಲಿಂಗಯ್ಯನವರು ಅಂಬೇಡ್ಕರ್‌ರವರ ಈ ಕನಸನ್ನು ತಮ್ಮ ಸಾಹಿತ್ಯದಲ್ಲಿ ಸೇರಿಸಿಕೊಂಡರು. ದಲಿತ ಚಳುವಳಿಯ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಹಾಡುಗಳು ಪ್ರತಿಯೊಬ್ಬರ ಬಾಯಲ್ಲಿ ಜಾನಪದ ಗೀತೆಯಂತೆ ಮೈದಳೆದು ನಿಂತಿದ್ದವು. ಪ್ರತಿಯೊಬ್ಬರು ಕೂಡ ತಮ್ಮ ಕಂಠಪೂರ್ತಿ ಕೂಗಿ ಕೂಗಿ ಹಾಡು ಹೇಳುವ ಮೂಲಕ ನಮಗೂ ಕೂಡ ಅಧಿಕಾರಬೇಕೆಂಬ ಎಂಬ ಅಂಬೇಡ್ಕರ್ ಕನಸನ್ನು ಮತ್ತೆ ಮತ್ತೆ ಪ್ರಜ್ಞಾಪೂರ್ವಕವಾಗಿ ನೆನಪು ಮಾಡಿಕೊಳ್ಳುತ್ತಿದ್ದರು.

ಎಲ್ಲಾರು ದೇವ್ರಮಕ್ಕಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡ್ಂಗಾಡ್ತಾರೆ
ಹೋಟ್ಲು, ಬಾವಿ, ಮನೆ ಯಾವುದ್ಕೂ ಸೇರ್ಸಲ್ಲಲ್ರೊ
ನಮ್ ಎಲ್ ತಿನ್ನೋ ನಾಯ್ನ ಕ್ವಾಣೆ ವಳೀಕ್ ಬುಟ್‌ಕೊತ್ತಾರೆ.
ನಾವ್ ಬೆಳದಿದ್ದುಂತಾರೆ ನಾವ್ ದುಡಿದಿತ್ ತಗತ್ತಾರೆ
ನಾವ್ ಮಾತ್ರ ಬ್ಯಾಡ (ಒಂದು ಪದ)

ಈ ಮೇಲಿನ ಸಾಲುಗಳ ಸ್ಥಿತಿ ಇಂದಿಗೂ ಕೂಡ ಜೀವಂತವಾಗಿದೆ. ಸಾರ್ವಜನಿಕ ಪ್ರದೇಶಗಳಿಂದ ದಲಿತರು ದೂರವಾಗಿ ಬದುಕುತ್ತಿದ್ದಾರೆ ಅಂಬೇಡ್ಕರ್‌ರವರು, ಹಿಂದೂ ಧರ್ಮ

ಶಾಸ್ತ್ರವನ್ನು ಅಧ್ಯಯನಮಾಡಿ ಹಿಂದೂ ಧರ್ಮದಲ್ಲಿ ಅಸ್ಪೃಶ್ಯನೊಬ್ಬ ಮನುಷ್ಯವರ್ಗಕ್ಕೆ ಸೇರಿದವನಲ್ಲವೆಂಬ ಅನುಮಾನ ಮೂಡುತ್ತದೆ ಎಂದಿದ್ದಾರೆ. ಹಿಂದೂ ಧರ್ಮದಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ, ಸಹೋದರತೆಗೆ ಅವಕಾಶವಿಲ್ಲ. ಅದು ನಿಂತಿರುವುದು ಶ್ರೇಣೀಕೃತ ವ್ಯವಸ್ಥೆಯ ಮೇಲೆ, ಮನುಷ್ಯ ಮನುಷ್ಯರ ನಡುವೆ ದೊಡ್ಡ ಕಂದಕವೇ ಅಲ್ಲಿ ಇದೆ. ಅಂಬೇಡ್ಕರ್‌ರವರು ಕಲಾರಂ ದೇವಾಲಯ ಮತ್ತು ಚೌಡರ್ ಕೆರೆ ಪ್ರವೇಶದಂತಹ ದೊಡ್ಡ ದೊಡ್ಡ ಚಳುವಳಿಗಳನ್ನು ಮಾಡಿದರು. ಇವೆಲ್ಲ ಸಾರ್ವಜನಿಕ ಪ್ರದೇಶಗಳಾಗಿದ್ದು ನಾವು ಕೂಡ ಮನುಷ್ಯರೂ ನಮಗೆ ಪ್ರವೇಶ ನೀಡಿ ಎಂದು ಹೇಳಿದರು. ಈ ಹೋರಾಟ ಸಿದ್ಧಲಿಂಗಯ್ಯನವರ ಮೇಲೆ ಪ್ರಭಾವ ಬೀರಿದೆ.

ಅಂಬೇಡ್ಕರ್ ಅವರು ರಾಜಕೀಯ ಅಧಿಕಾರ ಹಿಡಿಯಬೇಕಾದರೆ ಈ ದೇಶದ ಬಹುಜನರಾದ ಶೋಷಿತರೆಲ್ಲ ಒಂದಾಗಿ ತಮ್ಮ ತಮ್ಮ ಜನರನ್ನು ಜಾಗೃಗೊಳಿಸಿಕೊಂಡು ಪ್ರಜಾಪ್ರಭುತ್ವದ ಆಧಾರದ ಮೇಲೆ ಹೋರಾಟ ಮಾಡಬೇಕಾಗುತ್ತದೆ ಎಂದಿದ್ದಾರೆ. ಶೋಷಿತರೆಲ್ಲ ಎಂದರೆ ದಲಿತರು, ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರು, ರೈತರು, ಕೂಲಿಕಾರ್ಮಿಕರು ಇತ್ಯಾದಿ.

ದಲಿತ ಭಾರತದ ಬಾವುಟದಲ್ಲಿ
ನಿಂತರು ರೈತರು ಕಾರ್ಮಿಕರು
ಬಿರಿದವು ಹೂವು ಬನಬನದಲ್ಲಿ
ಹಾರಿದೊ ಹಕ್ಕಿ ನೂರಾರು
ಕಂಡಿತು ಕೆಂಪು ಮೂಡಣದಲ್ಲಿ
ಬೆಳಗಾಯಿತು ಬಡವರಿಗೆ (ದಲಿತರು ಬರುವರು)

ಇಂದಿಗೂ ಕೂಡ ದಲಿತ ಮತ್ತು ರೈತ ಚಳುವಳಿ ಒಂದಾಗಬೇಕು ಎಂಬ ಕೂಗು ಇದೆ. ಮನುಧರ್ಮಶಾಸ್ತ್ರ ಎಂಬ ಬ್ರಹ್ಮಾಂಡದ ವಿರುದ್ಧ ಹೋರಾಡಲು ಕೇವಲ ಒಂದು ಸಮೂಹದಿಂದ ಮಾತ್ರ ಸಾಧ್ಯವಿಲ್ಲ. ಶೋಷಿತರೆಲ್ಲರೂ ಕೂಡ ಜಾಗೃತರಾಗಿ ಬಹು ಸಂಸ್ಕೃತಿಯನ್ನು ಉಳಿಸಲು ಹೋರಾಡಬೇಕು. 'ನಿಮಗಿರುವ ಕುಂದು-ಕೊರತೆಗಳನ್ನು ನಿವಾರಿಸಿಕೊಳ್ಳಬೇಕಾದರೆ ನೀವು ಸಂಘಟಿತರಾಗಲೇಬೇಕು'[೧೦] ಎಂದು ಅಂಬೇಡ್ಕರ್ ಅಭಿಪ್ರಾಯ ಪಡುತ್ತಾರೆ.

ಜಾತಿ ವಿನಾಶದ ಪರಿಕಲ್ಪನೆ ಅಂಬೇಡ್ಕರ್‌ರವರ ಸಂವಿಧಾನದ ಆಶಯವಾಗಿದೆ. ಸಾಮಾಜಿಕ ಅನಿಷ್ಟವಾದ ಜಾತಿಪದ್ಧತಿಯಿಂದಾಗಿ ಗ್ರಾಮೀಣ ಭಾರತದ ಹಳ್ಳಿಗಳು ಕೇರಿಗಳಾಗಿ ಒಡೆದು ಶ್ರೇಣೀಕೃತ ಅಸಮಾನತೆಯ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿರುವುದು ಒಂದು ಕಡೆಯಾದರೆ ಮತ್ತೊಂದು ರೀತಿಯಲ್ಲಿ ಅಸ್ಪೃಶ್ಯತೆಯ ಕಳಂಕವನ್ನು ಹೊತ್ತುಕೊಂಡು ಊರಿನ ಹೊರಗೆ ಬದುಕಬೇಕಾಗಿದ್ದ ಕನಿಷ್ಠ ಬದುಕು ಇವರದಾಗಿದೆ. ದಬ್ಬಾಳಿಕೆಯೇ ಮೇಲ್ಜಾತಿಯವರ ಅಸ್ತ್ರವಾಗಿದೆ. ಸಹಿಸಿಕೊಂಡು ನಡೆಯಬೇಕೆಂಬ ಪೂರ್ವಗತ ಪಾಪಪ್ರಜ್ಞೆ ಶೋಷಿತ ರೂಢಿಯಿಂದ ಬಂದಿದೆ. ಅಂಬೇಡ್ಕರ್ ದಲಿತರನ್ನು ಮನೋಶಾಸ್ತ್ರೀಯವಾಗಿ ಅಧ್ಯಯನಮಾಡಿ ಜಾತಿ ಎಂಬುವುದು ಶೋಷಿತರಿಗೆ ಮನಕ್ಕಂಟಿದ ರೋಗ. ಇದನ್ನು ಸ್ವಾಭಿಮಾನ ಮತ್ತು ಸಾಂಸ್ಕೃತಿಕ ಪ್ರಜ್ಞೆಯ ಮೂಲಕ ತೆಗೆದುಹಾಕಬಹುದು. ಇದಕ್ಕೆ ರಾಜಕೀಯ ಅಧಿಕಾರಬೇಕು ಎಂದಿದ್ದರು.

---

[10] ಮೂಲ : ಅಂಬೇಡ್ಕರ್, ಅನು : ಡಾ. ಕೃಷ್ಣಮೂರ್ತಿ ಚಮಂ, ಅಧಿಕಾರಕ್ಕಾಗಿ ಸಂಘಟಿತರಾಗಿ, ಪರಿವರ್ತನಾ ಪ್ರಕಾಶನ, ಮೈಸೂರು. ಪುಟ-೯

ಜಾತಿಯನ್ನು ಹೂತುಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿಕ್ರಿಯಾರಂಗಕಿಳಿದ
ಸ್ವಾಭಿಮಾನ ಸಮುದ್ರ (ಅಂಬೇಡ್ಕರ್)

ಸ್ವಾಭಿಮಾನವಿಲ್ಲದ ವ್ಯಕ್ತಿ ಗುಲಾಮನಾಗುತ್ತಾನೆ. ಗುಲಾಮನಾದವನಿಗೆ ಪ್ರಬುದ್ಧತೆಯ ಚಿಂತನೆ ಇರುವುದಿಲ್ಲ. ಅವನಿಗೆ ಆತ್ಮಸ್ಥೈರ್ಯವಂತು ಕನಸಿನ ಮಾತೇ. ಸಿದ್ಧಲಿಂಗಯ್ಯನವರು ಅಂಬೇಡ್ಕರ್‌ರವರನ್ನು ಸ್ವಾಭಿಮಾನದ ಸಮುದ್ರಕ್ಕೆ ಹೋಲಿಸಿದ್ದಾರೆ. ಈ ಕವಿತೆ ಪ್ರಸ್ತುತ ಸಂದರ್ಭದಲ್ಲಿ ದಲಿತ ಯುವ ಪೀಳಿಗೆಯನ್ನು ಜಾಗೃತಗೊಳಿಸುತ್ತದೆ.

ಬಾಬಾ ಸಾಹೇಬರ ಹೋರಾಟದ ಬಹುಮುಖ್ಯ ಭಾಗವಾದ ಮೀಸಲಾತಿ ಚಳುವಳಿಯು ಪ್ರಸ್ತುತವಾಗುತ್ತದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ದಲಿತರಿಗೆ ಮೀಸಲಾತಿಯನ್ನು ನೀಡಬೇಕೆನ್ನುವುದು ಅಂಬೇಡ್ಕರ್‌ರವರ ಆಶಯವಾಗಿತ್ತು. ಅಂಬೇಡ್ಕರ್‌ರವರು ಸ್ವಾತಂತ್ರ್ಯನಂತರ ೯ ವರ್ಷಗಳ ಕಾಲ ಜೀವಿಸಿದ್ದರು.ಅವರು ಭಾರತದಲ್ಲಿ ಪ್ರಜಾಪ್ರಭುತ್ವ ಸೋಲುತ್ತಿರುವುದನ್ನು ಮನಗಂಡಿದ್ದರು. ೧೯೫೬ರಲ್ಲಿ ಬೌದ್ಧ ಮತಕ್ಕೆ ಮತಾಂತರ ಹೊಂದುವುದಕ್ಕೆ ಮುಂಚೆ ಸಂದರ್ಶನವೊಂದರಲ್ಲಿ ಸಾಮಾಜಿಕ ರಚನೆಯು ಬದಲಾಯಿಸಲ್ಪಡದಿದ್ದರೆ ಸದ್ಯದ ವ್ಯವಸ್ಥೆಯು ಶೀಘ್ರದಲ್ಲಿ ಕುಸಿದು ಬೀಳಲಿದೆ ಎಂದು ಹೇಳಿದ್ದರು. ಇಂದು ಸ್ವಾತಂತ್ರ್ಯವು ಉಳ್ಳವರಿಂದ ಉಳ್ಳವರಿಗಾಗಿ, ಬಲಿಷ್ಠರಿಂದ ಬಲಿಷ್ಠರಾಗಿಯೇ ಇರುವುದು. ಆದರೆ ಕನಿಷ್ಠ ಬದುಕನ್ನು ಬದುಕುತ್ತಿದ್ದ ದಲಿತ ಸಮುದಾಯಕ್ಕೆ ಅಧಿಕಾರ ಬರುವುದಾದರೂ ಹೇಗೆ?

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೇಬಿಗೆ ಬಂತು
....
....
ಪೋಲಿಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ (ನಲವತ್ತೇಳರ ಸ್ವಾತಂತ್ರ್ಯ)

ಈ ಮೇಲಿನ ಕವಿತೆಯ ಮೂಲಕ ಸಿದ್ಧಲಿಂಗಯ್ಯನವರು ಅಂಬೇಡ್ಕರ್‌ರವರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಹೇಳುತ್ತಾರೆ.

“ನನ್ನ ಸಂವಿಧಾನ ೨೦ ವರ್ಷಗಳಲ್ಲಿ ಸರಿಯಾಗಿ ಜಾರಿಯಾದರೆ ಈ ದೇಶದಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಇರುವುದಿಲ್ಲ. ಆದರೆ ಈ ಸಂವಿದಾನ ಜಾರಿಯಾಗುತ್ತದೆ ಎಂಬ ನಂಬಿಕೆ ನನಗಿಲ್ಲ ಏಕೆಂದರೆ ಈ ಸಂವಿಧಾನ ಜಾರಿಮಾಡುವ ಸ್ಥಳದಲ್ಲಿ ಈ ಸಂವಿಧಾನದ ವಿರೋಧಿಗಳು ಕುಳಿತಿದ್ದಾರೆ” ಎಂದು ಅಂಬೇಡ್ಕರ್ ಹೇಳುತ್ತಾರೆ.

ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೇ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ (ನಲವತ್ತೇಳರ ಸ್ವಾತಂತ್ರ್ಯ)

ಸಂವಿಧಾನ ಜಾರಿಗೆ ಬಂದು ಆರು ದಶಕಗಳ ಕಳೆದರು ಸಂವಿಧಾನದ ಆಶಯ ಮಾತ್ರ ಈಡೇರಲಿಲ್ಲ. ಸ್ವಾತಂತ್ರ್ಯನಂತರ ಆಳ್ವಿಕೆಯನ್ನು ಗಮನಿಸಿದಾಗ ದಲಿತ, ಹಿಂದುಳಿದ, ಅಲ್ಪಸಂಖ್ಯಾತರ ಬದುಕು ಅಂಥಾ ಗುಣಾತ್ಮಕ ಬದಲಾವಣೆಯನ್ನು ಕಂಡಿಲ್ಲ ಶೋಷಿತರಿಂದ ಅಧಿಕಾರಕ್ಕೆ ಬಂದವರು ಸಾರ್ಥಿಗಳಾಗಿ, ಸಮಾಜ ವಿರೋಧಿಗಳಾಗಿ ಬದುಕುತ್ತಿದ್ದಾರೆ ಎಂಬುವುದು ಕವಿತೆಯ ಆಶಯವಾಗಿದೆ.

‘ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಎಂದರೆ ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಯಲ್ಲ, ಕೇವಲ ಮತದಾನವಲ್ಲ, ರಕ್ತ ರಹಿತವಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯನ್ನು ತರುವ ವ್ಯವಸ್ಥೆ.[೧೧] ಆದರೆ ಇಂದು ಪ್ರಜಾಪ್ರಭುತ್ವ ಮಾರಾಟದ ಸರಕಾಗಿದೆ. ಸಾಂದರ್ಭಿಕ ತೃಪ್ತಿಗೋಸ್ಕರ ತಮ್ಮ ಅಮೂಲ್ಯವಾದ ಓಟನ್ನು ಮಾರಾಟಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಅನೀತಿವಂತ, ಭ್ರಷ್ಟಜನರು ಅಧಿಕಾರದ ಗದ್ದುಗೆ ಏರುತ್ತಿದ್ದಾರೆ.

ಐದು ವರ್ಷದ ಹಿಂದೆ ಓಟಿಗೆ ಬಂದೋರು
ನೋಟನ್ನು ಕೊಟ್ಟೋರು ಅಲ್ಲವೇನೋ (ಅಲ್ಲೇ ಕುಂತವರೆ)

‘ಅಲ್ಲೆ ಕುಂತವರೇ’ ಕವಿತೆಯು ದಲಿತರ ಪ್ರಸ್ತುತ ಸ್ಥಿತಿಯನ್ನು ತಿಳಿಸುತ್ತದೆ. ದಲಿತರು ಅಂಬೇಡ್ಕರ್‌ರವರು ತಮ್ಮ ಹೋರಾಟದಿಂದ ತಂದು ಕೊಟ್ಟ ಪ್ರಬುದ್ಧ ಪರಿಕಲ್ಪನೆಯ ಮತವನ್ನು

[11] ಡಾ. ಸಿದ್ಧಲಿಂಗಯ್ಯ : ಜನಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪುಟ-೨೨

ಮಾರಾಟಮಾಡಿಕೊಂಡು ಮೇಲ್ಜಾತಿಯ ಪಕ್ಷಗಳಲ್ಲಿ ಗುಲಾಮರಾಗಿ ದುಡಿಯುತಿದ್ದಾರೆ. ಓಟು ಕೇಳಲು ಬಂದ ವ್ಯಕ್ತಿಗಳು ಮಾತಿನಲ್ಲೆ ಕೈಲಾಸ ತೋರಿಸಿ, ಬಣ್ಣದ ಮಾತುಗಳನ್ನಾಡಿ ಮತ ಪಡೆದು ಪ್ರಜಾಪ್ರಭುತ್ವವನ್ನು ಹಾಳುಮಾಡುತ್ತಿದ್ದಾರೆ.

ಒಬ್ಬ ವ್ಯಕ್ತಿಗೆ ಎಲ್ಲಕ್ಕಿಂತ ಮುಖ್ಯವಾದುದು ಸ್ವಾಭಿಮಾನದ ಬದುಕು. ಆದ್ದರಿಂದ ಜಾತಿ ಎಂಬ ಅವಮಾನದ ಕವಚವನ್ನು ಕಿತ್ತು ಒಗೆಯಬೇಕು. ಅದಕ್ಕಾಗಿ ಇರುವ ಮಾರ್ಗ ಧರ್ಮಾಂತರ. ಅಂಬೇಡ್ಕರ್ ಅಕ್ಟೋಬರ್ ೧೪, ೧೯೫೬ ಮತಾಂತರ ಮಾಡಿ ತೋರಿಸಿದರು. ಸಿದ್ಧಲಿಂಗಯ್ಯನವರು ಇದರಿಂದ ಪ್ರೇರಣೆಗೊಂಡು ಹಿಂದೂ ಧರ್ಮದ ಅವಮಾನವನ್ನು ಸಹಿಸಿಕೊಳ್ಳಲಾಗದ ತಳಸಮುದಾಯದ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ತಮ್ಮ ಕವಿತೆಯಲ್ಲಿ "ಹಿಂದೂ ಧರ್ಮವ ಕೊಂದರು ದಲಿತರು ಜಾತಿವಾದಿಗಳ ಬಿಡಲಿಲ್ಲ" ಎಂದು ಹೇಳುತ್ತಾರೆ.

ಸಿದ್ಧಲಿಂಗಯ್ಯನವರು ಮೂರು ನಾಟಕಗಳನ್ನು ರಚಿಸಿದ್ದು ಮೂರು ನಾಟಕಗಳು ಕೂಡ ಅಂಬೇಡ್ಕರ್‌ರವರ ಚಿಂತನೆಗಳನ್ನು ಒಳಗೊಂಡಿವೆ. ಏಕಲವ್ಯ ನಾಟಕವು ಪುರಾಣದ ವಸ್ತುವನ್ನು ಕೇಂದ್ರವಾಗಿಸಿಕೊಂಡ ನಾಟಕವಾಗಿದೆ. ಪುರಾಣದಲ್ಲಿ ಈ ಘಟನೆಯ ಮೂಲಕ ಅಂದಿನ ಭಾರತೀಯ ಸಮಾಜದ ಸ್ಥಿತಿಯನ್ನು ಮನವರಿಕೆ ಮಾಡಿಕೊಡುವುದರೊಂದಿಗೆ ದ್ರೋಣಾಚಾರ್ಯರು ಪ್ರಸ್ತುತ ಸಂದರ್ಭದ ಪುರೋಹಿತಶಾಹಿವರ್ಗವನ್ನು ಪ್ರತಿನಿಧಿಸಿದರೆ, ಅರ್ಜುನ ನಮ್ಮನಾಳುತ್ತಿರುವ ಪ್ರಭುವಾಗಿ ಕಾಣಿಸಿಕೊಳ್ಳುತ್ತಾನೆ. ಏಕಲವ್ಯ ತಳಸಮುದಾಯದ ಪ್ರತಿನಿಧಿಯಾಗಿ ಇಲ್ಲಿ ಕಂಡುಬರುತ್ತಾನೆ. ದ್ರೋಣಾ ಚಾರ್ಯರಿಂದ ವಿದ್ಯೆಯಿಂದ ವಂಚಿತನಾದ ಏಕಲವ್ಯ ಸ್ವ-ಸಾಮರ್ಥ್ಯದಿಂದ ವಿದ್ಯೆ ಕಲಿತು ಸ್ವಾಭಿಮಾನಿಯಾಗುತ್ತಾನೆ. ಇವನನ್ನು ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಕೌರವ ಮತ್ತು ಪಾಂಡವರು ತಮ್ಮತಮ್ಮ ಪರವಹಿಸಬೇಕೆಂದು ಕೇಳಿಕೊಂಡಾಗ ಏಕಲವ್ಯ ತೆಗೆದುಕೊಳ್ಳುವ ನಿಲುವು ಇಲ್ಲಿ ಪ್ರಮುಖವಾಗುತ್ತದೆ.

ಅಂಬೇಡ್ಕರ್‌ರವರು ತಮ್ಮ ಜೀವನದುದ್ದಕ್ಕೂ ಜಾತಿವಿನಾಶ, ಸಮಾನತೆ, ಸಹೋದರತೆ, ಸ್ವಾತಂತ್ರ್ಯ ಮುಂತಾದ ತತ್ವಗಳಿಗಾಗಿ ಹೋರಾಡಿದರು. ತಮ್ಮ ಜೀವಿತ ಅವಧಿಯಲ್ಲಿ ಪ್ರಬುದ್ಧ ಭಾರತ ನಿರ್ಮಿಸುವ ಕನಸು ಕಂಡಿದ್ದರು. ಆದರೆ ಈ ವೈದಿಕ ವ್ಯವಸ್ಥೆ ಪ್ರಬುದ್ಧಭಾರತ ನಿರ್ಮಾಣದ ಕನಸನ್ನು ನನಸಾಗಿಸಲು ಬಿಡಲಿಲ್ಲ. ಸಿದ್ಧಲಿಂಗಯ್ಯರವರು ಅಂಬೇಡ್ಕರ್‌ರವರಿಂದ ಪ್ರೇರಣೆಗೊಂಡು ಏಕಲವ್ಯನಿಂದ ಈ ಕೆಳಗಿನ ಮಾತುಗಳನ್ನು ಹೇಳಿಸುತ್ತಾರೆ.

ಏಕಲವ್ಯ :

ಕುರು ಪಾಂಡವರಲ್ಲಿ ಒಂದು ಪಕ್ಷವಹಿಸಿ
ಯಾರೊಬ್ಬರ ದಾಳ ನಾನಾಗಲಾರೆ ಎಲ್ಲೆಲ್ಲೂ
ಇರುವ ಅನ್ಯಾಯದ ವಿರುದ್ಧ, ಜ್ಞಾನದ
ಗುತ್ತಿಗೆಯನ್ನು ಎತ್ತಿಹಿಡಿಯುವ ಶಾಸ್ತ್ರಗಳ
ವಿರುದ್ಧ ನನ್ನ ಯುದ್ಧ, ಮೇಲು ಕೀಳೆಂಬ
ವಂಚನೆಯನ್ನು ಅಳಿಸಲು ನನ್ನ ಸಮರ
ಕುರುಕ್ಷೇತ್ರಕೇವಲ ಉಳ್ಳವರ ನಡುವಿನ ಕಚ್ಚಾಟ
ನನ್ನದು ಇಲ್ಲದವರ ಪರವಾದ ಹೋರಾಟ
ಈ ಸಂಘರ್ಷ ಕುರುಪಾಂಡವರಿಬ್ಬರ ವಿರುದ್ಧವೂ
ಸಾಗಬೇಕು ಆಗ ಮಾತ್ರ ತುಳಿತಕ್ಕೆ ಸಿಕ್ಕಿದವರ
ಬಾಳಿನಲ್ಲಿ ಬೆಳಕು ಮೂಡುತ್ತದೆ.
ಕಡೆಗಣಿಸಲ್ಪಟ್ಟವರ ಬದುಕಿನ ತೋಟದಲ್ಲಿ
ಸಮಾನತೆಯ ಹೂ ಅರಳುತ್ತದೆ"

ಈ ಮೇಲಿನ ಮಾತುಗಳು ಏಕಲವ್ಯ ನಾಟಕದ ಕೊನೆಯ ದೃಶ್ಯದಿಂದ ತೆಗೆದುಕೊಳ್ಳಲಾಗಿದೆ. ಅಂಬೇಡ್ಕರ್‌ರವರು ವಿದ್ಯಾರ್ಥಿಗಳನ್ನು ಕುರಿತು ವಿದ್ಯಾರ್ಥಿಗಳು ಹೊಸ ಹೊಸ ಚಿಂತನೆಗಳನ್ನು ಕೊಂಡೊಯ್ಯುವ ಸಾರಥಿಗಳು ಎಂದಿದ್ದಾರೆ. ಏಕಲವ್ಯ ಹೊಸತಲೆಮಾರಿನ ಯುವಕನಾಗಿ ಕಾಣಿಸುತ್ತಾನೆ. ಇಂದು ದಲಿತಯುವಕರು ದಿಕ್ಕುತಪ್ಪಿ ಸಂಘಪರಿವಾರದ ಕಡೆ ವಾಲುತ್ತಿರುವ ಸಂದರ್ಭದಲ್ಲಿ ಏಕಲವ್ಯ ತೆಗೆದುಕೊಳ್ಳುವ ನಿರ್ಧಾರಗಳು ಸಮಾಜ ಪೂರಕವಾಗುತ್ತವೆ. ಪ್ರಜಾಪ್ರಭುತ್ವವೆಂದರೆ ಯಾವುದೆ ರಕ್ತಪಾತವಿಲ್ಲದೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ತರುವುದಾಗಿದೆ. ಏಕಲವ್ಯನ ಮಾತುಗಳಲ್ಲಿ ರಕ್ತಪಾತರಹಿತವಾದ ಪ್ರಜಾಪ್ರಭುತ್ವದ ತತ್ವಗಳು ಕಾಣಿಸುತ್ತವೆ.

ಪಂಚಮ ನಾಟಕವು ಒಂದು ಸಂದರ್ಶನದ ಮೂಲಕ ಪ್ರಾರಂಭವಾಗುತ್ತದೆ. ಹೇಗೆ ಶೋಷಿತ ಸಮುದಾಯವನ್ನು ಆಳುವ ವರ್ಗ ಮತ್ತು ಅಧಿಕಾರಿಗಳು ನಡೆಸಿಕೊಳ್ಳುತ್ತಿದ್ದಾರೆ. ಎಂಬ ಅಂಶಗಳು ಇಲ್ಲಿ ಕಂಡುಬರುತ್ತವೆ. ಶೋಷಕ ಹಾಗೂ ಶೋಷಿತ ವ್ಯವಸ್ಥೆಯ ನಡುವಿನ ಸಂಘರ್ಷ ಸ್ವರೂಪವನ್ನು

ನಾಟಕಕಾರರು ಹಯವದನರಾವ್ ಮತ್ತು ಪಂಚಮಪಾತ್ರಗಳ ನಡುವಿನ ಸಂಭಾಷಣೆಯ ಮೂಲಕ ಹೀಗೆ ಕಟ್ಟಿಕೊಟ್ಟಿದ್ದಾರೆ.

ಇಂದಿನಿಂದ ರಾಜಕೀಯ ಸಮಾನತೆ ಸಿಕ್ಕಿದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಹಾಗೆಯೇ ಇದೆ. ಆದಷ್ಟು ಬೇಗ ಆಳುವ ವರ್ಗ ಈ ಅಸಮಾನತೆಯನ್ನು ಹೋಗಲಾಡಿಸದಿದ್ದರೆ ಅಸಮಾನತೆಗೆ ಒಳಗಾದ ಜನ ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಧ್ವಂಸಗೊಳಿಸುತ್ತಾರೆ ಎಂಬ ಮಾತನ್ನು ಅಂಬೇಡ್ಕರ್‌ರವರು ಸಂವಿಧಾನ ಬರೆದುಕೊಟ್ಟ ಸಂದರ್ಭದಲ್ಲಿ ಹೇಳುತ್ತಾರೆ. ಸಿದ್ಧಲಿಂಗಯ್ಯನವರ ಪಂಚಮ ನಾಟಕದಲ್ಲಿ ಅಸಮಾನತೆಗೆ ಮತ್ತು ಶೋಷಣೆಗೆ ಒಳಗಾದ ವಿದ್ಯಾವಂತ ಪಂಚಮ ಸಿಡಿದೇಳುತ್ತಾನೆ.

ಹಯವದನರಾವ್ : ರೀ ದಲಿತ ಈ ಎಂಜಲೇನಾದರೂ ನಿಮಗೆ
ಸರಕಾರದ ಕೃಪಕಟಾಕ್ಷದಿಂದ ಸಿಗ್ದೆ ಇದ್ದಿದ್ರೆ
ಧೂಳಿಗಾ ಹುಪ್ಪಟೆ ಥರಾ ಸತ್ತೋಗ್ತಿದ್ರಿ ಗೊತ್ತಾ?
ಪಂಚಮ : ಈ ಎಂಜಲ್ ಹಾಕೋದ್ರಿಂದಾನೆ ನೀವು
ಉಳಿದಿರೋ ನಮ್ಮ ಜನರ ರೊಚ್ಚನ್ನ ಕಡಿಮೆ
ಮಾಡ್ತಿರೋದು ಈ ಎಂಜಲು ಸ್ವಾಮಿ, ನಮಗೆ
ಎಂಜಲುಬೇಕಾಗಿಲ್ಲ, ನಮಗೆ ಬೇಕಾಗಿರೋದು
ಹೊಸ ಜೀವನ ಸ್ವಾಭಿಮಾನದ ಬದುಕು
....
....
ಪಂಚಮ : ನಾವು ನಿಮ್ ಹತ್ರ ಹಲ್‌ಗಿಂಜ್‌ಕಂಡು ಪೋಸ್ಟ್‌ಕೇಳೋ
ಕಾಲಹೊರಟು ಹೋಯ್ತು, ನಿಮ್ಮ ಸಮಾಜದ ವ್ಯವಸ್ಥೇನ
ಸಂಪೂರ್ಣವಾಗಿ ಬದಲಾಯಿಸೋವರೆಗು ನಮಗೆ ಶಾಂತಿ
ಇಲ್ಲಾ ನಮ್ಗೆ ಸಮಾಜ ಬದಲಾವಣೆ ಬೇಕು.

ಈ ಮಾತುಗಳು ಶೋಷಣೆಗೆ ಒಳಗಾದ ಯುವ ಜನತೆ ಪ್ರಭುತ್ವದ ವಿರುದ್ಧ ಸಿಡಿದೇಳುವ ಚಿಂತನೆಯನ್ನು ಹೇಳುತ್ತವೆ.

ನೆಲಸಮ ನಾಟಕದಲ್ಲಿ ಆಳುವ ವರ್ಗ ಈ ದೇಶದ ಮೂಲ ನಿವಾಸಿಗಳನ್ನು ಪರಕೀಯರಂತೆ ನಡೆಸಿಕೊಳ್ಳುತ್ತಿರುವ ರೀತಿಯನ್ನು ಕುರಿತು ಹೇಳಲಾಗಿದೆ. ಅಂಬೇಡ್ಕರ್‌ರವರ ಪ್ರಕಾರ ಈ ದೇಶದ ಸಂಪೂರ್ಣ ಆಸ್ತಿಯಲ್ಲಿ ದಲಿತರಿಗೂ ಕೂಡ ಪಾಲು ಬರಬೇಕು. ಆದರೆ ಇಲ್ಲಿನ ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸಿ ಬದುಕಲು ನೆಲೆಯೆ ಇಲ್ಲದ ಪರಿಸ್ಥಿತಿಗೆ ಕೊಂಡೊಯ್ಯುತ್ತಿರುವುದು ದೊಡ್ಡ ದುರಂತವಾಗಿದೆ. ಆಳುವ ಸರ್ಕಾರಗಳು ಭಾರತ ಪ್ರಕಾಶಿಸುತ್ತಿದೆ ಎಂದು ಸುಮ್ಮನೆ ಭಾಷಣ ಮಾಡುತ್ತಾ, ಬಹುಸಂಖ್ಯಾತ ಶೋಷಿತರ ಜೀವನದಲ್ಲಿ ಆಟವಾಡುತ್ತಿವೆ. ಬಡವರನ್ನು ಮೇಲೆತ್ತುವ ಕೆಲಸಮಾಡದೆ, ಬಡವರು ಭಾರತದಲ್ಲಿರುವುದೇ ಭಾರತ ದೇಶಕ್ಕೆ ಅವಮಾನದ ಸಂಗತಿ ಎಂಬಂತೆ ರಸ್ತೆ ಅಗಲೀಕರಣ, ಕಾರ್ಖಾನೆ ನಿಮಾಣ, ಬಹುಮಹಡಿ ಕಟ್ಟಡ ನಿರ್ಮಾಣ ಮುಂತಾದ ಕೆಲಸಗಳಿಗೆ ದಲಿತರ ಮನೆಗಳನ್ನು ನೆಲಸಮಮಾಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಒಟ್ಟಾರೆ ಏಕಲವ್ಯ, ಪಂಚಮ ಮತ್ತು ನೆಲಸಮ ನಾಟಕಗಳು ಅಂಬೇಡ್ಕರ್‌ರವರಿಂದ ಪ್ರೇರಣೆಗೊಂಡು ಸಿದ್ಧಲಿಂಗಯ್ಯನವರು ರಚಿಸಿದ ನಾಟಕಗಳಾಗಿವೆ. ಈ ಮೂರು ನಾಟಕಗಳು ಹೇಳುವುದು, ಸಮಾನತೆ, ಸಹೋದರತೆ ಮತ್ತು ಸ್ವಾತಂತ್ರ್ಯವನ್ನು, ಜಾತಿರಹಿತ ಸಮಾಜವನ್ನು ನಿರ್ಮಿಸುವ ಮತ್ತು ಶೋಷಣೆ ಮುಕ್ತ ಸಂಸ್ಕೃತಿಯನ್ನು ಕಟ್ಟುವ ಪರಿಕಲ್ಪನೆಯನ್ನು ಹೇಳುತ್ತವೆ. ಸಿದ್ಧಲಿಂಗಯ್ಯನವರ ಒಟ್ಟಾರೆ ಸಾಹಿತ್ಯವು ತಳಸಮುದಾಯದ ಸಾಮಾಜಿಕ ಪರಿವರ್ತಕರ ಸಿದ್ಧಾಂತಗಳ ಪ್ರೇರಣೆಯಿಂದ ರೂಪುಗೊಂಡಿದೆ. ಇವರ ಪ್ರತಿಸಾಲಿನ ಪ್ರತಿ ಅಕ್ಷರವು ಶೋಷಿತರ ಮಾತುಗಳಾಗಿವೆ. ಸಮಾನತೆಯ ಸಮಾಜ ಕಟ್ಟುವ ಬಯಕೆ ಇವರ ಸಾಹಿತ್ಯಕ್ಕಿದೆ. ಸಂವಿಧಾನದ ಪ್ರಜಾಪ್ರಭುತ್ವ ಮಾದರಿಯ ಆಡಳಿತವನ್ನು ಸಿದ್ಧಲಿಂಗಯ್ಯನವರ ಸಾಹಿತ್ಯ ಬಯಸುತ್ತದೆ. ದೇವರು-ಧರ್ಮ ಇವುಗಳು ಮಾನವ ವಿರೋಧಿ ಎನ್ನುತ್ತಾ, ಬುದ್ಧನ ವಾಸ್ತವ ಸತ್ಯವನ್ನು ಕುರಿತು ಸಿದ್ಧಲಿಂಗಯ್ಯನವರ ಸಾಹಿತ್ಯ ಮಾತನಾಡುತ್ತದೆ.

ಸಮಾರೋಪ

ಜಾತಿಪದ್ಧತಿ ಮನುಕುಲದ ಜೀವವೃಕ್ಷಕ್ಕೆ ಅಂಟಿಕೊಂಡಿರುವ ಒಂದು ದೊಡ್ಡ ಸಾಮಾಜಿಕ ಪಿಡುಗಾಗಿದೆ. ಒಂದೇ ಭೂಮಿತಾಯಿಯ ಹೊಕ್ಕಳು ಬಳ್ಳಿಯ ಮಕ್ಕಳಾಗಿ ಹುಟ್ಟಿದವರ ನಡುವೆ ಎದ್ದಿರುವ ಜಾತಿಯ ಗೋಡೆಗಳು ಮನುಷ್ಯ ಮನುಷ್ಯರನ್ನು ಜಾತಿ ನೆಲೆಯಲ್ಲಿ ಪ್ರತ್ಯೇಕಗೊಳಿಸಿವೆ. ಕರಿಯರು–ಬಿಳಿಯರು, ಮೇಲುಜಾತಿ–ಕೆಳಜಾತಿ ಎನ್ನುವ ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸಿವೆ. ಜಾತಿ ಅವಮಾನದಿಂದ ಕೆಳವರ್ಗದ ಜನಸಮುದಾಯಗಳು ಸಾಮಾಜಿಕ ಕೀಳರಿಮೆಯಿಂದ ಬಳಲುವಂತೆ ಮಾಡಿದೆ. ವರ್ಣ ಸಂಘರ್ಷದಲ್ಲಿ ದಲಿತರು, ವರ್ಗ ಸಂಘರ್ಷದಲ್ಲಿ ಬಡವರು, ಲಿಂಗತಾರತಮ್ಯದಲ್ಲಿ ಮಹಿಳೆಯರು ಇಂಡಿಯಾದ ಈ ಕ್ರೂರ ವ್ಯವಸ್ಥೆಯ ಹಿಡಿತಕ್ಕೆ ಸಿಲುಕಿ ನಲುಗಿದ್ದಾರೆ. ನಲುಗುತ್ತಲೇ ಇದ್ದಾರೆ. ಮನುಷ್ಯ ಮನುಷ್ಯರನ್ನು ತಿಂದು ಬದುಕುವಂಥ ಕ್ರೌರ್ಯ ಇಂದಿನ ಸಮಾಜದಲ್ಲಿ ಬೆಳೆಯುತ್ತಿದೆ. ಈ ಶೋಷಣೆ ಸರ್ವಾಂತರ್ಯಾಮಿಯಾಗಿ ಬದುಕನ್ನು ಇಂಚಿಂಚಾಗಿ ನುಂಗುತ್ತಿದೆ.

ಪ್ರಸ್ತುತದಲ್ಲಿ ಮನುವಾದಿಗಳ ಕುತಂತ್ರ ಮಾನವ ಸಂಕುಲವನ್ನು ಆಕ್ರಮಿಸಿಕೊಂಡಿದೆ. ಜಾತಿವಾದ, ಕೋಮುವಾದ, ಧರ್ಮಾಂಧತೆ, ದೇವರುಗಳು ಸಂವಿಧಾನವನ್ನು ನಾಶಮಾಡಲು ಪ್ರಯತ್ನಿಸುತ್ತಿವೆ. ಆಳುವ ಸರ್ಕಾರ ಪ್ರಜೆಗಳನ್ನು ಮರೆತು, ಅವರ ಆಶಯಗಳನ್ನು ಗಾಳಿಗೆ ತೂರಿ ರಾಜದರ್ಬಾರು ನಡೆಸುತ್ತಿದೆ. ಮೀಸಲಾತಿ, ಆಹಾರದ ಹಕ್ಕು, ಶಿಕ್ಷಣ, ಸಂಸ್ಕೃತಿಗಳಲ್ಲಿ ಕೇಸರೀಕರಣ ಪ್ರಭಾವ ಬೀರುತ್ತಿದೆ. ಇಂತಹ ಸಂದರ್ಭದಲ್ಲಿ ಯುವಜನತೆ ಪ್ರಜ್ಞಾಪೂರ್ವಕವಾಗಿ ನಡೆದುಕೊಳ್ಳದಿದ್ದರೆ ದೇಶ ಬಹುದೊಡ್ಡ ದುರಂತ ಅನುಭವಿಸಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಈ ಮಣ್ಣಿನ ಅನಿವಾರ್ಯತೆಯಾಗಿ ಮೂಡಿ ಬಂದ ದಲಿತ ಸಾಹಿತ್ಯ ಸಾಮಾಜಿಕ ಸಮಸ್ಯೆಗಳನ್ನು ಸಾಹಿತ್ಯಕ್ಕೆ ವಸ್ತುವಾಗಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ದಲಿತ ಸಾಹಿತ್ಯವು ಸಮಾಜದೊಟ್ಟಿಗೆ ಸೃಜನಾತ್ಮಕ ಸಂವೇದನಶೀಲ ಸಂಬಂಧವನ್ನು ಉಳಿಸಿಕೊಂಡಿದೆ. ಸಾಂಪ್ರದಾಯಿಕ ಕಾವ್ಯಭಾಷೆಗೆ ತದ್ವಿರುದ್ಧವಾದ ಭಾಷಾಶೈಲಿಯನ್ನು ಪ್ರಯೋಗಿಸಿ ಶ್ರೀಸಾಮಾನ್ಯರ ಹತ್ತಿರಕ್ಕೆ ಸಾಹಿತ್ಯವನ್ನು ಕೊಂಡೊಯ್ಯುವ ಕೀರ್ತಿ ವಚನ ಸಾಹಿತ್ಯದ ನಂತರದ ಸ್ಥಾನ ದಲಿತ ಸಾಹಿತ್ಯದ್ದಾಗಿದೆ. ದಲಿತ

ಸಾಹಿತ್ಯದ ಮುಖ್ಯ ಉದ್ದೇಶ ಜಾತಿರಹಿತ ಸಮಾಜ ನಿರ್ಮಿಸುವುದು ಮತ್ತು ಸಮಾನತೆಯ ಮಾನವೀಯ ಸಮಾಜಕಟ್ಟುವುದಾಗಿದೆ.

ದಲಿತ ಸಾಹಿತ್ಯ ಮತ್ತು ಚಳುವಳಿಯನ್ನು ಕಟ್ಟಿ ಬೆಳೆಸಿದ ಪ್ರಮುಖರಲ್ಲಿ ಸಿದ್ಧಲಿಂಗಯ್ಯನವರು ಕೂಡ ಒಬ್ಬರು. ಸಿದ್ಧಲಿಂಗಯ್ಯನವರು ವಿದ್ಯಾರ್ಥಿ ದಿನಗಳಲ್ಲೇ ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡು ಅದರ ಜೊತೆಯಲ್ಲಿಯೇ ಕವಿತೆಗಳನ್ನು ರಚಿಸಿದರು. ಸಿದ್ಧಲಿಂಗಯ್ಯನವರ ಸಾಹಿತ್ಯದ ಮರು ಓದು ಈ ಕಾಲದಲ್ಲಿ ಅವಶ್ಯಕವಾಗಿದೆ. ಅವರ ಕವಿತೆ, ನಾಟಕ, ಸಂಶೋಧನ ಪ್ರಬಂಧ, ವಿಮರ್ಶೆಗಳು ಪ್ರಜಾಪ್ರಭುತ್ವವನ್ನು ಕುರಿತು ಮಾತನಾಡುತ್ತವೆ. ಸಮಕಾಲೀನ ಸಮಸ್ಯೆಗಳಿಗೆ ಉತ್ತರಿಸುತ್ತವೆ. ದಿಕ್ಕು ತಪ್ಪುತ್ತಿರುವ ತಳಸಮುದಾಯದ ಯುವಕರಿಗೆ ದಾರಿ ದೀಪಗಳಾಗಿವೆ. ಸಿದ್ಧಲಿಂಗಯ್ಯನವರ ಸಾಹಿತ್ಯದಿಂದ ದಲಿತ ರಾಜಕಾರಣಿಗಳು ಉತ್ತೇಜನಗೊಳ್ಳುತ್ತಿದ್ದಾರೆ. ಉತ್ತಮ ಹೋರಾಟಗಾರರಿಗೆ ಇವರ ಸಾಹಿತ್ಯ ಪ್ರೇರಣೆ ನೀಡಿದೆ.

ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳನ್ನು; ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ ತೆಗೆದುಕೊಂಡು ಈ ನಿಬಂಧದಲ್ಲಿ ವಿಶ್ಲೇಷಣೆಗೆ ಅಳವಡಿಸಲಾಗಿದೆ. ಸಿದ್ಧಲಿಂಗಯ್ಯನವರೊಂದಿಗೆ ನೇರ ಸಂವಾದ ಮಾಡಿ ಅವರ ಸಾಹಿತ್ಯ ಕೃಷಿಗೆ ಪ್ರೇರಣೆ ಮತ್ತು ಸಮಕಾಲೀನ ಚಿಂತನೆಗಳ ಅವಶ್ಯಕತೆಯನ್ನು ಚರ್ಚಿಸಲಾಗಿದೆ. ಸಂವಿಧಾನದ ಆಶಯವಾದ ಪ್ರಜಾಪ್ರಭುತ್ವ, ಸಮಾನತೆ, ಸಹೋದರತೆ ಮತ್ತು ಸ್ವಾತಂತ್ರ್ಯಗಳನ್ನು ಇಂದಿನ ಯುವಜನತೆ ಹೇಗೆ ಸಾಕಾರಗೊಳಿಸಬೇಕಾಗಿದೆ ಎಂಬುವುದನ್ನು ಪ್ರಶ್ನೆಗಳ ಮೂಲಕ ಸಿದ್ಧಲಿಂಗಯ್ಯನವರೊಂದಿಗೆ ತಿಳಿದುಕೊಳ್ಳಲಾಗಿದೆ.

ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು (ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಈ ನಿಬಂಧವು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಕವಿ ಸಿದ್ಧಲಿಂಗಯ್ಯನವರ ಪರಿಚಯ ಮತ್ತು ಅವರೊಂದಿಗೆ ಮಾತುಕತೆ, ದಲಿತ ಸಮಾಜದ ಪ್ರಸ್ತುತ ಸಮಸ್ಯೆಗಳು, ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು, ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ಮೇಲೆ ಫುಲೆ, ಪೆರಿಯಾರ್ ಅಂಬೇಡ್ಕರ್ ಚಿಂತನೆಗಳ ಪ್ರಭಾವ ಎಂಬ ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೆ ಅಧ್ಯಾಯವಾದ 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯೊಳಗೆ ದಲಿತ ಸಮುದಾಯದ ಇತಿಹಾಸ, ಬೆಳೆದು ಬಂದ ಪರಿಸರ, ಸಮಾಜ ಪರಿವರ್ತಕರ ನಿಲುವುಗಳು ಮತ್ತು ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ರಚನೆಗೆ ಪ್ರೇರಣೆ ನೀಡಿದ ಸಿದ್ಧಾಂತಗಳನ್ನು ಅವಲೋಕನ ಮಾಡಲಾಗಿದೆ. ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ಪ್ರಸ್ತುತತೆ ಮತ್ತು ಅವುಗಳು ಒಳಗೊಂಡಿರುವ ವ್ಯಾಪ್ತಿಯನ್ನು ಚರ್ಚಿಸಲಾಗಿದೆ. ನಂತರದ ಅಧ್ಯಾಯವಾದ ಕವಿ 'ಸಿದ್ಧಲಿಂಗಯ್ಯನವರ ಪರಿಚಯ ಮತ್ತು ಅವರೊಂದಿಗೆ ಮಾತುಕತೆ' ಇದರೊಳಗೆ ಸಿದ್ಧಲಿಂಗಯ್ಯನವರೊಂದಿಗೆ ಪ್ರಶ್ನೆಕೇಳಿ ಚರ್ಚೆಮಾಡಿ ದಲಿತರ ಸ್ಥಿತಿಗತಿ, ಭವಿಷ್ಯದ ಸಮಾಜವನ್ನು ಕಟ್ಟುವ ಕ್ರಮ ದಲಿತ ಸಂಘಟನೆಗಳ ಐಕ್ಯಗೊಳಿಸುವಿಕೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲಾಗಿದೆ. ಮೂರನೇ ಅಧ್ಯಾಯವಾದ 'ದಲಿತ ಸಮಾಜದ ಪ್ರಸ್ತುತ ಸಮಸ್ಯೆ'ಗಳಲ್ಲಿ ಈ ಸಮಕಾಲೀನ ಸಂದರ್ಭದಲ್ಲಿ ದಲಿತ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಆ ಸಮಸ್ಯೆಗಳಿಗೆ ಕಾರಣಗಳನ್ನು ಕಂಡುಕೊಳ್ಳಲಾಗಿದೆ. ಪರಿಹಾರವನ್ನು ತಿಳಿದ ಮಟ್ಟಿಗೆ ಸೂಚಿಸಲಾಗಿದೆ. ನಂತರದ ಅಧ್ಯಾಯ 'ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು' ಇಲ್ಲಿ ಸುದೀರ್ಘವಾಗಿ ಸಮಕಾಲೀನ ಚಿಂತನೆಗಳು ಹೇಗೆ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಅಡಕವಾಗಿವೆ ಎಂಬುದನ್ನು ವಿಶ್ಲೇಷಣೆ ಮಾಡಲಾಗಿದೆ. ಸಮಕಾಲೀನ ಚಿಂತನೆಗಳನ್ನು, ಬಹುಸಂಸ್ಕೃತಿಯನ್ನು ವೈಧಿಕಶಾಹಿ ನಿಲುವುಗಳು ನಾಶಪಡಿಸುತ್ತಿರುವ ಬಗೆ ಯಾವ ರೀತಿಯದಾಗಿದೆ ಎಂಬುದನ್ನು ತಿಳಿಯಲಾಗಿದೆ. ಕೊನೆಯ ಅಧ್ಯಾಯವಾದ 'ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳ ಮೇಲೆ ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಪ್ರಭಾವದಲ್ಲಿ' ಸಿದ್ಧಲಿಂಗಯ್ಯನವರ ಸಾಹಿತ್ಯ ರಚನೆಗೆ ಪ್ರೇರಣೆ ನೀಡಿದ ಸಮಾಜ ಪರಿವರ್ತಕರ ಜೀವನ ಪರಿಚಯವನ್ನು ಮಾಡಿಕೊಡುತ್ತಾ, ಇವರುಗಳ ಯಾವ ಯಾವ ಚಿಂತನೆಗಳು ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಮೂಡಿ ಬಂದಿದೆ ಎಂಬುದನ್ನು ವಿಶ್ಲೇಷಣೆಯ ಮೂಲಕ ಚರ್ಚಿಸಲಾಗಿದೆ. ಬಹುಮುಖ್ಯವಾಗಿ ಫುಲೆಯವರ ಶೈಕ್ಷಣಿಕ ವಿಚಾರಧಾರೆ, ಪೆರಿಯಾರ್‌ರವರ ವೈಚಾರಿಕ ನೆಲೆ, ಅಂಬೇಡ್ಕರ್‌ರವರ ಸ್ವಾಭಿಮಾನ, ಸಮಾನತೆ, ಜಾತಿರಹಿತ ಸಮಾಜ ಮುಂತಾದ ವಿಷಯಗಳು ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಬೀರಿರುವ ಪ್ರಭಾವವನ್ನು ಗುರುತಿಸಲಾಗಿದೆ.

ಸಿದ್ಧಲಿಂಗಯ್ಯನವರ ಸಾಹಿತ್ಯದ ಅಧ್ಯಯನ ಮನುಷ್ಯತ್ವದ ಸ್ಥಾಪನೆ, ಉಳಿಯುವಿಕೆ ಮತ್ತು ವಿಕಾಸಕ್ಕೆ ನೆರವಾಗುತ್ತದೆ. ಮನಸ್ಸನ್ನು ಅರಳಿಸುತ್ತಲೇ ಬದುಕನ್ನು ಅರಳಿಸುವ, ಶೋಷಿತರ ಬದುಕಲ್ಲಿ

ಭರವಸೆ ಮೂಡಿಸುವ, ನೊಂದವರನ್ನು ಸಾಂತ್ವನಿಸುವ ಶಕ್ತಿ ಇವರ ಸಾಹಿತ್ಯಕ್ಕಿದೆ. ಅದರ ಅಧ್ಯಯನದಿಂದ ಅನುಭವ ಗಮ್ಯವಾಗುತ್ತದೆ. ಸಿದ್ಧಲಿಂಗಯ್ಯನವರನ್ನು ಓದುತ್ತಾ ಹೋದಂತೆ ಶೋಷಣೆಯ ವಿರುದ್ಧ ಹೋರಾಡುವ ಬಯಕೆ ಮೂಡುತ್ತದೆ. ಬೀದಿಗಿಳಿದು ಕ್ರಾಂತಿಮಾಡಬೇಕೆಂಬ ಬಯಕೆ, ಶೋಷಕನ ಹುಟ್ಟಡಗಿಸಬೇಕೆಂದ ಕ್ರಾಂತಿಕಾರಿ ಮನಸ್ಸು ಪ್ರಚೋದನೆಗೊಳ್ಳುತ್ತದೆ. ಮಾತುಗಳು ಬೆಂಕಿಉಂಡೆಗಳಾಗುತ್ತವೆ ಎಂಬುದನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ.

ಸಿದ್ಧಲಿಂಗಯ್ಯನವರ ಸಾಹಿತ್ಯದ ಬಗ್ಗೆ ಪ್ರಸ್ತುತದಲ್ಲಿ ಅಲ್ಲಲ್ಲಿ ವಿಮರ್ಶೆಗಳು ಕೇಳಿಬರುತ್ತಿವೆ. ಸಿದ್ಧಲಿಂಗಯ್ಯನವರು ತಮ್ಮ ಸಾಹಿತ್ಯದಲ್ಲಿ 'ಶೋಷಿತರ ಸಮಸ್ಯೆಗಳನ್ನು ಅಭಿವ್ಯಕ್ತಿಸಿದರೇ ವಿನಃ ಅದಕ್ಕೆ ಪರಿಹಾರವನ್ನು ಸೂಚಿಸಲು ಪ್ರಯತ್ನಿಸಲಿಲ್ಲವೆಂದು' ಎಂದು, ಆದರೆ ಸಿದ್ಧಲಿಂಗಯ್ಯನವರ ಏಕಲವ್ಯ, ಪಂಚಮ ಮತ್ತು ಹಲವು ಕವಿತೆಗಳು ಸಮಕಾಲೀನ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತವೆ. ಏಕಲವ್ಯ ತೆಗೆದುಕೊಳ್ಳುವ ನಿಲುವು, ಪಂಚಮನ ಜಾತಿರಹಿತ ಸಮಾಜ ಕಟ್ಟುವ ಬಯಕೆ ಮುಂತಾದ ವಿಷಯಗಳನ್ನು ಟೀಕೆಮಾಡುವವರು ಮತ್ತೊಂದು ಸಾರಿ ಪ್ರಜ್ಞಾಪೂರ್ವಕವಾಗಿ ಓದುವ ಅವಶ್ಯಕತೆ ಇದೆ.

ಹಲವಾರು ಕಾರಣಗಳಿಂದ ಸಿದ್ಧಲಿಂಗಯ್ಯನವರ ಸಾಹಿತ್ಯದ ಬೆಳವಣಿಗೆ ಸ್ಥಗಿತಗೊಂಡಂತೆ ವಿರಳಗೊಂಡಂತೆ ಕಂಡುಬರುತ್ತಿದೆ. ಸ್ವಲ್ಪ ಮಟ್ಟಿಗೆ ನಿಷ್ಕ್ರಿಯರಾಗಿರುವಂತೆ ಕಾಣುತ್ತಿದ್ದಾರೆ. ಅಂದು ವೀರಾವೇಷದ ಸಿದ್ಧಲಿಂಗಯ್ಯ ಇಂದೂ ಮೌನಿಯಾದ ಸಿದ್ಧಲಿಂಗಯ್ಯ ಎಂಬ ಮಾತುಕೇಳಿಬರುತ್ತಿದೆ. ಸಿದ್ಧಲಿಂಗಯ್ಯನವರು ಮತ್ತೆ ಕ್ರಿಯಾಶೀಲರಾಗಬೇಕಾಗಿದೆ. ದಲಿತ ಚಳುವಳಿಗೆ ಚೈತನ್ಯ ನೀಡಬೇಕಾಗಿದೆ. ಮತ್ತೊಂದು ಜಾತಿ ವಿನಾಶ ಆಂದೋಲನಕ್ಕೆ ದಲಿತರ ಹೋರಾಟಕ್ಕೆ, ಸಮಸ್ಯೆಗಳ ನಿವಾರಣೆಗಾಗಿ ಸಿದ್ಧಲಿಂಗಯ್ಯನವರು ಮಾತನಾಡಬೇಕಾಗಿದೆ.

ಯಾವುದೇ ಮಹಾಪುರುಷನೊಳಗೂ ಕೂಡ ಪರಿಪೂರ್ಣತೆ ಹುಡುಕುವುದು ಕಷ್ಟ ಸಾಧ್ಯ. ಹಾಗೆಯೇ ಸಿದ್ಧಲಿಂಗಯ್ಯನವರು ಅವರ ಮಿತಿಯೊಳಗೆ ವ್ಯವಸ್ಥೆಯ ವಿರುದ್ಧ ಹೋರಾಡುತ್ತಿದ್ದಾರೆ. ಇಂದಿನ ಯುವಜನತೆ ಅವರ ಸಾಹಿತ್ಯವನ್ನು ಮತ್ತೆ ಮತ್ತೆ ಓದಬೇಕಾಗಿದೆ. ವೈಚಾರಿಕ ನೆಲೆಯನ್ನು ಗುರುತಿಸಿಕೊಂಡು ಆ ಮಾರ್ಗದಲ್ಲಿ ಸಾಗಬೇಕಾಗಿದೆ. ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳು ಮುಂದಿನ ಯುವಜನಾಂಗಕ್ಕೆ ಹೊಸ ಚಿಂತನಕ್ರಮವನ್ನು ಕಟ್ಟಿಕೊಡುತ್ತವೆ. ಸಮಕಾಲೀನ ಚಿಂತನೆಗಳನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯನ್ನು ಮೂಡಿಸುತ್ತವೆ.

ನನ್ನ ಈ ಎಂ.ಫಿಲ್‌ನ ಸಂಶೋಧನ ನಿಬಂಧದಲ್ಲಿ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ನಾಟಕಗಳಲ್ಲಿ ಸಮಕಾಲೀನ ಚಿಂತನೆಗಳು (ಫುಲೆ, ಪೆರಿಯಾರ್, ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ) ಹೇಗೆ ರೂಪುಗೊಂಡಿವೆ, ಅವುಗಳು ಮುಂದಿನ ಜನಾಂಗಕ್ಕೆ ಕೊಡುವ ಆಶಯವೇನು ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ.

* * * * * * *

ಪರಾಮರ್ಶನ ಗ್ರಂಥಗಳು

೧ ಡಾ. ಸಿದ್ಧಲಿಂಗಯ್ಯ – ಮೆರವಣಿಗೆ, ಅಂಕಿತ ಪ್ರಕಾಶನ, ೨೦೦೭.

೨ ಡಾ. ಸಿದ್ಧಲಿಂಗಯ್ಯ – ಏಕಲವ್ಯ, ಅಂಕಿತ ಪ್ರಕಾಶನ, ೨೦೦೩

೩ ಸಂ. ಪ್ರೊ. ಚಂದ್ರಶೇಖರ ಪಾಟೀಲ ಎಸ್.ಮಾಲತಿ – ಸುವರ್ಣ ನಾಟಕ (ಏಕಾಂಕ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬

೪ ಸಂ. ಹೆಚ್. ದಂಡಪ್ಪ – ಬಡವರ ನಗುವಿನ ಶಕ್ತಿ, ಅಂಕಿತ ಪ್ರಕಾಶನ, ೨೦೦೧

೫ ಡಾ॥ ಮೂಡ್ನಾಕೂಡು ಚಿನ್ನಸ್ವಾಮಿ – ಒಂದು ಕೊಡ ಹಾಲಿನ ಸಮರ, ನವಕರ್ನಾಟಕ ಪ್ರಕಾಶನ, ೨೦೦೮

೬ ಡಾ. ಬಿ.ಯು. ಸುಮಾ – ಡಾ.ಬಿ.ಆರ್. ಅಂಬೇಡ್ಕರ್ ವರ್ತಮಾನದೊಂದಿಗೆ ಮುಖಾಮುಖಿ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೮.

೭ ಬಿ. ಗೋಪಾಲ್ – ಸಮಾಜ ಪರಿವರ್ತನಾಕಾರ ಮಹಾತ್ಮ ಜ್ಯೋತಿಬಾ ಫುಲೆ, ಸರ್ವಜನ ಪ್ರಕಾಶನ, ೨೦೧೦

೮ ಡಾ. ಅಪ್ಪಗೆರೆ ಸೋಮಶೇಖರ – ಸುಟ್ಟಾವು ಬೆಳ್ಳಿ ಕಿರಣ, ಪ್ರಸಾದ್ ಏಜೆನ್ಸೀಸ್, ಬೆಂಗಳೂರು, ೨೦೦೬

೧೦ ಸಂ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ – ಪೆರಿಯಾರರ ವಿಚಾರಧಾರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೭

೧೧ (ಮೂಲ ಡಾ. ಅಂಬೇಡ್ಕರ್) ಅನು : ಡಾ. ಕೃಷ್ಣಮೂರ್ತಿ ಚಮರಂ – ಅಧಿಕಾರಕ್ಕಾಗಿ ಸಂಘಟಿತರಾಗಿ, ಪರಿವರ್ತನ ಪ್ರಕಾಶನ, ಮೈಸೂರು, ೨೦೦೩.

೧೨ ಹೆಣ್ಣೂರು ಲಕ್ಷ್ಮೀನಾರಾಯಣ – ಭಾರತದ ಭಾವಿ ಪ್ರಧಾನಿ ಅಕ್ಕಮಾಯಾವತಿ, ಮೂಲ ನಿವಾಸಿ ಶೂದ್ರಾತಿಶೂದ್ರ, ಅಧ್ಯಯನ ಕೇಂದ್ರ, ೨೦೦೭

೧೩ ಸಂ. ಡಾ॥ ಮಲ್ಲಿಕಾ ಘಂಟಿ – ದಲಿತ ಸಾಹಿತ್ಯ ಚಳುವಳಿ, ಕನ್ನಡ ಸಾಹಿತ್ಯ ಅಕಾಡೆಮಿ, ೨೦೦೮,

೧೪ ಡಾ. ಅರವಿಂದ ಮಾಲಗತ್ತಿ – ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೩.

೧೫ ಸಂ. ಚಸರಾ, ಡಾ. ಲಕ್ಷ್ಮೀಪತಿ ಸಿ.ಜಿ – ಮತಾಂತರ ಸತ್ಯಾನ್ವೇಷಣೆ, ಸಂಚಲನ, ಬೆಂಗಳೂರು. ೨೦೦೯.

೧೬ ಡಾ. ಸಿದ್ಧಲಿಂಗಯ್ಯ – ಜನಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೧೭ ಬಿ.ಬಿ. ವೀರಭದ್ರಪ್ಪ – ಧರ್ಮ ಮತ್ತು ವೈಚಾರಿಕತೆ, ನವಕರ್ನಾಟಕ ಪ್ರಕಾಶನ, ೧೯೯೯

೧೮ ಮುರಳಿ ಧರ ಜಗತಾಪ – ಸಮಾಜ ಸುಧಾರಕ ಮಹಾತ್ಮಫುಲೆ, ನವಕರ್ನಾಟಕ ಪ್ರಕಾಶನ, ೧೯೯೭.